ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 1 ಬುಧವಾರ 2023

ಸಂಪುಟ: 43 | ಸಂಚಿಕೆ: 284 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಫೆ.3ರಿಂದ ಕೆ.ಆರ್.ಆಸ್ಪತ್ರೆಯೂ ಸೇರಿದಂತೆ 14 ಕಟ್ಟಡಗಳ ದುರಸ್ತಿ ಕಾರ್ಯ ಆರಂಭ

ಮೈಸೂರು,ಜ.31(ಜಿಎ)–ಮೈಸೂರಿನ ಕೃಷ್ಣರಾಜೇಂದ್ರ ಆಸ್ಪತ್ರೆಯ(ಕೆ.ಆರ್.) ದುರಸ್ತಿ ಕಾಮಗಾರಿ ಇನ್ನೆರಡು ದಿನಗಳಲ್ಲಿ ಆರಂಭವಾಗಲಿದ್ದು, ಈಗಾಗಲೇ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದೆ.

ಕೆ.ಆರ್.ಆಸ್ಪತ್ರೆ, ಚೆಲುವಾಂಬ ಮಕ್ಕಳ ಆಸ್ಪತ್ರೆ, ಪಿಕೆಟಿಬಿ ಆಸ್ಪತ್ರೆ, ಶುಷ್ರೂಷಕಿಯರ ಹಾಸ್ಟೆಲ್ ದುರಸ್ತಿ ಸೇರಿದಂತೆ ಒಟ್ಟು 89 ಕೋಟಿ ರೂ. ವೆಚ್ಚದಲ್ಲಿ 14 ಕಾಮಗಾರಿಗಳು ಶುಕ್ರವಾರ(ಫೆ.3) ಆರಂಭವಾಗಲಿದ್ದು, ಜಿಲ್ಲಾಧಿಕಾರಿಗಳ ನೇತೃತ್ವದ ಪಾರಂಪರಿಕ ಸಮಿತಿ ಸಲಹೆಯಂತೆ ಕಾಮಗಾರಿ ಆರಂಭಗೊಳ್ಳಲಿದೆ. ಸ್ಥಳೀಯ ಜನಪ್ರತಿನಿಧಿಗಳು ಕಾಮಗಾರಿಗೆ ಚಾಲನೆ ನೀಡಲಿದ್ದಾರೆ.

ಕೆ.ಆರ್.ಆಸ್ಪತ್ರೆ, ಮೈಸೂರು ಹಾಗೂ ಸುತ್ತಮುತ್ತಲಿನ ತಾಲೂಕು ಸೇರಿದಂತೆ ಅಕ್ಕಪಕ್ಕದ ಜಿಲ್ಲೆಯ ಜನತೆಗೆ 'ದೊಡ್ಡಾಸ್ಪತ್ರೆ' ಎಂದೇ ಖ್ಯಾತಿ ಪಡೆದಿದೆ. 1050 ಹಾಸಿಗೆಯ ಆಸ್ಪತ್ರೆಯು 1927ರಲ್ಲಿ ಆರಂಭವಾಗಿತ್ತು. ನಿರ್ಮಾಣವಾದಾಗಿನಿಂದಲೂ ಸೂಕ್ತ ನಿರ್ವಹಣೆ ಕಾಣದೆ ದುಸ್ಥಿತಿ ತಲುಪಿತ್ತು. ಆಸ್ಪತ್ರೆಗಳ ದುರಸ್ತಿಗಾಗಿ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಸ್ಥಳೀಯ ಶಾಸಕರಾದ ಎಲ್.ನಾಗೇಂದ್ರ ಮತ್ತು ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಮೂಲಕ ಮುಖ್ಯಮಂತ್ರಿಗಳಿಗೆ ಪ್ರಸ್ತಾವನೆ ಸಲ್ಲಿಸಿತ್ತು. ಅದರಂತೆ ಕಳೆದ ಬಜೆಟ್‌ನಲ್ಲಿಯೇ ಅನುಮೋದಿಸಿ ಅದಕ್ಕೆ ಬೇಕಾಗುವ ಅನುದಾನವನ್ನು ನೀಡಲಾಗಿತ್ತು. ಇತ್ತೀಚೆಗೆ ದುರಸ್ತಿ ಕಾಮಗಾರಿಗೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, 89 ಕೋಟಿ ರೂ. ವೆಚ್ಚದಲ್ಲಿ ಹಂತ ಹಂತವಾಗಿ ದುರಸ್ತಿಯಾಗಲಿದೆ.

ಮೈಸೂರಿನ ಮತ್ತೊಂದು ಪಾರಂಪರಿಕ ಕಟ್ಟಡವಾದ ಮೈಸೂರಿನ ಆಯುರ್ವೇದ ಕಾಲೇಜು ಕಟ್ಟಡವನ್ನು ಈಗಾಗಲೇ ದುರಸ್ತಿಗೊಳಿಸಲಾಗಿದೆ. ಆ ಮಾದರಿಯನ್ನೇ ಅನುಸರಿಸಿ ಕಟ್ಟಡದ ಪಾರಂಪರಿಕತೆಗೆ ಧಕ್ಕೆಯಾಗದಂತೆ ದುರಸ್ತಿಗೊಳಿಸಲಿದ್ದಾರೆ. ಇಲ್ಲಿ ಮಾಡಿದಂತೆ ವಾರ್ಡ್‌ಗಳ ದುರಸ್ತಿ ನಡೆಯುವ ಸಂದರ್ಭದಲ್ಲಿ ಅಲ್ಲಿರುವ ರೋಗಿಗಳನ್ನು ಬೇರೆ ಕಡೆಗೆ ಸ್ಥಳಾಂತರಿಸಿ, ಕಾಮಗಾರಿ ಆರಂಭಿಸಲಿದ್ದಾರೆ. ಈಗಾಗಲೇ ಕೆ.ಆರ್.ಆಸ್ಪತ್ರೆಯ ಸುಟ್ಟ ಗಾಯಗಳ ವಿಭಾಗದ ವಾರ್ಡ್ ಅನ್ನು ಇದೇ ಮಾದರಿಯಲ್ಲಿ ಯಶಸ್ವಿಯಾಗಿ ಅಭಿವೃದ್ಧಿಗೊಳಿಸಲಾಗಿದೆ. ಕಾಮಗಾರಿ ಕಾರಣದಿಂದ ರೋಗಿಗಳ ಚಿಕಿತ್ಸೆಗೆ ಯಾವುದೇ ರೀತಿ ತೊಂದರೆಯಾಗದಂತೆ ಎಚ್ಚರ ವಹಿಸಲು ತೀರ್ಮಾನಿಸಲಾಗಿದೆ.

ಕೆ.ಆರ್. ಆಸ್ಪತ್ರೆಯ ಒಪಿಡಿ ಕಟ್ಟಡ ಶಿಥಿಲಗೊಂಡಿದೆ. ಕಟ್ಟಡದ ಗೋಪುರದ ಕಬ್ಬಿಣವೂ ತುಕ್ಕು ಹಿಡಿದಿದೆ. ಹಲವು ಕಡೆಗಳಲ್ಲಿ ಛಾವಣಿ ಕುಸಿದಿದೆ. ಕೆಲವೆಡೆ ಮಳೆ ಬಂದಾಗ ನೀರು ಸೋರುತ್ತದೆ. ಕಿಟಕಿಗಳು ಮುರಿದು ಬೀಳುವಂತಿವೆ. ಅಲ್ಲದೆ ಇದರ ಪಕ್ಕದಲ್ಲಿರುವ ವಿಶೇಷ ವಾರ್ಡ್ ಶಿಥಿಲಾವಸ್ಥೆ ತಲುಪಿದೆ. ಶೌಚಾಲಯಗಳು ದುಸ್ಥಿತಿಯಲ್ಲಿವೆ. ಎಲ್ಲಾ ಕಟ್ಟಡಗಳ ಛಾವಣಿಯಲ್ಲಿ ಮಳೆ ನೀರು ನಿಲ್ಲುತ್ತಿದ್ದು, ಇದರಿಂದ ಕಟ್ಟಡದ ಮೇಲ್ಛಾವಣಿ ಹಾಗೂ ಗೋಡೆಗಳು ಶಿಥಿಲವಾಗಿವೆ. ಕಟ್ಟಡದ ಬಹುತೇಕ ಕಡೆಗಳಲ್ಲಿ ಗಿಡಗಂಟಿ ಬೆಳೆದುಕೊಂಡಿವೆ. ದುರಸ್ತಿ ಕಾಮಗಾರಿ ಕೈಗೊಳ್ಳುವುದರಿಂದ ಈ ಎಲ್ಲಾ ಸಮಸ್ಯೆಗೂ ಮುಕ್ತಿ ದೊರೆಯಲಿದೆ ಎಂಬ ಆಶಾಭಾವನೆ ಮೈಸೂರು ಜನತೆಯಲ್ಲಿ ಮೂಡಿದೆ.




" ಆಸ್ಪತ್ರೆ ದುರಸ್ತಿ ಕಾಮಗಾರಿಗೆ ಈಗಾಗಲೇ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಬೆಂಗಳೂರು ಮೂಲದವರಿಗೆ ಟೆಂಡರ್ ಆಗಿದೆ. ಅವರು ಹಂತ ಹಂತವಾಗಿ ಕಾಮಗಾರಿ ಆರಂಭಿಸಲಿದ್ದಾರೆ. ಕಟ್ಟಡಕ್ಕೆ ಯಾವುದೇ ಸಮಸ್ಯೆ ಆಗದಂತೆ ಸೂಕ್ಷ್ಮವಾಗಿ ದುರಸ್ತಿ ಕಾರ್ಯ ನಡೆಯಲಿದೆ. **–ಎಲ್.ನಾಗೇಂದ್ರ, ಶಾಸಕ**



" ಇನ್ನೆರಡು ದಿನಗಳಲ್ಲಿ 89 ಕೋಟಿ ರೂ. ವೆಚ್ಚದಲ್ಲಿ ಕೆ.ಆರ್.ಆಸ್ಪತ್ರೆ ಸೇರಿದಂತೆ ಚೆಲುವಾಂಬ ಮಕ್ಕಳ ಆಸ್ಪತ್ರೆ, ಪಿಕೆಟಿಬಿ ಆಸ್ಪತ್ರೆ, ಶುಷ್ರೂಷಕಿಯರ ಹಾಸ್ಟೆಲ್‌ನ ದುರಸ್ತಿ ಕಾಮಗಾರಿಗೆ ಚಾಲನೆ ದೊರೆಯಲಿದೆ. ಧನ್ವಂತರಿ ರಸ್ತೆಯಲ್ಲಿ ಕೆ.ಆರ್.ಆಸ್ಪತ್ರೆಗೆ ಸೇರಿದ ಜಾಗವನ್ನು ಕೆಲವರು ಆಕ್ರಮಿಸಿಕೊಂಡಿದ್ದರು. ಮೂಲ ದಾಖಲೆಗಳನ್ನು ಪರಿಶೀಲಿಸಿ ಅದನ್ನು ವಶಕ್ಕೆ ಪಡೆದುಕೊಂಡಿದ್ದೇವೆ. ಅದನ್ನು ಆಸ್ಪತ್ರೆಗೆ ಅನುಕೂಲವಾಗುವಂತೆ ಬಳಸಿಕೊಳ್ಳಲಿದ್ದೇವೆ.

–ಡಾ.ದಾಕ್ಷಾಯಿಣಿ,
ಡೀನ್ ಮತ್ತು ನಿರ್ದೇಶಕಿ, ಎಂಎಂಸಿಆರ್‌ಐ

ಮಾಜಿ ಕಾನೂನು ಸಚಿವ ಶಾಂತಿ ಭೂಷಣ್ ಇನ್ನಿಲ್ಲ




ನವದೆಹಲಿ: ಕೇಂದ್ರದ ಮಾಜಿ ಕಾನೂನು ಸಚಿವ, ಕಾನೂನು ತಜ್ಞ, 97 ವರ್ಷ ವಯಸ್ಸಿನ ಶಾಂತಿ ಭೂಷಣ್ ಮಂಗಳವಾರ ನಿಧನರಾದರು. ಕೆಲ ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಮೊರಾರ್ಜಿ ದೇಸಾಯಿ ನೇತೃತ್ವದ ಸರ್ಕಾರದಲ್ಲಿ 1977 ರಿಂದ 1979ರವರೆಗೂ ಅವರು ಕಾನೂನು ಸಚಿವರಾಗಿದ್ದರು. ಸಾರ್ವಜನಿಕ ಮಹತ್ವದ ಹಲವು ಪ್ರಕರಣಗಳಲ್ಲಿ ವಕಾಲತ್ತು ವಹಿಸಿದ್ದರು. ಇವರ ಇಬ್ಬರು ಮಕ್ಕಳಾದ ಜಯಂತ್ ಮತ್ತು ಪ್ರಶಾಂತ್ ಭೂಷಣ್ ಅವರೂ ಹೆಸರಾಂತ ವಕೀಲರಾಗಿದ್ದಾರೆ. ಇತ್ತೀಚಿನವರೆಗೂ ಸಕ್ರಿಯರಾಗಿದ್ದ ಅವರು ▶ 9ನೇ ಪುಟಕ್ಕೆ

ಬಡವರ ಸೂರಿಗೆ ಸಹಕಾರಿಯಾಗಿ ಕಾನೂನು ಸರಳೀಕರಣ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ

- ಬಡವರು ಸುಲಭ ರೀತಿ ಮನೆ ನಿರ್ಮಾಣ ಮಾಡಿಕೊಳ್ಳಲು ಅನುಕೂಲ
- ಸೋಮಣ್ಣ ವಸತಿ ಸಚಿವರಾದ ನಂತರ ಮನೆ, ನಿವೇಶನ ಕಲ್ಪಿಸುವಲ್ಲಿ ದಾಖಲೆ





ಬೆಂಗಳೂರು, ಜ.31(ಕೆಎಂಶಿ)– ಬಡವರು ನಿವೇಶನ ಕೊಳ್ಳಲು ಹಾಗೂ ಗೃಹ ನಿರ್ಮಾಣ ಮಾಡಿಕೊಳ್ಳಲು ಅನುಕೂಲವಾಗುವಂತೆ ಕಾನೂನು ಸರಳೀಕರಣ ಮಾಡಲಾಗುವುದು ಎಂದು ಸಿಎಂ ಬಸವರಾಜ ಬೊಮ್ಮಾಯಿ ತಿಳಿಸಿದರು.

ಯಲಹಂಕ ತಾಲೂಕಿನ ಅಗ್ರಹಾರ ಪಾಳ್ಯದಲ್ಲಿ ಒಂದು ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆಯ ಲೋಕಾರ್ಪಣೆ ಮತ್ತು ವಸತಿಗಳ ಹಸ್ತಾಂತರ ಮಾಡಿ ಅವರು ಮಾತನಾಡಿದರು.

ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ಮನೆ ಕಟ್ಟುವುದು ಕಷ್ಟವಾಗಲಿದೆ. ಕಂದಾಯ ಕಾಯ್ದೆಯಲ್ಲಿ ಮನೆ ಕಟ್ಟಲು ನಿರ್ದಿಷ್ಟ ರಿಯಾಯಿತಿಗಳಿಲ್ಲ. ಭೂಮಿ ಬೆಲೆ ಹೆಚ್ಚಾಗಲು ಬೇಡಿಕೆ ಹೆಚ್ಚಾಗಿದೆ ಮತ್ತು ನಾವು ಮಾಡಿರುವ ಕಾನೂನುಗಳಿಂದ ಸಾಮಾನ್ಯ ಜನರು ನಿವೇಶನ ಖರೀದಿ ಮಾಡುವ ಪರಿಸ್ಥಿತಿಯಲ್ಲಿಲ್ಲ ಎಂದರು.

ಮನೆ ಕಟ್ಟಲು ಅವಕಾಶ ಸಿಗುವಂತೆ ಕಾನೂನಿಗೆ ತಿದ್ದುಪಡಿ ತಂದು, ನಿರ್ಬಂಧಗಳನ್ನು ದೂರಮಾಡಿ ನೇರವಾಗಿ ಕೈಗೆಟಕುವ ಬೆಲೆಯಲ್ಲಿ ಜಮೀನು ದೊರೆಯುವ ವ್ಯವಸ್ಥೆಯನ್ನು ಜಾರಿಗೆ ತರಲಾಗುವುದು. ವಸತಿಗಾಗಿಯೇ ಜಮೀನು ಪಡೆಯಲು, ಮನೆ ಕಟ್ಟಲು ಎಲ್ಲಾ ಕಾನೂನನ್ನು ಸರಳೀಕರಣ ಮಾಡಲಾಗುವುದು. ಹಾಗಾದಾಗ ಬಡವರಿಗೆ ಮನೆ ಹಾಗೂ ನಿವೇಶನ ನೀಡಬಹುದು ಎಂದರು. 3 ಲಕ್ಷಕ್ಕಿಂತ ಹೆಚ್ಚು ನಿವೇಶನಗಳನ್ನು ವಸತಿ ಸಚಿವ ವಿ. ಸೋಮಣ್ಣ ಅವರು ರಾಜ್ಯದಲ್ಲಿ ನೀಡಿರುವುದು ದಾಖಲೆ. ಪ್ರಗತಿಪರ ಚಿಂತನೆ ಮಾಡಿದಾಗ ಸಮಸ್ಯೆಗಳಿಗೆ ಪರಿಹಾರ ದೊರೆಯಲಿದೆ. ನಮ್ಮ ಸರ್ಕಾರ ಸಮಸ್ಯೆಯನ್ನು ಬಿಟ್ಟು ಹೋಗುವುದಿಲ್ಲ. ಪರಿಹಾರ ಕೊಟ್ಟು ಜನರಿಗೆ ಎಲ್ಲಾ ರೀತಿಯ ಸೌಲಭ್ಯ ನೀಡುವ ಕೆಲಸ ಮಾಡಲಿದೆ ಎಂದು ಹೇಳಿದರು. ತಾನು ಹಾಗೂ ತನ್ನ ಕುಟುಂಬ ಒಂದು ಸೂರಿನಡಿ ಗೌರವದಿಂದ ಬದುಕಬೇಕೆನ್ನುವುದು ಪ್ರತಿ ಮನುಷ್ಯನ ಆಸೆ. ಮನುಷ್ಯ ಮಾತ್ರವಲ್ಲದೇ ಪಕ್ಷಿಗಳು ಒಂದು ಗೂಡು ಕಟ್ಟಿ, ಸಂಸಾರ ಮಾಡುವುದು ಕಾಣುತ್ತೇವೆ. ಪಕ್ಷಿಗಳಿಗೆ ಇರುವ ಸೌಭಾಗ್ಯ ಮನುಷ್ಯರಿಗೂ ಇರಬೇಕು.

ಬೃಹತ್ ಪ್ರಮಾಣದಲ್ಲಿ ಬೆಳೆಯುತ್ತಿರುವ ನಾಗರಿಕತೆಯಲ್ಲಿ ಬಡವರಿಗೆ ಪುಟ್ಟ ಮನೆ ಕಟ್ಟಿಕೊಡುವ ಅವಕಾಶವನ್ನು ಸಮಾಜ ದೊಡ್ಡ ಪ್ರಮಾಣದಲ್ಲಿ ಮಾಡಬೇಕು. ಸರ್ಕಾರ ಈ ಕೆಲಸ ಮಾಡಬೇಕು ಎಂದರು. ಘೋಷಣೆಗಳು ▶ 9ನೇ ಪುಟಕ್ಕೆ

ಈಗ ಪ್ರತಿಯೊಬ್ಬ ಭಾರತೀಯನ ಆತ್ಮವಿಶ್ವಾಸ ಹೆಚ್ಚಾಗಿದೆ

ಭಾರತದೆಡೆಗೆ ವಿಶ್ವದ ದೃಷ್ಟಿಕೋನ ಬದಲಾಗಿದೆ: ಸಂಸತ್‌ನ ಜಂಟಿ ಅಧಿವೇಶನ ಉದ್ದೇಶಿಸಿ ರಾಷ್ಟ್ರಪತಿ ದ್ರೌಪದಿ ಮುರ್ಮು ಭಾಷಣ

ನವದೆಹಲಿ, ಜ.31–ಇಂದು ಪ್ರತಿಯೊಬ್ಬ ಭಾರತೀಯನ ಆತ್ಮವಿಶ್ವಾಸವು ಹೆಚ್ಚಾಗಿರುವುದು ದೇಶದಲ್ಲಿ ಆಗಿರುವ ಬಹಳ ದೊಡ್ಡ ಬದಲಾವಣೆ, ಭಾರತದ ಕಡೆಗೆ ಪ್ರಪಂಚದ ದೃಷ್ಟಿಕೋನವು ಬದಲಾಗಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ.

ಇಂದು ಸಂಸತ್ತಿನ ಬಜೆಟ್ ಅಧಿವೇಶನ ಆರಂಭವಾಗಿದ್ದು, ಮೊದಲಿಗೆ ಸಂಸತ್ತಿನ ಜಂಟಿ ಅಧಿವೇಶನವನ್ನುದ್ದೇಶಿಸಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ತಮ್ಮ ಚೊಚ್ಚಲ ಭಾಷಣ ಮಾಡಿದರು. ಮುಂದಿನ 25 ವರ್ಷಗಳಲ್ಲಿ ಅಭಿವೃದ್ಧಿ ಹೊಂದಿದ ಭಾರತವನ್ನು ಅದರ ಗತ ವೈಭವಕ್ಕೆ ಹೋಲಿಕೆ ಮಾಡಿ ನೋಡುವಂತೆ ಮತ್ತು ಆಧುನಿಕತೆಯ ಪ್ರತಿ ಸುವರ್ಣ ಅಧ್ಯಾಯವನ್ನು ಒಳಗೊಂಡಿರುವ ಅಭಿವೃದ್ಧಿಯನ್ನು ನೋಡಲು ಜನರು ತಮ್ಮ ಪರಿಶ್ರಮ ಹಾಕಬೇಕೆಂದು ಹೇಳಿದರು.

ಭಾರತ ಸ್ವಾತಂತ್ರ್ಯದ ಶತಮಾನೋತ್ಸವ ಇನ್ನು 25 ವರ್ಷಗಳಲ್ಲಿ ಬರಲಿದ್ದು,



ಈ 25 ವರ್ಷಗಳು 'ಅಮೃತ ಕಾಲ' ಆತ್ಮನಿರ್ಭರ್ (ಸ್ವಾವಲಂಬಿ) ಮತ್ತು ಅದರ ಮಾನವೀಯ ಜವಾಬ್ದಾರಿಗಳನ್ನು ಪೂರೈಸುವ ಭಾರತವನ್ನು ನಿರ್ಮಿಸುವ ಸಮಯವಾಗಿದೆ ಎಂದು ಹೇಳಿದರು. ಬಡತನವಿಲ್ಲದ ಮತ್ತು ಶ್ರೀಮಂತ, ಮಧ್ಯಮ ವರ್ಗದ ಭಾರತವಾಗಿರುತ್ತದೆ. ಇಲ್ಲಿನ ಯುವಕರು ಮತ್ತು ಮಹಿಳೆಯರು ರಾಷ್ಟ್ರವನ್ನು ಮಾರ್ಗದರ್ಶಿಸುವ ಮುಂಚೂಣಿಯಲ್ಲಿದ್ದಾರೆ ಎಂದು ರಾಷ್ಟ್ರಪತಿಗಳು ಕೊಂಡಾಡಿದರು. ▶ 9ನೇ ಪುಟಕ್ಕೆ

ಇಂದು ಕೇಂದ್ರ ಬಜೆಟ್

ನವದೆಹಲಿ: ಕೇಂದ್ರದ 2023–24ನೇ ಸಾಲಿನ ಬಜೆಟ್ ಅನ್ನು ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ನಾಳೆ(ಫೆ.1) ಮಂಡಿಸಲಿದ್ದಾರೆ.

ಮುಂದಿನ ವರ್ಷ ಲೋಕಸಭಾ ಚುನಾವಣೆ ನಡೆಯಲಿದ್ದು, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಕೊನೆಯ ಪೂರ್ಣ ಪ್ರಮಾಣದ ಬಜೆಟ್ ಇದಾಗಿರಲಿದೆ. ಈ ಹಿನ್ನೆಲೆಯಲ್ಲಿ ಜನಪ್ರಿಯ ಬಜೆಟ್ ಮಂಡಿಸುವ ಸಾಧ್ಯತೆ ದಟ್ಟವಾಗಿದೆ. ಭಾರತದ ಜಿಡಿಪಿ ಬೆಳವಣಿಗೆಯನ್ನು 2023–24ನೇ ಸಾಲಿಗೆ ಶೇ.6ರಿಂದ 6.8ರಷ್ಟು ಅಂದಾಜಿಸುವ ಸಾಧ್ಯತೆ ಇದೆ ಎಂದು ವಿಶ್ಲೇಷಿಸಲಾಗಿದೆ.

ಉಭಯ ಸದನಗಳ ಜಂಟಿ ಅಧಿವೇಶನವನ್ನು ಉದ್ದೇಶಿಸಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಚೊಚ್ಚಲ ಭಾಷಣದೊಂದಿಗೆ ಸಂಸತ್ತಿನ ಬಜೆಟ್ ಅಧಿವೇಶನ ಇಂದಿನಿಂದ ಆರಂಭವಾಗಿದ್ದು, ಫೆ.14ಕ್ಕೆ ಅಧಿವೇಶನ ಮುಕ್ತಾಯವಾಗಲಿದೆ. ಮಾ.12ರಿಂದ ಬಜೆಟ್ ಅಧಿವೇಶನದ ಚರ್ಚೆಯ ಎರಡನೆಯ ಕಂತು ಆರಂಭವಾಗಲಿದೆ.

ಕಾಂಗ್ರೆಸ್‌ನೊಂದಿಗೆ ಕೈ ಜೋಡಿಸಿದ್ದಕ್ಕೆ ದೇವೇಗೌಡರು, ನಿಖಿಲ್‌ಗೆ ಸೋಲಾಯಿತು

- ಮಾಜಿ ಸಿಎಂ ಕುಮಾರಸ್ವಾಮಿ ವಾಗ್ದಾಳಿ
- ದೇವೇಗೌಡರು, ಸಿದ್ದರಾಮಯ್ಯರ ಡಿಸಿಎಂ ಮಾಡಿದ್ರು; ಸಿಎಂ ಆಗಲು ಅವರು ಕಾಂಗ್ರೆಸ್‌ಗೆ ಹೋದರು

ಬೆಂಗಳೂರು, ಜ.31(ಕೆಎಂಶಿ)– ಕಾಂಗ್ರೆಸ್ ಬೆಂಬಲ ನೀಡದಿದ್ದಕ್ಕೆ ನಿಖಿಲ್ ಕುಮಾರಸ್ವಾಮಿ, ಮಾಜಿ ಪ್ರಧಾನಿ ದೇವೇಗೌಡರು ಚುನಾವಣೆಯಲ್ಲಿ ಸೋತರು ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ತಿಳಿಸಿದ್ದಾರೆ.

ಪಂಚರತ್ನ ರಥಯಾತ್ರೆ ಸಂದರ್ಭದಲ್ಲಿ ಮಾತನಾಡಿದ ಅವರು, ಕಳೆದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಜತೆ ಹೊಂದಾಣಿಕೆ ಮಾಡಿಕೊಳ್ಳದೇ ಹೋಗಿದ್ದರೆ ನಾವು ತುಮಕೂರು, ಮಂಡ್ಯ ಸೇರಿದಂತೆ ಇನ್ನೂ 4 ಕ್ಷೇತ್ರದಲ್ಲಿ ಗೆಲುವು ಸಾಧಿಸುತ್ತಿದ್ದೆವು. ಕಾಂಗ್ರೆಸ್ ಜತೆ ಕೈಜೋಡಿಸಿದ್ದು, ನಮ್ಮ ಸಾಂಪ್ರದಾಯಿಕ ಮತದಾರರಿಗೆ ಇಷ್ಟವಾಗಲಿಲ್ಲ. ಇದರಿಂದ ಭಾರೀ ಹಿನ್ನಡೆಯಾಯಿತು ಎಂದು ತಿಳಿಸಿದ್ದಾರೆ.

ಸಿದ್ದರಾಮಯ್ಯರನ್ನು ಉಪ ಮುಖ್ಯಮಂತ್ರಿ ಮಾಡಿದ್ದು ದೇವೇಗೌಡರು. ಮುಖ್ಯಮಂತ್ರಿ ಆಗೋಕೆ ಮಾತ್ರ ಸಿದ್ದರಾಮಯ್ಯ ಕಾಂಗ್ರೆಸ್‌ಗೆ ಹೋಗಿದ್ದಾರೆ. 30 ವರ್ಷದಿಂದ ನಮಗೆ ಕುಟುಂಬ ರಾಜಕಾರಣದ ಲೇಬಲ್ ಕೊಟ್ಟಿದ್ದಾರೆ ಎಂದು ಅವರು ವಾಗ್ದಾಳಿ ನಡೆಸಿದ್ದಾರೆ.



ವರುಣಾದಲ್ಲಿ ತಮ್ಮ ಪುತ್ರನ ಭವಿಷ್ಯಕ್ಕಾಗಿ ಸಿದ್ದರಾಮಯ್ಯ ಹೊರಗೆ ಹೋಗುತ್ತಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮುಖ್ಯಮಂತ್ರಿಯಾಗಲು ಬರೋಕೆ ಆಗಲ್ಲ. ಹಾಗಾಗಿ ಪುತ್ರನ ತರುತ್ತಿದ್ದಾರೆ. ಅದೇ ರೀತಿ ಯಡಿಯೂರಪ್ಪ, ಕೆ.ಎಸ್.ಈಶ್ವರಪ್ಪಾಗೂ ಅವರ ಮಕ್ಕಳ ಬಗ್ಗೆಯೇ ಚಿಂತೆ. ಅಕ್ರಮ ಗಣಿಗಾರಿಕೆ ಹೊರಗೆ ಬರುವುದಕ್ಕೆ ಕುಮಾರಸ್ವಾಮಿಯೇ ಕಾರಣ. ನನ್ನ ವಿರುದ್ಧ 150 ಕೋಟಿ ಆರೋಪ ಮಾಡಿದವರು ಎಲ್ಲಿಗೆ ಹೋದರು ಜನಾರ್ದನ ರೆಡ್ಡಿ ಪಕ್ಷದಿಂದ ಜೆಡಿಎಸ್ ಪಕ್ಷಕ್ಕೆ ಯಾವುದೇ ಸಮಸ್ಯೆ ಇಲ್ಲ. ಎಲ್ಲಿ ಬೇಕಾದರೂ ಸ್ಪರ್ಧೆ ಮಾಡೋಕೆ ನನ್ನದು ಟೂರಿಂಗ್ ಟಾಕೀಸ್ ಅಲ್ಲ. ಸಿದ್ದರಾಮಯ್ಯ ಒಂದು ಸುರಕ್ಷಿತ ಕ್ಷೇತ್ರ ಹುಡುಕಲು ಆಗುತ್ತಿಲ್ಲ. ಮುಖ್ಯಮಂತ್ರಿ ಆದವರು, ಹದಿಮೂರು ಬಾರಿ ಬಜೆಟ್ ಮಂಡಿಸಿದವರು ಎಂದು ಟೀಕಿಸಿದ್ದಾರೆ.

ಇನ್ನೊಂದು ವಾರದಲ್ಲಿ ಜೆಡಿಎಸ್ ಅಭ್ಯರ್ಥಿಗಳ 2ನೇ ಪಟ್ಟಿ ಬಿಡುಗಡೆ ಮಾಡುತ್ತೇವೆ. ಮುಂದಿನ ದಿನಗಳಲ್ಲಿ 2 ರಾಷ್ಟ್ರೀಯ ಪಕ್ಷಗಳನ್ನು ರಾಜ್ಯದ ಜನ ತಿರಸ್ಕಾರ ಮಾಡಲಿದ್ದಾರೆ. 2018ರಲ್ಲಿ ಕಾಂಗ್ರೆಸ್ ಷರತ್ತು ಹಾಕಿ ಅಧಿಕಾರ ನೀಡಿತ್ತು. ಆದರೆ, ಸ್ವತಂತ್ರವಾಗಿ ಅಧಿಕಾರ ನಡೆಸಲು ಕಾಂಗ್ರೆಸ್ ನಾಯಕರು ನನಗೆ ಬಿಡಲಿಲ್ಲ. ಸಮ್ಮಿಶ್ರ ಸರ್ಕಾರವಿದ್ದರೆ ಬಡತನವನ್ನು ಹೋಗಲಾಡಿಸಲು ಸಾಧ್ಯವಿಲ್ಲ. ಎರಡೂ ಪಕ್ಷದ ಜೊತೆಗೆ ಸಮ್ಮಿಶ್ರ ಸರ್ಕಾರ ಮಾಡಿ ಅನುಭವ ಇದೆ. ಈಗಿರೋದು 2006ರ ಬಿಜೆಪಿ ಅಲ್ಲ, ರಾಷ್ಟ್ರ ನಾಯಕರ ಶಕ್ತಿ ಇರುವ ಬಿಜೆಪಿ. 2018ರಲ್ಲಿ ಕಾಂಗ್ರೆಸ್ ಜೊತೆ ಹೋಗಿದ್ದಕ್ಕೆ ಗುಲಾಮನಾಗಿರುವ ಹಾಗೆ ಆಯ್ತು. ಸಿದ್ದರಾಮಯ್ಯ ಅಧಿಕಾರ ಹೋದರೂ ನನಗೆ ಮನೆ ಬಿಟ್ಟು ಕೊಡಲಿಲ್ಲ. ಸಮ್ಮಿಶ್ರ ಸರ್ಕಾರ ಮಾಡಿ ಕಾಂಗ್ರೆಸ್‌ನವರು ಕುತ್ತಿಗೆ ಕೊಯ್ದರು ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ವಿಧಾನಸಭೆ ಚುನಾವಣೆ ಸಿದ್ಧತೆ ಹಿನ್ನೆಲೆ ಅಧಿಕಾರಿಗಳ 'ಎತ್ತಂಗಡಿ' ಮಾಡಿ


- ರಾಜ್ಯ ಸರ್ಕಾರಕ್ಕೆ ಚುನಾವಣಾ ಆಯೋಗ ಸೂಚನೆ
- ಶಾಲಾ–ಕಾಲೇಜು ಪರೀಕ್ಷೆಗಳ ಮಾರ್ಚ್ ಅಂತ್ಯಕ್ಕೆ ಮುಗಿಸಲು ಸಲಹೆ

ಬೆಂಗಳೂರು, ಜ.31(ಕೆಎಂಶಿ)–ದೀರ್ಘ ಕಾಲದಿಂದ ಒಂದೇ ಸ್ಥಳದಲ್ಲಿ ಬೇರು ಬಿಟ್ಟಿರುವ ಅಧಿಕಾರಿ ಮತ್ತು ನೌಕರರನ್ನು ಎತ್ತಂಗಡಿ ಮಾಡಲು ಕೇಂದ್ರ ಚುನಾವಣಾ ಆಯೋಗ ರಾಜ್ಯ ಸರ್ಕಾರಕ್ಕೆ ಸೂಚನೆ ನೀಡಿದೆ. ರಾಜ್ಯ ವಿಧಾನಸಭೆಗೆ ಮೇ ತಿಂಗಳಲ್ಲಿ ಚುನಾವಣೆ ನಡೆಸಲು ಪೂರ್ವ ಸಿದ್ಧತೆ ಆರಂಭಿಸಿರುವ ಆಯೋಗವು ಒಂದೇ ಸ್ಥಳದಲ್ಲಿ ಮೂರು ವರ್ಷಕ್ಕಿಂತಲೂ ಹೆಚ್ಚು ಹಾಗೂ ತವರು ಕ್ಷೇತ್ರ ಮತ್ತು ಜಿಲ್ಲೆಗಳಲ್ಲಿರುವ ಅಧಿಕಾರಿ ಮತ್ತು ನೌಕರರನ್ನು ತಕ್ಷಣವೇ ವರ್ಗಾವಣೆ ಮಾಡುವಂತೆ ನಿರ್ದೇಶಿಸಿತ್ತು.

ಆಯೋಗದ ಸೂಚನೆಯಂತೆ ಸ್ವಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಐಎಎಸ್, ಐಪಿಎಸ್, ಕೆಎಎಸ್ ಅಧಿಕಾರಿಗಳನ್ನು ಗುರುತಿಸಿ ಬೇರೆ ಜಿಲ್ಲೆಗಳಿಗೆ ವರ್ಗಾಯಿಸಲಾಗುತ್ತಿದೆ. ಕಳೆದ ಕೆಲವು ದಿನಗಳಿಂದ ನಿರಂತರವಾಗಿ ಇಂತಹ ಅಧಿಕಾರಿಗಳನ್ನು ಪತ್ತೆ ಹಚ್ಚಿ ವರ್ಗಾವಣೆ ಮಾಡುತ್ತಿರುವ ಸರ್ಕಾರ ಇದೀಗ ಸಿ ಮತ್ತು ಡಿ ದರ್ಜೆಯ ನೌಕರರು ಸ್ವಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದರೆ, ಪಕ್ಕದ ತಾಲೂಕುಗಳಿಗೆ ವರ್ಗಾವಣೆ ಮಾಡಲಾಗುವುದು. ಮುಕ್ತ, ಶಾಂತಿಯುತ ಮತ್ತು ನ್ಯಾಯಸಮ್ಮತ ಚುನಾವಣೆ ನಡೆಸಲು ಆಯೋಗ ಡಿಸೆಂಬರ್‌ನಲ್ಲೇ ರಾಜ್ಯ ಸರ್ಕಾರಕ್ಕೆ ▶ 9ನೇ ಪುಟಕ್ಕೆ

ಮೈಸೂರು ವನ್ಯಜೀವಿ ಉಪ ವಿಭಾಗದಲ್ಲಿ 'ಚಿರತೆ ಟಾಸ್ಕ್ ಫೋರ್ಸ್' ರಚನೆ

- ಉಪ ಅರಣ್ಯ ಸಂರಕ್ಷಣಾಧಿಕಾರಿ ನೇತೃತ್ವ
- 58 ಮಂದಿ ಸಿಬ್ಬಂದಿ ಒಳಗೊಂಡಿದೆ



ಮೈಸೂರು, ಜ.31(ಆರ್‌ಕೆಬಿ)–ಮೈಸೂರು ವೃತ್ತದ ಮೈಸೂರು, ನಂಜನಗೂಡು, ಹೆಚ್.ಡಿ.ಕೋಟೆ, ಸರಗೂರು, ತಿ.ನರಸೀಪುರ, ಮಂಡ್ಯ, ಪಾಂಡವಪುರ, ನಾಗಮಂಗಲ ವ್ಯಾಪ್ತಿಯಲ್ಲಿ ಚಿರತೆ ಹಾವಳಿ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಚಿರತೆ ಟಾಸ್ಕ್ ಫೋರ್ಸ್ ರಚಿಸಲು ಉದ್ದೇಶಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಕಳೆದ ಮೂರು ವರ್ಷಗಳಲ್ಲಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಚಿರತೆಗಳು ಗ್ರಾಮದ ಅಕ್ಕಪಕ್ಕದ ಜಮೀನಿನ ಮನೆಗಳಲ್ಲಿರುವ ಹಸು, ಕುರಿ, ನಾಯಿ ಹಾಗೂ ಮಾನವ ಬಲಿ ಪಡೆಯುತ್ತಿರುವ ಪ್ರಕರಣಗಳು ಹೆಚ್ಚುತ್ತಿವೆ. ಈ ಹಿನ್ನೆಲೆಯಲ್ಲಿ ಚಿರತೆ ಟಾಸ್ಕ್ ಫೋರ್ಸ್ ರಚಿಸಲಾಗುತ್ತಿದೆ. ಚಿರತೆ ಹಾವಳಿ ನಿಭಾಯಿಸುವ ನಿಟ್ಟಿನಲ್ಲಿ ಮೈಸೂರು ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಮೈಸೂರು ಪ್ರಾದೇಶಿಕ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ನೇತೃತ್ವದಲ್ಲಿ ರಚಿಸಿರುವ ಟಾಸ್ಕ್ ಫೋರ್ಸ್‌ನಲ್ಲಿ ಒಬ್ಬ ವಲಯ ಅರಣ್ಯ ಅಧಿಕಾರಿ, 4 ಉಪ ವಲಯ ಅರಣ್ಯ ಅಧಿಕಾರಿ, 8 ಗಸ್ತು ಅರಣ್ಯಪಾಲಕರು, 40 ಮಂದಿ ಟಾಸ್ಕ್ ಫೋರ್ಸ್ ಸಹಾಯಕರು, 5 ವಾಹನ ಚಾಲಕರು ಸೇರಿದಂತೆ 58 ಮಂದಿ ಈ ಟಾಸ್ಕ್‌ಫೋರ್ಸ್‌ನಲ್ಲಿದ್ದಾರೆ. ತಂಡವು ಮೈಸೂರು ವೃತ್ತದ ಅರಣ್ಯ ಸಂರಕ್ಷಣಾಧಿಕಾರಿಗಳ ಒಟ್ಟಾರೆ ನೇತೃತ್ವ ಮತ್ತು ನಿರ್ದೇಶನದಡಿ ಕಾರ್ಯನಿರ್ವಹಿಸಲಿದೆ. ಉಪವಲಯ ಅರಣ್ಯಾಧಿಕಾರಿ ನೇತೃತ್ವದಲ್ಲಿ ▶ 9ನೇ ಪುಟಕ್ಕೆ

ಕಳ್ಳತನ ತಡೆಗೆ ಹೈವೇ ಪೆಟ್ರೋಲಿಂಗ್ ಆರಂಭ



ಮೈಸೂರು,ಜ.31(ಆರ್‌ಕೆ)–ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇಯಲ್ಲಿ ಖದೀಮರ ಹಾವಳಿ ತಡೆಗಟ್ಟಲು ಹೈವೇ ಪೆಟ್ರೋಲಿಂಗ್ ಕಾರ್ಯಾಚರಣೆ ಆರಂಭಿಸಲಾಗಿದೆ ಎಂದು ಸಂಸದ ಪ್ರತಾಪ್ ಸಿಂಹ ತಿಳಿಸಿದ್ದಾರೆ.

ದಶಪಥ ರಾಷ್ಟ್ರೀಯ ಹೆದ್ದಾರಿಯಲ್ಲಿ ರಸ್ತೆ ಬಳಕೆದಾರರ ಸುರಕ್ಷತೆಗಾಗಿ ಅಳವಡಿಸಿರುವ ಕಬ್ಬಿಣದ ಬ್ಯಾರಿಕೇಡ್‌ಗಳು, ವಿಭಜಕದ ಫೆನ್ಸಿಂಗ್‌ಗಳು, ನೀರು ಹರಿದು ಹೋಗಲು ಹಾಕಿರುವ ಪೈಪ್‌ಗಳು ಹಾಗೂ ಇನ್ನಿತರ ಸಲಕರಣೆಗಳನ್ನು ದುಷ್ಕರ್ಮಿಗಳು ಕಳ್ಳತನ ಮಾಡುತ್ತಿದ್ದು, ಇದರಿಂದ ಪ್ರಯಾಣಿಕರಿಗೆ ಅಪಾಯ ಸಂಭವಿಸುವ ಸಾಧ್ಯತೆ ಇದೆ ಎಂದರು.

ಸಾರ್ವಜನಿಕರ ಅನುಕೂಲಕ್ಕಾಗಿ ಸಾವಿರಾರು ಕೋಟಿ ರೂ. ವೆಚ್ಚ ಮಾಡಿ ರಸ್ತೆ ನಿರ್ಮಿಸಿ ಸುರಕ್ಷತೆಗಾಗಿ ಮಾಡಿರುವ ವ್ಯವಸ್ಥೆಯನ್ನೇ ಹಾಳು ಮಾಡುವವರ ಹತ್ತಿಕ್ಕಲು ಹೈವೇ ಪೆಟ್ರೋಲಿಂಗ್ ಕಾರ್ಯ ಆರಂಭಿಸಲಾಗಿದ್ದು, ಮೈಸೂರು–ಬೆಂಗಳೂರು ನಡುವೆ ದಶಪಥ ಹೆದ್ದಾರಿಯಲ್ಲಿ ರಾತ್ರಿ ವೇಳೆ ಗಸ್ತು ನಡೆಸಲಿರುವ ವಾಹನಗಳು, ಕಳ್ಳರ ಮೇಲೆ ನಿಗಾ ವಹಿಸುತ್ತಿವೆ ಎಂದು ಪ್ರತಾಪ್ ಸಿಂಹ ತಿಳಿಸಿದರು.

ಅಲ್ಲದೇ ಪ್ರತೀ 500 ಮೀಟರ್‌ಗೊಂದರಂತೆ ರಸ್ತೆಯ ಎರಡೂ ಕಡೆ ಸಿಸಿ ಕ್ಯಾಮರಾ ಅಳವಡಿಸಿ ಇಂಟಲಿಜೆಂಟ್ ಹೈವೇ ಇನ್‌ಪರ್ಮೇಷನ್ ಅಂಡ್ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸಿಸ್ಟಂ (ಐಹೆಚ್‌ಐ–ಟಿಎಂಎಸ್) ಅನ್ನು ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ಜಾರಿಗೊಳಿಸುವ ಬಗ್ಗೆ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಇದರಿಂದ ಕಳ್ಳತನ, ಅಪಘಾತಗಳಂತಹ ಕೃತ್ಯಗಳನ್ನು ನಿಯಂತ್ರಿಸಬಹುದಾಗಿದೆ. ಪ್ರಸ್ತಾವನೆಗೆ ಅನುಮೋದನೆ ಸಿಗುತ್ತಿದ್ದಂತೆಯೇ ಟೆಂಡರ್ ಕರೆದು ಯೋಜನೆ ಜಾರಿಗೊಳಿಸುತ್ತೇವೆ ಎಂದರು.

ಸುಳ್ಳು ಜಾತಿ ಪ್ರಮಾಣ ಪತ್ರ ಸಲ್ಲಿಸಿ ಸೇವೆಗೆ ಸೇರ್ಪಡೆ, ಪದೋನ್ನತಿ ಪಡೆದ ಆರೋಪ

ನ್ಯಾಯಾಂಗ ತನಿಖೆಗೆ ದಲಿತ ವೆಲ್‌ಫೇರ್ ಟ್ರಸ್ಟ್ ಒತ್ತಾಯ



ಮೈಸೂರು,ಜ.31(ಪಿಎಂ)– ಮೈಸೂರು ವಿವಿ ಪ್ರಾಧ್ಯಾಪಕಿ ಪ್ರೊ.ಎಂ.ಎಸ್.ಸಪ್ನ ಸುಳ್ಳು ಜಾತಿ ಪ್ರಮಾಣ ಪತ್ರ ಸಲ್ಲಿಸಿ ಮೈಸೂರು ವಿವಿಯಲ್ಲಿ ಉಪನ್ಯಾಸಕಿಯಾಗಿ ಸೇವೆಗೆ ಸೇರಿ, ಜೊತೆಗೆ ಪದೋನ್ನತಿ ಸೌಲಭ್ಯಗಳನ್ನೂ ಪಡೆದಿದ್ದಾರೆ ಎಂದು ಆರೋಪಿಸಿರುವ ಕರ್ನಾಟಕ ದಲಿತ ವೆಲ್‌ಫೇರ್ ಟ್ರಸ್ಟ್, ಈ ಸಂಬಂಧ ನ್ಯಾಯಾಂಗ ತನಿಖೆಗೆ ಒತ್ತಾಯಿಸಿದೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಟ್ರಸ್ಟ್ ಅಧ್ಯಕ್ಷ ಶಾಂತರಾಜು, ಮೈಸೂರಿನ ಸಿದ್ಧಾರ್ಥನಗರದ ನಿವಾಸಿ ಪ್ರೊ.ಎಂ.ಎಸ್. ಸಪ್ನ, 2003ರಲ್ಲಿ ಮೈಸೂರು ವಿವಿಗೆ 'ನಾಯಕ–ಪರಿಶಿಷ್ಟ ಪಂಗಡ' ಎಂಬ ಸುಳ್ಳು ಜಾತಿ ಪ್ರಮಾಣಪತ್ರ ಸಲ್ಲಿಸಿ, ವಿವಿಯ ಪತ್ರಿಕೋದ್ಯಮ ವಿಭಾಗದಲ್ಲಿ ಉಪನ್ಯಾಸಕಿಯಾಗಿ ಸೇವೆ ಸೇರಿದ್ದಾರೆ. ಆದರೆ ಅಂದು ನಾಯಕ ಜನಾಂಗವು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿತ್ತು. ಆದಾಗ್ಯೂ ಇವರು ನಾಯಕ ಜನಾಂಗಕ್ಕೆ ಅಂದು ಪರಿಶಿಷ್ಟ ಪಂಗಡದ ಪ್ರಮಾಣ ಪತ್ರ ಪಡೆದು ಹುದ್ದೆ ಪಡೆದಿದ್ದಾರೆ ಎಂದು ಆರೋಪಿಸಿದರು.

ತದನಂತರ ಕಾನೂನುಬಾಹಿರವಾಗಿ ಸಹಾಯಕ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು, ಪ್ರಾಧ್ಯಾಪಕರ ಹುದ್ದೆಗಳಿಗೆ ಪದೋನ್ನತಿ ಪಡೆದು, ಇದೀಗ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥೆ ಹುದ್ದೆಯನ್ನು ಅಲಂಕರಿಸಿದ್ದಾರೆ. ಆ ಮೂಲಕ ಸರ್ಕಾರ ಮತ್ತು ವಿವಿಗೆ ವಂಚಿಸಿದ್ದಾರೆ ಎಂದು ದೂರಿದರು. ಕೆಎಸ್‌ಆರ್‌ಟಿಸಿ ಎಸ್‌ಸಿ–ಎಸ್‌ಟಿ ಯೂನಿಯನ್‌ನ ರಾಜ್ಯ ಪ್ರಧಾನ ಕಾರ್ಯದರ್ಶಿ ರೇವಣ್ಣ, ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಿಕ್ಕಅನ್ನದಾನಿ, ಲೇಖಕ ಸಿದ್ದಸ್ವಾಮಿ ಸುದ್ದಿಗೋಷ್ಠಿಯಲ್ಲಿದ್ದರು.

'ಗಾಂಧಿ ಸದ್ಭಾವನ ಪ್ರಶಸ್ತಿ' ಪ್ರದಾನ



ಮೈಸೂರು, ಜ.31(ಎಂಕೆ)– ಅದಮ್ಯ ರಂಗಶಾಲೆ ವತಿಯಿಂದ ದೇವರಾಜ ಉಪವಿಭಾಗದ ಎಸಿಪಿ ಎಂ.ಎನ್.ಶಶಿಧರ್, ಕ್ರೆಡಿಟ್ ಐ ಸಂಸ್ಥೆ ವ್ಯವಸ್ಥಾಪಕ ಟ್ರಸ್ಟಿ ಎಂ.ಪಿ. ವರ್ಷ ಹಾಗೂ ಜಿಲ್ಲಾ ಸರ್ಕಾರಿ ನೌಕರರ ಸಂಘದ ಮಾಜಿ ಉಪಾಧ್ಯಕ್ಷ ಎನ್.ಸಿ. ಉಮೇಶ್ ಅವರಿಗೆ 'ಗಾಂಧಿ ಸದ್ಭಾವನ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಮೈಸೂರಿನ ಜಯಲಕ್ಷ್ಮಿಪುರಂನಲ್ಲಿರುವ ಶ್ರೀ ವಿವೇಕಾನಂದ ಪದವಿ ಪೂರ್ವ ಕಾಲೇಜಿನ ಶ್ರೀ ಕುವೆಂಪು ರಂಗಮಂದಿರದಲ್ಲಿ ಆಯೋಜಿಸಿದ್ದ 'ಪಂಚತಂತ್ರ' ನಾಟಕ ಪ್ರದರ್ಶನ ಹಾಗೂ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಕುವೆಂಪು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ.ಕೆ.ಚಿದಾನಂದಗೌಡ ಪ್ರಶಸ್ತಿ ಪ್ರದಾನ ಮಾಡಿದರು.

ಬಳಿಕ ಮಾತನಾಡಿದ ಅವರು, ಸಮಾಜಮುಖಿಗಳಾಗಿ ಜೀವನ ನಡೆಸುವವರಿಗೆ 'ಗಾಂಧಿ ಸದ್ಭಾವನ ಪ್ರಶಸ್ತಿ' ನೀಡಿ ಗೌರವಿಸಲಾಗಿದೆ. ನಾವುಗಳು ಮಹಾತ್ಮ ಗಾಂಧೀಜಿಯವರ ಸತ್ಯದ ದಾರಿಯಲ್ಲಿ ಸಾಗಬೇಕು. ಭಾರತದಲ್ಲಿ ಮಾತ್ರವಲ್ಲದೆ ವಿಶ್ವದ ಎಲ್ಲಾ ರಾಷ್ಟ್ರಗಳಲ್ಲಿಯೂ ಗೌರವಿಸುವ ವ್ಯಕ್ತಿಗಳಲ್ಲಿ ಗಾಂಧೀಜಿಯವರು ಒಬ್ಬರಾಗಿದ್ದಾರೆ. ಅವರ ಸ್ಮರಣೆ ಸದಾ ಇರಬೇಕು ಎಂದರಲ್ಲದೆ ಮಕ್ಕಳಲ್ಲಿ ನಾಟಕಗಳ ಮೂಲಕ ಜೀವನ ಮೌಲ್ಯಗಳನ್ನು ತಿಳಿಸಬೇಕು ಎಂದು ಸಲಹೆ ನೀಡಿದರು.

ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕರೆ ಗೋಪಾಲ್, ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸ್ಪಂದನ ಸಾಂಸ್ಕೃತಿಕ ಪರಿಷತ್ ಅಧ್ಯಕ್ಷ ಟಿ.ಸತೀಶ್ ಜವರೇಗೌಡ, ಅದಮ್ಯ ರಂಗಶಾಲೆ ಕಾರ್ಯದರ್ಶಿ ಚಂದ್ರ ಮಂಡ್ಯ, ಮತ್ತಿತರರು ಉಪಸ್ಥಿತರಿದ್ದರು.

ಬಿಜೆಪಿ ನಾಯಕರ ಟೀಕಿಸುವ ಮುನ್ನ ಎಂಎಲ್‌ಸಿ ಪದವಿ ತೊರೆಯಿರಿ

ಎ.ಹೆಚ್.ವಿಶ್ವನಾಥ್‌ಗೆ ಬಿಜೆಪಿ ವಕ್ತಾರರ ಆಗ್ರಹ

ಮೈಸೂರು, ಜ.31(ಎಂಟಿವೈ)– ಬಿಜೆಪಿ ನಾಯಕರನ್ನು ಟೀಕಿಸುವ ಮುನ್ನ ಎಂಎಲ್ಸಿ ಅಡಗೂರು ಹೆಚ್.ವಿಶ್ವನಾಥ್ ಅವರು ಬಿಜೆಪಿಯಿಂದ ನಾಮನಿರ್ದೇಶಿತವಾಗಿರುವ ವಿಧಾನಪರಿಷತ್ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಲಿ ಎಂದು ಬಿಜೆಪಿ ನಗರ ವಕ್ತಾರ ಎಂ.ಎ.ಮೋಹನ್ ಒತ್ತಾಯಿಸಿದ್ದಾರೆ.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜಕಾರಣಿಗಳಿಗೆ ಆದರ್ಶದ ಮಾತುಗಳನ್ನಾಡುವ ಎ. ಹೆಚ್.ವಿಶ್ವನಾಥ್ ಅವರು ತಮ್ಮ ಹಾಗೂ ತಮ್ಮ ಮಗನ ರಾಜಕೀಯ ಭವಿಷ್ಯಕ್ಕಾಗಿ ಬಿಜೆಪಿ ನಾಯಕರನ್ನು ಟೀಕಿಸಲಾರಂಭಿಸಿದ್ದಾರೆ. ಅವರಿಗೆ ಬಿಜೆಪಿ ಅಪಥ್ಯವಾಗಿದ್ದರೆ ಬಿಜೆಪಿಯಿಂದ ನಾಮನಿರ್ದೇಶನಗೊಂಡು ಪಡೆದುಕೊಂಡಿರುವ ಎಂಎಲ್‌ಸಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಮಾತನಾಡಲಿ. ಕೇಂದ್ರ ಸರ್ಕಾರ ಕಾದಂಬರಿಕಾರ ಡಾ.ಎಸ್.ಎಲ್.ಭೈರಪ್ಪ ಅವರ ಸಾಹಿತ್ಯ ಸೇವೆ ಗುರುತಿಸಿ ಪದ್ಮವಿಭೂಷಣ ಪ್ರಶಸ್ತಿ ನೀಡಿದೆ. ಪ್ರಶಸ್ತಿ ನೀಡಿದ್ದಕ್ಕೆ ಭೈರಪ್ಪ ಅವರು ಮೋದಿ ಅವರನ್ನು ಅಭಿನಂದಿಸಿದ್ದಾರೆ. ಆದರೆ, ವಿಶ್ವನಾಥ್ ಅವರು ಎಸ್.ಎಲ್.ಭೈರಪ್ಪ ಓಲೈಕೆಯಿಂದಾಗಿ ಪ್ರಶಸ್ತಿ ಪಡೆದುಕೊಂಡಿದ್ದಾರೆ. ಜ್ಞಾನಪೀಠ ಪ್ರಶಸ್ತಿಗಾಗಿ ಮೋದಿಯವರನ್ನು ಹೊಗಳುತ್ತಿದ್ದಾರೆ ಎಂದು ಸಣ್ಣತನದ ಮಾತುಗಳನ್ನಾಡಿದ್ದಾರೆ. ಭೈರಪ್ಪ ಅವರಿಗೆ ಪ್ರಶಸ್ತಿ ಬಂದಿರುವುದು ಇದೇ ಮೊದಲಲ್ಲ. ಸಾಹಿತ್ಯ ಕ್ಷೇತ್ರಕ್ಕೆ ಅವರು ನೀಡಿರುವ ಕೊಡುಗೆಗೆ ಹತ್ತಾರು ಪ್ರಶಸ್ತಿಗಳು ಸಂದಿವೆ. ನಾಡೋಜ ಭೈರಪ್ಪ ಅವರಿಗೆ ಈಗಾಗಲೇ ಸರಸ್ವತಿ ಸಮ್ಮಾನ್ ಪ್ರಶಸ್ತಿ ಬಂದಿದೆ. ಜ್ಞಾನಪೀಠ ಪ್ರಶಸ್ತಿಗಾಗಿ ಅವರು ಪ್ರಧಾನಿ ಮೋದಿಯವರನ್ನು ಓಲೈಕೆ ಮಾಡಬೇಕಾದ ಅಗತ್ಯ ಇಲ್ಲ ಎಂದರು.

ವಿಶ್ವನಾಥ್ ಎಲ್ಲಾ ಮರದ ಮೇಲೆ ಕೂರುವ ಹಕ್ಕಿಯಂತಾಗಿದ್ದಾರೆ. ಅವರು ಕಾಂಗ್ರೆಸ್‌ನಲ್ಲಿ ಎಲ್ಲವನ್ನೂ ಅನುಭವಿಸಿದರು. ಅಲ್ಲಿ ಮನ್ನಣೆ ಸಿಗದಿದ್ದಾಗ ಜೆಡಿಎಸ್‌ಗೆ ಹೋದರು. ಅಲ್ಲಿಂದ ಬಿಜೆಪಿಗೆ ಬಂದು, ಚುನಾವಣೆಯಲ್ಲಿ ಸೋತರು. ಆದರೂ, ಎಂಎಲ್‌ಸಿ ಮಾಡಿದರೂ ಸಚಿವ ಸ್ಥಾನ ಸಿಗಲಿಲ್ಲವೆಂದು ಕಾಂಗ್ರೆಸ್‌ನತ್ತ ಮುಖ ಮಾಡಿದ್ದಾರೆ. ಬಿಜೆಪಿ ನಾಯಕರನ್ನು ಟೀಕಿಸಿದರೆ ಕಾಂಗ್ರೆಸ್ ಸೇರ್ಪಡೆಯಾಗಬಹುದು ಎಂಬ ಕಾರಣಕ್ಕೆ ಟೀಕೆ ಮಾಡುತ್ತಿದ್ದಾರೆ. ಟೀಕಿಸುವ ಮೊದಲು ಅವರು ಆತ್ಮಸಾಕ್ಷಿಯಂತೆ ನಡೆದುಕೊಂಡು ಪರಿಷತ್ ಸದಸ್ಯ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಹೊರ ನಡೆದರೆ ತಮ್ಮದೇನೂ ಅಭ್ಯಂತರವಿಲ್ಲ ಎಂದರು. ಸುದ್ದಿಗೋಷ್ಠಿಯಲ್ಲಿ ಮಾಧ್ಯಮ ವಕ್ತಾರರಾದ ಮಹೇಶ್‌ರಾಜೇ ಅರಸ್, ಸೋಮಸುಂದರ್, ಪಾಪಣ್ಣ, ಅಣ್ಣಯ್ಯನಾಯಕ್ ಇದ್ದರು.

ಬೆಂಬಲದಡಿ ಭತ್ತ, ರಾಗಿ ಖರೀದಿ



ರೈತರಿಗೆ ತೊಂದರೆಯಾಗದಂತೆ ವ್ಯವಸ್ಥಿತವಾಗಿ ಕಾರ್ಯ ನಿರ್ವಹಿಸಿ: ಜಿಲ್ಲಾಧಿಕಾರಿ ಡಾ.ರಾಜೇಂದ್ರ ಕೃಷಿ ಮಾರುಕಟ್ಟೆ ನಿಗಮ ನಿಯಮಿತ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ

ಮೈಸೂರು, ಜ.31– ಈಗಾಗಲೇ ಭತ್ತದ ಖರೀದಿ ಶುರುವಾಗಿದ್ದು, ರೈತರಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗದಂತೆ ವ್ಯವಸ್ಥಿತವಾಗಿ ಕಾರ್ಯನಿರ್ವಹಿಸಿ ಎಂದು ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಕೃಷಿ ಮಾರುಕಟ್ಟೆ ನಿಗಮ ನಿಯಮಿತ ಅಧಿಕಾರಿಗಳಿಗೆ ಸೂಚಿಸಿದರು.

ಆಹಾರ ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ ವತಿಯಿಂದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಹಮ್ಮಿಕೊಂಡಿದ್ದ 2022–23ನೇ ಸಾಲಿನ ಕನಿಷ್ಠ ಬೆಂಬಲ ಬೆಲೆ ಯೋಜನೆಯ ಟಾಸ್ಕ್ ಫೋರ್ಸ್ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ತಾಲೂಕುವಾರು ರೈತರ ನೋಂದಣಿ ವಿವರ, ಖರೀದಿ ಕೇಂದ್ರಗಳ ವಿವರ, ಭತ್ತ ಮತ್ತು ರಾಗಿಯನ್ನು ಸಂಗ್ರಹಣೆ ಮಾಡುವ ಗೋದಾಮುಗಳ ವಿವರ, ಖರೀದಿ ಕೇಂದ್ರಗಳಿಗೆ ಸರಬರಾಜು ಮಾಡಲಾಗಿರುವ ಗೋಣಿಚೀಲಗಳ ವಿವರ, ಖರೀದಿ ಕೇಂದ್ರದಲ್ಲಿ ಮಾಡಿಕೊಳ್ಳಬೇಕಾದ ಪೂರ್ವ ಸಿದ್ಧತೆಗಳು, ಗ್ರೇಡಿಂಗ್ ಕಾರ್ಯನಿರ್ವಹಣೆ ಹಾಗೂ ದಾಸ್ತಾನು ಸಂಗ್ರಹಣೆ ಕುರಿತು ಮಾಹಿತಿ ಪರಿಶೀಲಿಸಿ, ಸಿಬ್ಬಂದಿ ಸರಿಯಾಗಿ ಸಮಯ ಪಾಲನೆ ಮಾಡಬೇಕು ಹಾಗೂ ರೈತರನ್ನು ಕಾಯಿಸಬಾರದು ಎಂದು ತಿಳಿಸಿದರು. ರೈತರು ಖರೀದಿ ಕೇಂದ್ರದಲ್ಲಿ ಟೋಕನ್ ಪಡೆದು ಸೂಚಿತ ದಿನಾಂಕದಲ್ಲಿ ಭತ್ತ, ರಾಗಿಯನ್ನು ನೀಡಬೇಕಾಗಿರುತ್ತದೆ. ಗ್ರೇಡರ್ಸ್‌ಗಳು 24 ಗಂಟೆ ಒಳಗೆ ತಮ್ಮ ಕಾರ್ಯವನ್ನು ಪೂರ್ಣಗೊಳಿಸಬೇಕು. ಇಲ್ಲದಿದ್ದರೆ ಕೆಲಸದಿಂದ ಅಮಾನತುಗೊಳಿಸಲಾಗುವುದು ಎಂದು ಎಚ್ಚರಿಕೆ ನೀಡಿದರು. ಖರೀದಿಸುವವರು (ಮಾರ್ಕೆಟಿಂಗ್ ಬೋರ್ಡ್) ಹಾಗೂ ವೇರ್ ಹೌಸ್‌ನವರು ತಮ್ಮ ಕೆಲಸವನ್ನು ಆರು ಗಂಟೆಯೊಳಗೆ ಪೂರ್ಣಗೊಳಿಸಬೇಕು. ಬಿಲ್ಲಿಂಗ್ ಕಾರ್ಯನಿರ್ವಹಣೆ ಮತ್ತು ರೈತರಿಗೆ ಹಣ ಪಾವತಿಸಲು ಅಗತ್ಯ ಕ್ರಮ ವಹಿಸಬೇಕು. ತಾಂತ್ರಿಕ ಸಮಸ್ಯೆ ಹೇಳಿ ರೈತರನ್ನು ಹಿಂದೆ ಕಳುಹಿಸಬಾರದು. ತಾಂತ್ರಿಕ ಸಮಸ್ಯೆಯಿದ್ದರೆ ರೈತರಿಗೆ ತಿಳಿಸಿ, ಸಮಸ್ಯೆ ಬಗೆಹರಿದ ಮೇಲೆ ರೈತರನ್ನು ಕರೆಸಿಕೊಳ್ಳಬೇಕಾಗಿ ಸೂಚಿಸಿದರು. ಗೋದಾಮುಗಳಲ್ಲಿ ಸ್ಟಾಕ್ ಬೋರ್ಡ್‌ಗಳನ್ನು ಹಾಕಬೇಕು. ಆಹಾರ ಧಾನ್ಯದ ಗುಣಮಟ್ಟ ಹಾಳಾಗದಂತೆ ಕ್ರಮವಹಿಸಬೇಕು ಮತ್ತು ಖರೀದಿಯ ಬಗ್ಗೆ ಜಿಲ್ಲಾಡಳಿತ ಅಥವಾ ತಾಲೂಕು ಆಡಳಿತಕ್ಕೆ ಪ್ರತಿದಿನ ವರದಿ ಸಲ್ಲಿಸಬೇಕು ಎಂದು ಸೂಚಿಸಿದರು. ಸಭೆಯಲ್ಲಿ ಆಹಾರ ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆಯ ಜಂಟಿ ನಿರ್ದೇಶಕರಾದ ಕುಮುದಾ ಶರತ್, ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ಕನಿಷ್ಠ ಬೆಂಬಲ ಬೆಲೆ ಯೋಜನೆಯ ಟಾಸ್ಕ್‌ಫೋರ್ಸ್ ಸಮಿತಿಯ ಪದಾಧಿಕಾರಿಗಳು ಉಪಸ್ಥಿತರಿದ್ದರು.



ಬೆಲವತ್ತ ಗ್ರಾಮದಲ್ಲಿ ಬೂತ್ ವಿಜಯ ಸಂಕಲ್ಪ ಅಭಿಯಾನ ನಡೆಯಿತು. ಈ ವೇಳೆ ಮುಖಂಡರು ಮನೆ ಮನೆಗೆ ಸಂಪರ್ಕಿಸಿ ಬಿಜೆಪಿಯ ಸಾಧನೆಯ ಕರಪತ್ರ ವಿತರಿಸಿದರು. ಮೇಯರ್ ಶಿವಕುಮಾರ್, ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಮಹೇಶ್, ನಿಕಟಪೂರ್ವ ಅಧ್ಯಕ್ಷ ಎನ್.ಅರುಣ್‌ಕುಮಾರ್‌ಗೌಡ, ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೇಮಂತ್‌ಕುಮಾರ್‌ಗೌಡ, ಪ್ರಧಾನ ಕಾರ್ಯದರ್ಶಿಗಳಾದ ವಾಣೀಶ್, ಪೈಲ್ವಾನ್ ರವಿ, ಮುಖಂಡರಾದ ಸುರೇಶ್, ಲೋಹಿತ್, ರಮೇಶ್, ಪ್ರಮೀಳಾ ನಾಯಕ್, ಅನಿತಾ ಪೂವಯ್ಯ, ತೀರ್ಥಕುಮಾರ್, ಅಂಕಪ್ಪ, ರಘು, ಕೃಷ್ಣ ಇನ್ನಿತರರಿದ್ದರು.



ಇತ್ತೀಚೆಗೆ ವರ್ಗಾವಣೆಗೊಂಡ ಮೈಸೂರು ಪ್ರಧಾನ ಜಿಲ್ಲಾ ಸತ್ರ ನ್ಯಾಯಾಧೀಶರಾದ ರಘುನಾಥ್ ಅವರನ್ನು ಮೈಸೂರು ವಕೀಲರ ಸಂಘದ ವತಿಯಿಂದ ಸನ್ಮಾನಿಸಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ಮಾದೇವಸ್ವಾಮಿ, ಕಾರ್ಯದರ್ಶಿ ಉಮೇಶ್, ಉಪಾಧ್ಯಕ್ಷ, ರಾಧಾ, ಪುಟ್ಟಸಿದ್ದೇಗೌಡ, ಕಾರ್ಯದರ್ಶಿ ಭಾಗ್ಯ ಮತ್ತಿತರರು ಉಪಸ್ಥಿತರಿದ್ದರು.

ಇಂದು ಸಾಂಸ್ಕೃತಿಕ, ಕ್ರೀಡೆ, ಎನ್‌ಎಸ್‌ಎಸ್ ಉದ್ಘಾಟನೆ

ಮೈಸೂರು, ಜ.31– ಬೈರಾಪುರ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಾಂಸ್ಕೃತಿಕ, ಕ್ರೀಡೆ, ಎನ್‌ಎಸ್‌ಎಸ್, ಸ್ಕೌಟ್ಸ್ ಹಾಗೂ ವಿವಿಧ ವೇದಿಕೆಗಳ ಉದ್ಘಾಟನಾ ಸಮಾರಂಭವನ್ನು ಫೆ.1ರಂದು ಬೆಳಗ್ಗೆ 10.30ಕ್ಕೆ ಏರ್ಪಡಿಸಲಾಗಿದೆ. ಕಾರ್ಯಕ್ರಮವನ್ನು ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ ಉದ್ಘಾಟಿಸುವರು. ಸಮಾರಂಭದಲ್ಲಿ ಸಂಸದ ವಿ.ಶ್ರೀನಿವಾಸ್‌ಪ್ರಸಾದ್ ಅಧ್ಯಕ್ಷತೆ ವಹಿಸುವರು. ರಂಗಕಲಾವಿದ ಮತ್ತು ಚಲನಚಿತ್ರ ನಟ ನಾಗಭೂಷಣ್ ಭಾಗವಹಿಸುವರು ಎಂದು ಕಾಲೇಜು ಆಡಳಿತ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.

ಬೆಂಚ್ ಪ್ರೆಸ್ ಸ್ಪರ್ಧೆ: ಈಶ್ವರರಿಗೆ 3ನೇ ಸ್ಥಾನ



ಮೈಸೂರು, ಜ.31(ಎಸ್‌ಪಿಎನ್)–ರಾಷ್ಟ್ರಮಟ್ಟದ ಪವರ್ ಲಿಫ್ಟಿಂಗ್ ಭಾಗವಾದ 'ಬೆಂಚ್ ಪ್ರೆಸ್' ಸ್ಪರ್ಧೆಯು ಔರಂಗಬಾದ್ ಮಣೆಯ ವಿಭಾಗೀಯ ಸಂಕೋಲೆ ಕ್ರೀಡಾಂಗಣದಲ್ಲಿ ಜ.15ರಿಂದ 20ರವರೆಗೆ ನಡೆದು, ಮೈಸೂರಿನ ಕ್ರೀಡಾಪಟು 50 ವರ್ಷದ ಎನ್.ಈಶ್ವರ 82.5 ಕೆಜಿ ತೂಕ ಎತ್ತುವ ಮೂಲಕ ಮೂರನೇ ಸ್ಥಾನಗಳಿಸಿದ್ದಾರೆ ಎಂದು ಅಸೋಸಿಯೇಷನ್ ಅಧ್ಯಕ್ಷ ಯಲ್ಲಪ್ಪ ತಿಳಿಸಿದ್ದಾರೆ.



ಮೈಸೂರಿನ ಕುಂಬಾರಕೊಪ್ಪಲು ಕಾಲೋನಿಯ 105 ಕುಟುಂಬಗಳಿಗೆ ಕೊಳಚೆ ನಿರ್ಮೂಲನ ಮಂಡಳಿ ವತಿಯಿಂದ ಶಾಸಕ ಎಲ್. ನಾಗೇಂದ್ರ ಹಕ್ಕುಪತ್ರ ವಿತರಿಸಿದರು. ಈ ಸಂದರ್ಭದಲ್ಲಿ ಪಾಲಿಕೆ ಸದಸ್ಯರಾದ ಶ್ರೀಮತಿ ಉಷಾ, ಶ್ರೀಮತಿ ವೇದಾವತಿ, ಚಿಕ್ಕವೆಂಕಟು, ನಗರ ಮಹಿಳಾ ಮೋರ್ಚಾ ಅಧ್ಯಕ್ಷೆ ಹೇಮಾ ನಂದೀಶ್, ಇಲಾಖಾ ಅಧಿಕಾರಿಗಳಾದ ರಾಮಚಂದ್ರು, ರಾಯ್, ವಾರ್ಡ್ ಬಿಜೆಪಿ ಅಧ್ಯಕ್ಷ ನರಸಿಂಹ, ಮುಖಂಡರಾದ ಆರ್ಟ್ಸ್ ರಾಮು, ಪುನೀತ್, ಅಶ್ವಥ್, ದಿನೇಶ್ ಗೌಡ, ಪ್ರವೀಣ್, ಸರ್ವೇಶ್, ಗಣೇಶ್, ಪ್ರಮೋದ್, ಮಾದೇಗೌಡ, ದೀಪಕ್, ನಾಗ, ಗಿರೀಶ್, ಅಶೋಕ್ ಮತ್ತಿತರರಿದ್ದರು.

ಫೆ.19, ಸಿದ್ದಲಿಂಗಪುರದಲ್ಲಿ ರಾಜ್ಯಮಟ್ಟದ ಜೋಡಿ ಎತ್ತಿನಗಾಡಿ ಓಟದ ಸ್ಪರ್ಧೆ



ಮೈಸೂರು,ಜ.31(ಪಿಎಂ)– ಸಾಮೂಹಿಕ ನಾಯಕತ್ವ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ಫೆ.19ರಂದು ಸಿದ್ದಲಿಂಗಪುರ ಗ್ರಾಮದಲ್ಲಿ ರಾಜ್ಯಮಟ್ಟದ ಜೋಡಿ ಎತ್ತಿನ ಗಾಡಿ ಓಟದ ಸ್ಪರ್ಧೆ ಏರ್ಪಡಿಸಲಾಗಿದೆ ಎಂದು ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಮಂಜು ಕಿರಣ್ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಮದ ಯುವಶಕ್ತಿ ಪಡೆಯ ಸಹಯೋಗದೊಂದಿಗೆ ಅಂದು ಬೆಳಗ್ಗೆ 9.30ರಿಂದ ಸ್ಪರ್ಧೆ ಆರಂಭವಾಗಲಿದೆ. 'ಮೈಸೂರು ರೇಸ್' ಶೀರ್ಷಿಕೆಯಡಿ 1ನೇ ವರ್ಷದ ಸ್ಪರ್ಧೆ ಏರ್ಪಡಿಸಿದ್ದು, ಪ್ರತಿವರ್ಷವೂ ನಡೆಸಲು ಉದ್ದೇಶಿಸಲಾಗಿದೆ ಎಂದರು. ಈಗಾಗಲೇ ಕರಪತ್ರದ ಮೂಲಕ ಸ್ಪರ್ಧೆ ಕುರಿತು ಮಾಹಿತಿ ಒದಗಿಸಿದ್ದು, ಹಲವರು ನೋಂದಣಿ ಮಾಡಿಕೊಂಡಿದ್ದಾರೆ. 50ಕ್ಕೂ ಹೆಚ್ಚು ಜೋಡೆತ್ತುಗಳು ಸ್ಪರ್ಧೆಯಲ್ಲಿ ಭಾಗವಹಿಸುವ ನಿರೀಕ್ಷೆ ಇದೆ. 170 ಮೀಟರ್‌ವರೆಗೆ ಸ್ಪರ್ಧೆ ನಡೆಯಲಿದ್ದು, ಒಮ್ಮೆಗೆ 2 ಗಾಡಿಗಳನ್ನು ಸ್ಪರ್ಧೆಗೆ ಬಿಡಲಾಗುವುದು. ಹಲವು ಸುತ್ತುಗಳ ಬಳಿಕ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನಗಳಿಗೆ ಆಯ್ಕೆ ಮಾಡಲಾಗುವುದು ಎಂದರು. ಕ್ರಮವಾಗಿ ಒಂದೂವರೆ ಕೆಜಿ ಬೆಳ್ಳಿಯ ಜೋಡೆತ್ತಿನ ವಿಗ್ರಹ, 1 ಕೆಜಿ ಬೆಳ್ಳಿಯ ಜೋಡೆತ್ತಿನ ವಿಗ್ರಹ ಮತ್ತು ಅರ್ಧ ಕೆಜಿ ಜೋಡೆತ್ತಿನ ವಿಗ್ರಹವನ್ನು ಬಹುಮಾನವಾಗಿ ನೀಡಲಾಗುವುದು. ಸ್ಪರ್ಧೆಗೆ ತಲಾ 3,500 ರೂ. ಪ್ರವೇಶ ಶುಲ್ಕ ನಿಗದಿ ಮಾಡಲಾಗಿದೆ. ಮಾಹಿತಿಗೆ ಮೊ.ಸಂ. 6361001138 ಸಂಪರ್ಕಿಸಬಹುದು. ವೆಂಕಟೇಶ್, ಕೃಷ್ಣೇಗೌಡ, ಮೋಹನ್‌ಕುಮಾರ್ ಗೋಷ್ಠಿಯಲ್ಲಿದ್ದರು.

ಇಂದು ಶ್ರೀ ಮಡಿವಾಳ ಮಾಚಿದೇವರ ಜಯಂತಿ

ಮೈಸೂರು,ಜ.31–ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಫೆ.1ರ ಬೆಳಗ್ಗೆ 11.30ಕ್ಕೆ ಕಲಾಮಂದಿರದಲ್ಲಿ ಶ್ರೀ ಮಡಿವಾಳ ಮಾಚಿದೇವರ ಜಯಂತಿ ಹಮ್ಮಿಕೊಳ್ಳಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಶಾಸಕ ನಾಗೇಂದ್ರ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮೇಯರ್ ಶಿವಕುಮಾರ್, ಸಂಸದರಾದ ಪ್ರತಾಪ್‌ಸಿಂಹ, ವಿ.ಶ್ರೀನಿವಾಸ್‌ಪ್ರಸಾದ್, ಸುಮಲತಾ ಅಂಬರೀಶ್ ಆಗಮಿಸುವರು.

ರಾಮಕೃಷ್ಣನಗರ ಐ ಬ್ಲಾಕ್ ಕೊಡವ ವೆಲ್‌ಫೇರ್ ಅಸೋಸಿಯೇಷನ್ ವಾರ್ಷಿಕ ಮಹಾಸಭೆ



ಮೈಸೂರು,ಜ.31–ಮೈಸೂರಿನ ಐ ಬ್ಲಾಕ್‌ನಲ್ಲಿರುವ ಕೊಡವ ವೆಲ್‌ಫೇರ್ ಅಸೋಸಿಯೇಷನ್‌ನ ವಾರ್ಷಿಕ ಮಹಾಸಭೆ ಮತ್ತು 20ನೇ ವಾರ್ಷಿಕ ಸತ್ಯನಾರಾಯಣ ಪೂಜಾ ಕಾರ್ಯಕ್ರಮವು ಇತ್ತೀಚೆಗೆ ಕೊಡಂದೆರಾ ಪುಷ್ಪಾ ಮಾಚಯ್ಯ ಅವರ ಅಧ್ಯಕ್ಷತೆಯಲ್ಲಿ ರಾಮಕೃಷ್ಣನಗರದ ಶ್ರೀ ಗಣಪತಿ ದೇವಸ್ಥಾನದಲ್ಲಿ ನಡೆಯಿತು.

ಕಾಡಿಯಮಾಡ ಕಾರ್ಯಪ್ಪ ದಂಪತಿ ಪೂಜಾ ಕೈಂಕರ್ಯ ನಡೆಸಿಕೊಟ್ಟರು. ಸಲಹಾ ಸಮಿತಿ ಸದಸ್ಯರಾದ ಡಾ. ಕೋಡಿರ ಎ.ಕುಶಾಲಪ್ಪ, ಕಟ್ಟೇರಾ ಎ.ನಾಣಯ್ಯ, ಉಪಾಧ್ಯಕ್ಷರಾದ ಮಾಲೇಟಿರಾ ಗಣಪತಿ, ಕಾರ್ಯದರ್ಶಿ ಕೆಂಜಂಗಡ ಕಾರ್ಯಪ್ಪ, ಜಂಟಿ ಕಾರ್ಯದರ್ಶಿ, ಖಜಾಂಚಿ ಕೋದಂಡ ಸ್ವಾಗತ್ ಹಾಗೂ ಸುಮಾರು 50 ಕೊಡವ ಕುಟುಂಬದ ಸದಸ್ಯರು ಭಾಗವಹಿಸಿದ್ದರು.

ಭಾರತೀಯ ಸೇನೆ ಮಹತ್ಸಾಧಕ ಫೀಲ್ಡ್ ಮಾರ್ಷಲ್ ಕಾರ್ಯಪ್ಪ

ಸಾಹಿತಿ ಬನ್ನೂರು ರಾಜು ಗುಣಗಾನ



ಮೈಸೂರು, ಜ.31 (ಜಿಎ)– ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಭಾರತ ಸೇನೆಯ ಮಹತ್ಸಾಧಕರಾಗಿದ್ದು ದೇಶ ಮೆಚ್ಚಿದ ಧೀರ ಸೇನಾನಿಯಾಗಿದ್ದರೆಂದು ಸಾಹಿತಿ ಬನ್ನೂರು ಕೆ.ರಾಜು ಬಣ್ಣಿಸಿದರು.

ಹೆಬ್ಬಾಳಿನ ಭೈರವೇಶ್ವರನಗರದಲ್ಲಿರುವ ಭೈರವೇಶ್ವರ ಪ್ರೌಢಶಾಲೆ ಆವರಣದಲ್ಲಿ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಜನ್ಮದಿನೋತ್ಸವ ಅಂಗವಾಗಿ ಕಾವೇರಿ ಬಳಗ ಮತ್ತು ಹಿರಣ್ಮಯಿ ಪ್ರತಿಷ್ಠಾನ ಹಾಗೂ ಅಣ್ಣಯ್ಯಪ್ಪ ಸ್ಮಾರಕ ಶ್ರೀ ಭೈರವೇಶ್ವರ ಶಿಕ್ಷಣ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಕಾರ್ಯಕ್ರಮ ಉದ್ಘಾಟಿಸಿ, ನಂತರ ಮಾತನಾಡಿದರು.


ಭೂಸೇನೆ, ವಾಯುಸೇನೆ, ನೌಕಾಸೇನೆ, ಹೀಗೆ ಸ್ವತಂತ್ರ ಭಾರತದ ನಂತರ ಮೂರೂ ಸೇನೆಗಳ ಮೊಟ್ಟಮೊದಲ ಮಹಾ ದಂಡನಾಯಕರಾಗಿ ಕಾರ್ಯಪ್ಪ ಭಾರತೀಯ ಸೇನೆಗೆ ತಮ್ಮದೇ ಆದ ಮಹತ್ತರ ಕೊಡುಗೆ ನೀಡಿದ್ದಾರೆ. ದೇಶದ ಸೇನೆಯಲ್ಲಿನ ಮಹತ್ವಪೂರ್ಣ ಕ್ರಾಂತಿಕಾರಿ ಕೆಲಸಗಳನ್ನು ಇಡೀ ಜಗತ್ತಿಗೆ ಮಾದರಿಯಾಗುವಂತೆ ಮಾಡಿ ಜಗತ್ತಿನ ಉದ್ದಗಲಕ್ಕೂ ಸೇನಾ ಸಾರ್ವಭೌಮರಾಗಿ ಮಿಂಚಿದ್ದಾರೆ. ಅಲ್ಲದೆ ಇವತ್ತಿಗೂ ಭಾರತೀಯ ಸೇನೆ ಜಗತ್ತಿಗೆ ಸವಾಲೊಡ್ಡುವಂತೆ ಸಶಕ್ತವಾಗಿ ಬಲಿಷ್ಠವಾಗಿದೆಯೆಂದರೆ ಇದಕ್ಕೆ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಹಾಕಿ ಕೊಟ್ಟಿರುವ ಸುಭದ್ರ ತಳಪಾಯವೇ ಕಾರಣ ಎಂದರು.

ಪ್ರತಿಯೊಬ್ಬರೂ ಸದಾ ಸ್ಮರಿಸುವಂತಹ ಅನುಸರಿಸುವಂತಹ ದೇಶಭಕ್ತಿಯ ಸೇನಾ ಚೈತನ್ಯವಾಗಿದ್ದ ಕಾರ್ಯಪ್ಪನವರು ಭಾರತದ ವೀರಪುತ್ರರಾಗಿ, ವಿಶ್ವಚೇತನರಾಗಿ ದಾಖಲೆ ಬರೆದವರೆಂದು ಕಾರ್ಯಪ್ಪ ಅವರ ಸೇನಾ ಕಾರ್ಯಗಳ ಸಾಧನೆಯನ್ನು ಶ್ಲಾಘಿಸಿದರು. ಕೊಡವರು ಯಾವತ್ತೂ ಕೊಡುವವರು. ಅದರಲ್ಲೂ ಯೋಧರನ್ನು ಕೊಡುವುದರಲ್ಲಿ ನಿಸ್ಸೀಮರು. ಅದರಂತೆ ಅವರು ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಮತ್ತು ಜನರಲ್ ತಿಮ್ಮಯ್ಯ ಸೇರಿದಂತೆ ಭಾರತೀಯ ಸೇನೆಗೆ ಬಹಳಷ್ಟು ಯೋಧರನ್ನು ಕೊಟ್ಟು 'ಯೋಧರ ನಾಡು ಕೊಡಗು' ಎಂಬ ಮಹತ್ವಪೂರ್ಣ ಗೌರವಕ್ಕೆ ಪಾತ್ರರಾಗಿದ್ದಾರೆಂದು ಎಂದರು.

ಇದೇ ಸಂದರ್ಭದಲ್ಲಿ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಅವರ ಸ್ಮರಣಾರ್ಥ ಏರ್ಪಡಿಸಿದ್ದ ಚಿತ್ರಕಲಾ ಸ್ಪರ್ಧೆಯಲ್ಲಿ ವಿಜೇತ ವಿದ್ಯಾರ್ಥಿಗಳಾದ ನಿತೀಶ್‌ಕುಮಾರ್, ಎಂ.ರೋಹನ್, ಮನೀಶ್‌ಗೌಡ, ತೃಪ್ತಿ, ಸಂಜನಾ, ಎಂ.ಈಶ್ವರಿ, ಮೋನಿಶ್, ಪ್ರಿಯಾಂಕ, ಸುಬ್ರಹ್ಮಣ್ಯ ಅವರುಗಳಿಗೆ ಬಹುಮಾನ ವಿತರಿಸಿದರು.

ಈ ವೇಳೆ ಖ್ಯಾತ ಚಿತ್ರ ಕಲಾವಿದೆ ಹಾಗೂ ಲೇಖಕಿ ಡಾ.ಜಮುನಾರಾಣಿ ಮಿರ್ಲೆ, ಶ್ರೀ ಭೈರವೇಶ್ವರ ವಿದ್ಯಾ ಸಂಸ್ಥೆಯ ನಿರ್ದೇಶಕಿ ಮತ್ತು ಪ್ರಾಂಶುಪಾಲೆ ಸೌಮ್ಯ, ಸಂಸ್ಥೆಯ ಆಡಳಿತಾಧಿಕಾರಿ ಪಂಚಾಕ್ಷರಿ, ಹಿರಣ್ಮಯಿ ಪ್ರತಿಷ್ಠಾನದ ಅಧ್ಯಕ್ಷ ಎ.ಸಂಗಪ್ಪ, ಶಾಲೆ ಮುಖ್ಯಶಿಕ್ಷಕಿ ಕಾಮಾಕ್ಷಿ ಹಾಗೂ ಚಿತ್ರಕಲಾ ಶಿಕ್ಷಕ ಮನೋಹರ್ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

1.2.2023 ಬುಧವಾರ, ಮಳೆ ನಕ್ಷತ್ರ: ಶ್ರವಣ, 24.01.2023ರಿಂದ 05.02.2023
ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಹೇಮಂತ ಋತು, ಮಾಘ ಮಾಸ, ಶುಕ್ಲ ಪಕ್ಷ,
ತಿಥಿ: ಏಕಾದಶಿ, ನಕ್ಷತ್ರ: ಮೃಗಶಿರ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

■ **ಧಾರ್ಮಿಕ ದತ್ತಿ ಇಲಾಖೆ :** ಶ್ರೀ ತ್ರಿನೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ, ಬುಧವಾರ ಹಗಲು ರಾತ್ರಿ ಪೂಜೆ, ಬಲಿಪ್ರದಾನ ಉತ್ಸವ, ಸ್ಥಳ: ಶ್ರೀ ತ್ರಿನೇಶ್ವರಸ್ವಾಮಿ ದೇವಸ್ಥಾನ, ಮೈಸೂರು ಅರಮನೆ ಆವರಣ.

■ **ತಿರುಮಲ ತಿರುಪತಿ ದೇವಸ್ಥಾನಗಳು, ಹಿಂದೂ ಧರ್ಮ ಪ್ರಚಾರ ಪರಿಷತ್ ಹಾಗೂ ಶ್ರೀ ಗುರು ರಾಘವೇಂದ್ರ ಸೇವಾ ಸಮಿತಿ, ಟಿ ಕೆ ಬಡಾವಣೆ :** ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮ, ಸಂಜೆ 6 ಗಂಟೆಗೆ– ಚಿನ್ಮಯಿ ಭಜನಾ ಮಂಡಳಿಯ ಸದಸ್ಯರಿಂದ ಭಜನೆ, 7 ಗಂಟೆಗೆ ಶೀ ಶ್ರೀಪಾದರಾಜಾಚಾರ್ಯರಿಂದ "ಶ್ರೀ ವ್ಯಾಸರಾಜರ ಅವತಾರ" ಪ್ರವಚನ.

■ **ಮೈಸೂರು ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ಶ್ರೀ ಮಡಿವಾಳ ಮಾಚಿದೇವರ ಜಯಂತಿ, ಉದ್ಘಾಟನೆ : ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ ಸೋಮಶೇಖರ್, ಅಧ್ಯಕ್ಷತೆ: ಶಾಸಕ ಎಲ್.ನಾಗೇಂದ್ರ, ಮುಖ್ಯ ಅತಿಥಿಗಳು : ಮೇಯರ್ ಶಿವಕುಮಾರ್, ಸಂಸದರಾದ ಪ್ರತಾಪ್ ಸಿಂಹ, ವಿ. ಶ್ರೀನಿವಾಸ್ ಪ್ರಸಾದ್ ಹಾಗೂ ಸುಮಲತಾ ಅಂಬರೀಶ್, ಸ್ಥಳ: ಕಲಾಮಂದಿರ, ಬೆಳಗ್ಗೆ 11.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಮಹಾರಾಜ ಕಾಲೇಜು, ಮಹಿಳಾ ದೌರ್ಜನ್ಯ ವಿರೋಧಿ ಸಮಿತಿ, ಸಮತಾ ಅಧ್ಯಯನ ಕೇಂದ್ರ :** ಅರಿವಿನ ಪಯಣ (ಲಿಂಗತ್ವ ಸಮನ್ವಾಯದ ಅರಿವು ಮೂಡಿಸುವ ಕಾರ್ಯಕ್ರಮ), ಸಂಪನ್ಮೂಲ ವ್ಯಕ್ತಿ: ಶ್ರೀಮತಿ ವಾಣಿ ಪೆರಿಯೋಡಿ, ಮುಖ್ಯ ಅತಿಥಿಗಳು: ಸಮತಾ ಅಧ್ಯಯನ ಕೇಂದ್ರದ ಧರ್ಮದರ್ಶಿ ಎಚ್.ಎಲ್. ಸತೀಶ್, ಅಧ್ಯಕ್ಷತೆ: ಮಹಾರಾಜ ಕಾಲೇಜು ಪ್ರಿನ್ಸಿಪಾಲ್ ಪ್ರೊ.ಸಿ.ಎ.ಶ್ರೀಧರ, ಉಪಸ್ಥಿತರು: ಆಡಳಿತಾಧಿಕಾರಿ ಪ್ರೊ. ಜಿ.ಹೆಚ್.ನಾಗರಾಜ, ಸಂಚಾಲಕರಾದ ಡಾ.ಮಂಜುಳಾ, ಸಂಯೋಜಕರಾದ ಪ್ರೊ.ವಿ.ಷಣ್ಮುಗಂ, ಸ್ಥಳ: ಜೂನಿಯರ್ ಬಿ.ಎ.ಹಾಲ್, ಬೆಳಗ್ಗೆ 11ಕ್ಕೆ.

■ **ಶ್ರೀ ಮದ್ರಾಜಯೋಜಿ ಶ್ರೀ ಚಿಕ್ಕಲಿಂಗಣ್ಣಸ್ವಾಮಿ 86ನೇ ಆರಾಧನಾ ಮಹೋತ್ಸವ:** ಪ್ರತಿನಿತ್ಯ ಸಂಜೆ 5.30ರಿಂದ 6.30ರವರೆಗೆ ವಿಷ್ಣು ಸಹಸ್ರನಾಮ ಪಾರಾಯಣ, ಭಜನೆ–6.30ರಿಂದ 8ರಿಂದ ಪ್ರವಚನ, ಜ್ಞಾನಯುಕ್ತ ಭಕ್ತಿಯ ಮಹಿಮೆ–ಒಂದು ಆಧ್ಯಾತ್ಮಿಕ ಚಿಂತನೆ, ಉದ್ಘಾಟನೆ: ರಾಮಕೃಷ್ಣ ಆಶ್ರಮದ ಶ್ರೀ ಸ್ವಾಮಿ ಶಿವಕಾಂತಾನಂದ, ಸ್ಥಳ: ಚಿಕ್ಕಲಿಂಗೇಶ್ವರ ಸ್ವಾಮಿ ದೇವಸ್ಥಾನ.

ಹಸಿರು ನಮ್ಮ ಉಸಿರು



ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

ನಕ್ಕರೆ ಅದೇ ಸ್ವರ್ಗ

ವೈದ್ಯರು : ನಿಮ್ಮ ನಾಡಿ ಒಂದೇ ಸಮನೆ ಬಡಿಯುತ್ತಿದೆ. ನಾಲಗೆ ಬಣ್ಣ ಕೊಂಚ ಬದಲಾಗಿದೆ. ಸರಿಯಾಗಿ ಹಸಿವಾಗುತ್ತದೆ ತಾನೇ?

ರೋಗಿ : ಕೆಲವೊಮ್ಮೆ ಆಗುತ್ತದೆ, ಕೆಲವೊಮ್ಮೆ ಇಲ್ಲ

ವೈದ್ಯರು : ಯಾವಾಗ ಹಸಿವಾಗುವುದಿಲ್ಲ?

ರೋಗಿ : ಹೊಟ್ಟೆ ತುಂಬಾ ಊಟ ಮಾಡಿದ ಮೇಲೆ!

ಮೈಸೂರು ಮಿತ್ರ

ಬುಧವಾರ, 1 ಫೆಬ್ರವರಿ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಜ್ಞಾನಕ್ಕಾಗಿ ಹೂಡಿದ ಬಂಡವಾಳವು ಅತೀ ಹೆಚ್ಚಿನ ಬಡ್ಡಿಯನ್ನು ತರುತ್ತದೆ. –ಸುಭಾಷಿತ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸಾವಿರ ಚಿತ್ತಾರವನ್ನು ಒಂದು ಮಸಿ ನುಂಗಿತ

ನಿಮ್ಮ ಪತ್ರಗಳು

ಫುಟ್‌ಪಾತ್ ಅತಿಕ್ರಮ ತೆರವುಗೊಳಿಸಿ

ಮಾನ್ಯರೇ,



ಮೈಸೂರಿನ ಹೃದಯ ಭಾಗ ಹಾಗೂ ರಾಜಮಾರ್ಗವಾದ ಚಾಮರಾಜ ಡಬಲ್ ರಸ್ತೆಯ ಫುಟ್‌ಪಾತ್ ಅನ್ನು ಒಂದು ದ್ವಿಚಕ್ರ ವಾಹನ ಷೋ ರೂಮ್ ಅತಿಕ್ರಮಿಸಿ ತನ್ನ ಮಾರಾಟ ಉದ್ದೇಶಿತ ಸ್ಕೂಟರ್, ಬೈಕ್‌ಗಳನ್ನು ಪ್ರದರ್ಶನ ಹಾಗೂ ಮಾರಾಟಕ್ಕೆ ಪ್ರತೀ ದಿನ ಬೆಳಗ್ಗೆಯಿಂದ ರಾತ್ರಿವರೆಗೆ ಫುಟ್‌ಪಾತ್ ಮೇಲೆ ನಿಲ್ಲಿಸುತ್ತಿದೆ. ಇದರಿಂದಾಗಿ ಸಾರ್ವಜನಿಕರು, ವಯೋವೃದ್ಧರು, ಶಾಲಾ ಕಾಲೇಜು ಮಕ್ಕಳು ಸದಾ ವಾಹನ ದಟ್ಟಣೆ ಇರುವ ಮುಖ್ಯ ರಸ್ತೆಯಲ್ಲಿ ಜೀವ ಕೈಯ್ಯಲ್ಲಿಡಿದು ಓಡಾಡುವ ಆತಂಕ ಪರಿಸ್ಥಿತಿ ಉಂಟಾಗಿದೆ. ಇಲ್ಲೇ ಪೊಲೀಸ್ ಜೀಪ್‌ಗಳು ಗಸ್ತು ತಿರುಗುತ್ತಿದ್ದರೂ ಈ ಅತಿಕ್ರಮಣ ತಡೆಯುತ್ತಿಲ್ಲ. ನಗರ ಪಾಲಿಕೆ ಮುಖ್ಯ ಕಚೇರಿ ಅಧಿಕಾರಿಗಳು ಇದೇ ಮಾರ್ಗವಾಗಿ ಹೋಗುತ್ತಿದ್ದರೂ ಈ ಅತಿಕ್ರಮಣದ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ. ಇದು ಕಾರ್ಪೋರೇಶನ್ ವಾರ್ಡ್ 51ಕ್ಕೆ ಸೇರಿದ್ದರೂ 51ರ ನಗರ ಪಾಲಿಕೆ ಸದಸ್ಯರು ಈ ಫುಟ್‌ಪಾತ್ ಅತಿಕ್ರಮದ ಬಗ್ಗೆ ಜನಪರ ಕಾಳಜಿ ವಹಿಸಿ ಕಾನೂನು ಕ್ರಮಗಳನ್ನು ತೆಗೆದುಕೊಂಡಂತೆ ಕಾಣಿಸುತ್ತಿಲ್ಲ!.

ಇದೇ ರೀತಿ ಫುಟ್‌ಪಾತ್ ಅತಿಕ್ರಮ, ರಸ್ತೆ ಅತಿಕ್ರಮ ಆಟೋ ಕನ್ಸಲ್ಟೆನ್ಸಿಗಳಿಂದ, ಹೋಟೆಲ್ ಹಾಗೂ ಫಾಸ್ಟ್ ಫುಡ್ ಅಂಗಡಿಗಳಿಂದ ನಗರದ ಹೃದಯ ಭಾಗಗಳಾದ ಜಗನ್ಮೋಹನ ಪ್ಯಾಲೇಸ್ ರಸ್ತೆ, ಕೃಷ್ಣವಿಲಾಸ ರಸ್ತೆ, ನಾರಾಯಣಶಾಸ್ತ್ರಿ, ಸಯ್ಯಾಜಿ ರಾವ್ ರಸ್ತೆಯುದ್ದಕ್ಕೂ ನಡೆಯುತ್ತಿದ್ದರೂ ಹಾಗೂ ನಾಗರಿಕರು, ಜನಪ್ರತಿನಿಧಿಗಳಿಗೆ ಅನೇಕ ಬಾರಿ ದೂರು ಕೊಟ್ಟಿದ್ದರೂ, ಜನಪ್ರತಿನಿಧಿಗಳು ನಿರ್ಲಕ್ಷ್ಯ ಧೋರಣೆ ತೋರಿದ್ದಾರೆ. ಹೀಗಾಗಿ ಮೈಸೂರು ಮಹಾನಗರ ಪಾಲಿಕೆಯ ಮೇಯರ್ ಹಾಗೂ ಆಯುಕ್ತರು ಖುದ್ದಾಗಿ ಈ ಫುಟ್‌ಪಾತ್ ಅತಿಕ್ರಮಣಗಳನ್ನು ಆಯಾಯ ಸ್ಥಳಗಳಲ್ಲಿ ಪರಿಶೀಲಿಸಿ, ಕಾನೂನು ಪ್ರಕಾರ ಫುಟ್‌ಪಾತ್ ಅತಿಕ್ರಮಣ ತೆರವುಗೊಳಿಸುವುದು, ಟ್ರೇಡ್ ಲೈಸನ್ಸ್ ರದ್ದು ಮಾಡುವುದು, ದಂಡ ವಿಧಿಸುವುದು ಇತ್ಯಾದಿ ಕಠಿಣ ಕ್ರಮಗಳನ್ನು ಜರುಗಿಸಿ ಸಾರ್ವಜನಿಕ ಹಿತಾಸಕ್ತಿ ಕಾಪಾಡಬೇಕೆಂದು ಕಳಕಳಿಯ ಮನವಿ.

–ಪ್ರೊ.ಎಂ.ಎಸ್.ಎಸ್. ಶರ್ಮ, ಸಾಮಾಜಿಕ ಕಾರ್ಯಕರ್ತ, ಮೈಸೂರು.

ಚಾಮರಾಜ ಕ್ಷೇತ್ರದ ಶಾಸಕರ ಶ್ಲಾಘನೀಯ ಕಾರ್ಯ

ಮಾನ್ಯರೆ,

ಇತ್ತೀಚೆಗೆ ಮೈಸೂರಿನ ವಿಜಯನಗರದಲ್ಲಿ ಜಿ.ಟಿ.ದೇವೇಗೌಡರ ಮನೆಯ ಮುಂದಿನ ರಸ್ತೆಗೆ ಮಾಜಿ ಕೇಂದ್ರ ಸಚಿವ, ಚಲನಚಿತ್ರ ನಟ, ಮಂಡ್ಯದ ಗಂಡು ದಿವಂಗತ ಅಂಬರೀಶ್ ಅವರ ಹೆಸರನ್ನು ನಾಮಕರಣ ಮಾಡಿದ್ದು ಸೂಕ್ತ ನಿರ್ಧಾರವಾಗಿದೆ. ಅಜಾತಶತ್ರುವಾಗಿದ್ದ ದಿವಂಗತ ಅಂಬರೀಶ್ ಅವರಿಗೂ ಮೈಸೂರಿಗೂ ಅವಿನಾಭಾವ ಸಂಬಂಧವಿದೆ. ಅದು ಅವರ ಧರ್ಮಪತ್ನಿ ಹಾಗೂ ಅವರ ಸುಪುತ್ರರಿಂದ ಉದ್ಘಾಟನೆಗೊಂಡಿದ್ದು ಮತ್ತೊಂದು ಪ್ರಶಂಸನೀಯ ಕಾರ್ಯ. ಇದಕ್ಕಾಗಿ ಶಾಸಕ ಎಲ್.ನಾಗೇಂದ್ರ ಅವರಿಗೆ ಮತ್ತೊಮ್ಮೆ ಅಭಿನಂದನೆಗಳು.

–ವಿವಿ ಮೊಹಲ್ಲಾ ನಿವಾಸಿಗಳು, ಮೈಸೂರು.

ಹೆಚ್.ವಿಶ್ವನಾಥ್ ಮೊಸರಲ್ಲಿ ಕಲ್ಲು ಹುಡುಕುವ ಜಾಯಮಾನ

ಮಾನ್ಯರೆ,

ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಅವರು ಮೊಸರಲ್ಲಿ ಕಲ್ಲು ಹುಡುಕುವ ಜಾಯಮಾನದವರು. ಖ್ಯಾತ ಸಾಹಿತಿ ಎಸ್.ಎಲ್. ಭೈರಪ್ಪನವರು ತಮಗೆ ಕೇಂದ್ರ ಸರ್ಕಾರ ನೀಡಿದ ಪದ್ಮಭೂಷಣ ಪ್ರಶಸ್ತಿಯು ನರೇಂದ್ರ ಮೋದಿ ಅವರು ಪ್ರಧಾನಿ ಆದ್ದರಿಂದಲೇ ಆ ಪ್ರಶಸ್ತಿ ತಮಗೆ ಲಭಿಸಿತು ಎಂದು ಹೇಳುವುದರಲ್ಲಿ ಯಾವುದೇ ಉತ್ಪ್ರೇಕ್ಷೆ ಇಲ್ಲ. ಕಾರಣ ವಿಶ್ವನಾಥ್ ಅವರೇ ಹೇಳಿದಂತೆ ಭೈರಪ್ಪನವರು ಬರೆಯಲು ಪ್ರಾರಂಭಿಸಿದಾಗ ಪ್ರಧಾನಿ ಮೋದಿಯವರಿಗೆ ಎಷ್ಟು ವರ್ಷವೋ ಗೊತ್ತಿಲ್ಲ ಎಂದು ಹೇಳಿರುವುದು ಸರಿಯೇ. ಕಾರಣ 92 ವರ್ಷದ ಭೈರಪ್ಪನವರ ಸಾಹಿತ್ಯವನ್ನು ಮತ್ತು ಅವರು ಬರೆದ ಪುಸ್ತಕಗಳು ಮತ್ತು ಸದರಿ ಪುಸ್ತಕಗಳು, ಇತರೆ ಭಾಷೆಗೆ ತರ್ಜುಮೆಗೊಂಡು ರಾಷ್ಟ್ರೀಯ ಮಟ್ಟದಲ್ಲಿ ಅವರು ಒಬ್ಬ ಖ್ಯಾತ ಸಾಹಿತಿಗಳೆಂದು ಹೆಸರು ಮಾಡಿದವರು.

ಆದರೆ ದುರ್ದೈವವೆಂದರೆ ಆಳಿದ ಸರ್ಕಾರಗಳು ಅವರ ಸಾಹಿತ್ಯಕ್ಕೆ ಯಾವುದೇ ಪ್ರಶಸ್ತಿ, ಪುರಸ್ಕಾರಗಳನ್ನು ನೀಡಿ ಗೌರವಿಸಲೇ ಇಲ್ಲ. ಆ ಕೆಲಸವನ್ನು ಮೋದಿ ಸರ್ಕಾರ ಮಾಡಿತು. ಅದಕ್ಕಾಗಿ ಅವರು (ಭೈರಪ್ಪ) ತಮ್ಮ ಕೃತಜ್ಞತೆ ಅರ್ಪಿಸಿದ್ದಾರೆ. ಹಾಗೆಯೇ ಭೈರಪ್ಪ ಅವರನ್ನು ಟೀಕಿಸುವ ಭರದಲ್ಲಿ ಮೋದಿಯವರನ್ನು ಓಲೈಸಿರುವುದರಿಂದ ಮುಂದಿನ ದಿನಗಳಲ್ಲಿ ನಿಮಗೆ ಜ್ಞಾನಪೀಠ ಪ್ರಶಸ್ತಿ ಬರುತ್ತದೆ ಸ್ವಲ್ಪ ಕಾಯಿರಿ ಎಂದು ಕುಹಕವಾಡಿದ್ದಾರೆ. ಪಾಪ ವಿಶ್ವನಾಥ್ ಅವರಿಗೆ ಜ್ಞಾನಪೀಠ ಪ್ರಶಸ್ತಿಯನ್ನು ನೀಡುವುದು ಕೇಂದ್ರ ಸರ್ಕಾರವಲ್ಲ. ಅದು ಯಾವುದೋ ಸಂಘ ಸಂಸ್ಥೆ ಕೊಡುವ ಪ್ರಶಸ್ತಿ ಎಂಬ ಅರಿವೇ ಇಲ್ಲ. ಭೈರಪ್ಪನವರಿಗೆ ಯಾವುದೇ ಪ್ರಶಸ್ತಿ ಬೇಕಿಲ್ಲ. ಅವರ ಸಾಹಿತ್ಯವನ್ನು ಓದಿ ಸಂತಸಪಡುವ ಲಕ್ಷಾಂತರ ಓದುಗರು ನೀಡುವ ಗೌರವವೇ ಅವರಿಗೆ ನೀಡುವ ಪ್ರಶಸ್ತಿ. ಇಷ್ಟಕ್ಕೂ ಇಂತಹ ಒಬ್ಬ ರಾಜಕಾರಣಿಗೆ, ಅವರ ಬಗ್ಗೆ ಮಾತನಾಡುವ ಯಾವುದೇ ನೈತಿಕತೆ ಇಲ್ಲ. ಮೋದಿ ಸರ್ಕಾರ ಬಂದ ನಂತರ, ಯಾವುದೇ ಲಾಬಿ ಇಲ್ಲದೆ ತಮ್ಮ ತಮ್ಮ ಕ್ಷೇತ್ರದಲ್ಲಿ ಹೆಜ್ಜೆ ಗುರುತು ಮೂಡಿಸಿರುವಂತಹ ಅನೇಕ ಪ್ರಮುಖರಿಗೆ ಕೇಂದ್ರ ಸರ್ಕಾರದಿಂದ ಪ್ರಶಸ್ತಿಗಳನ್ನು ನೀಡುತ್ತಿರುವುದನ್ನು ಈ ದೇಶದ ಜನ ಗಮನಿಸುತ್ತಿದ್ದಾರೆ. ಇದಕ್ಕೆ ಉದಾಹರಣೆ ಎಂದರೆ ಹಿರಿಯ ಪುರಾತತ್ವ ಶಾಸ್ತ್ರಜ್ಞ ಎಸ್.ಸುಬ್ಬರಾಮನ್ ಅವರಿಗೆ ಈ ವರ್ಷ ಪದ್ಮಶ್ರೀ ಪ್ರಶಸ್ತಿ ನೀಡಿರುವುದು, ಈ ದೇಶದ ಜನರಿಗೆ ಅಷ್ಟೇ ಏಕೆ ನಮ್ಮ ರಾಜ್ಯದವರೇ ಮತ್ತು ನಮ್ಮ ಮೈಸೂರಿನವರೇ ಆದ ಶ್ರೀಯುತರ ಬಗ್ಗೆ ನಮಗೇ ತಿಳಿದಿಲ್ಲವಾದರೂ, ಮೋದಿ ಸರ್ಕಾರ ಅವರನ್ನು ಗುರುತಿಸಿ ಪ್ರಶಸ್ತಿ ನೀಡಿರುವುದು, ಸರ್ಕಾರದ ಬದ್ಧತೆಯನ್ನು ತೋರಿಸುತ್ತದೆ. ಹಾಗಾಗಿ ವಿಶ್ವನಾಥ್ ಅವರು ತಮ್ಮ ವಯಸ್ಸಿಗೆ ತಕ್ಕಂತೆ ಇನ್ನು ಮುಂದಾದರೂ ವರ್ತಿಸಲಿ. ಅಗ್ಗದ ಜನಪ್ರಿಯತೆಗೋಸ್ಕರ ಮಾಧ್ಯಮಗಳ ಮುಂದೆ ಬರುವುದನ್ನು ಇನ್ನಾದರೂ ನಿಲ್ಲಿಸಲಿ.

–ಬ್ಯಾಂಕ್ ಶಿವಕುಮಾರ್, ಜೆ.ಪಿ.ನಗರ, ಮೈಸೂರು.



ಡಾ. ಹೆಚ್.ವಿ. ನಾಗರಾಜರಾವ್
ಮೈಸೂರು

ಸಂಸ್ಕೃತಿ ಚಿಂತನಾ

ತಾಳಪತ್ರ ಗ್ರಂಥಗಳ ಸಂರಕ್ಷಣೆ

ಈಜಿಪ್ಟ್, ಚೀನಾ ಮುಂತಾದ ದೇಶದಲ್ಲಿ ಕಾಗದದ ಆವಿಷ್ಕಾರ ಆಗಿದ್ದರೂ ಭಾರತದಲ್ಲಿ ಅದರ ಬಳಕೆ ಈಚಿನದೆಂದು ಹೇಳುತ್ತಾರೆ. ಅನೇಕ ಶತಮಾನಗಳಲ್ಲಿ ಭಾರತೀಯರು ಬರೆಯಲು ಬಳಸುತ್ತಿದ್ದುದು ತಾಳಪತ್ರ ಅಥವಾ ತಾಳೆಗರಿ. ಉತ್ತರ ಭಾರತದಲ್ಲಿ ಭೂರ್ಜ ಎಂಬ ವೃಕ್ಷದ ತೆಳುವಾದ ತೊಗಟೆಯನ್ನು ಬಳಸುತ್ತಿದ್ದರು ಎಂಬುದಕ್ಕೆ ಉಲ್ಲೇಖಗಳು ಸಿಕ್ಕುತ್ತವೆ. ಉದಾಹರಣೆಗೆ ಕಾಳಿದಾಸನ ಕುಮಾರ ಸಂಪುಟದಲ್ಲಿ

ನ್ಯಸ್ತಾಕ್ಷರಾ ಧಾತುರಸೇನ
ಯತ್ರಭೂರ್ಜತ್ವಚಃ
ಕುಂಜರಬಿಂದುಶೋಣಾಃ।
ವ್ರಜಂತಿ ವಿದ್ಯಾಧರ
ಸುಂದರೀಣಾಮ್
ಅನಂಗಲೇಖಕ್ರಿಯ
ಲೋಪಯೋಗವ್॥ (I–7)

ಎಂಬ ಶ್ಲೋಕದಲ್ಲಿ ಭೂರ್ಜ ವೃಕ್ಷದ ತೊಗಟೆಯ ಹಾಳೆಯನ್ನು ಪ್ರೇಮ ಪತ್ರ ಲೇಖನಕ್ಕಾಗಿ ವಿದ್ಯಾಧರ ಸುಂದರಿಯರು ಬಳಸುತ್ತಿದ್ದರು ಎಂಬ ಪ್ರಸ್ತಾವವಿದೆ. ಆದರೆ ಅತೀ ಹೆಚ್ಚಿನ ಗ್ರಂಥಗಳು ದೊರಕಿರುವುದು ತಾಳಪತ್ರಗಳಲ್ಲಿಯೇ. ನಮ್ಮ ದೇಶದ ಕವಿಗಳು, ದಾರ್ಶನಿಕರು, ವಿಜ್ಞಾನಿಗಳು ಪ್ರಾಚೀನ ಕಾಲದಲ್ಲಿ ಬರೆದಿಟ್ಟ ಸಾಹಿತ್ಯವೆಲ್ಲ ಉಳಿದುಕೊಂಡು ಬಂದಿದ್ದು ಮಹಾಭಾರತ, ಭಗವದ್ಗೀತೆ, ಪುರಾಣಗಳು– ಇವುಗಳನ್ನು ನಾವಿಂದು ಓದುತ್ತಿದ್ದರೆ ಅದಕ್ಕೆ ಕಾರಣ ತಾಳಪತ್ರ ಗ್ರಂಥಗಳು.



ತಾಳಪತ್ರಗಳಲ್ಲಿರುವ ಗ್ರಂಥಗಳನ್ನು ಹೊರತೆಗೆದು ಪುಸ್ತಕ ರೂಪದಲ್ಲಿ ಲೋಕಕ್ಕೆ ಅರ್ಥವಾಗುವಂತೆ ಸಂಪಾದಿಸಿಕೊಡುವುದು ಸುಲಭದ ಕೆಲಸವಲ್ಲ. ಅದಕ್ಕೆ ಲಿಪಿಗಳ ಜ್ಞಾನ ಆವಶ್ಯಕ. ಹಲವಾರು ಹಸ್ತಪ್ರತಿಗಳನ್ನು ಅನ್ವೀಕ್ಷಿಸಿ, ಸರಿಯಾದ ಪಾಠವನ್ನು ನಿರ್ಣಯಿಸಿ, ಗ್ರಂಥಕಾರನ ಕಾಲದೇಶಗಳನ್ನು ತಿಳಿಸಿ, ಆವಶ್ಯಕ ಸ್ಥಳಗಳಲ್ಲಿ ಟಿಪ್ಪಣಿಗಳನ್ನು ಬರೆದು ಗ್ರಂಥವನ್ನು ಸಿದ್ಧಪಡಿಸುವುದು ಪರಿಶ್ರಮ ಸಾಧ್ಯವಾದ ಕೆಲಸ. ಇದಕ್ಕೆ ಹೆಚ್ಚು ತಾಳ್ಮೆಬೇಕು. ಇಂತಹ ಗ್ರಂಥಗಳ ಅನುವಾದವನ್ನೂ ಕೊಡುವುದು ಸ್ತುತ್ಯ. ಅದೆಲ್ಲ ಒಂದು ರೀತಿಯ ತಪಸ್ಸು ಎನ್ನಬೇಕು.

ಭಾಷೆ–ಲಿಪಿ

ಮನುಷ್ಯರು ಎಂದು ಮಾತನಾಡಲಾರಂಭಿಸಿದರು, ಆ ಮಾತು ನಿಶ್ಚಿತ ರೂಪವನ್ನು ಹೊಂದಿ ಯಾವಾಗ ಭಾಷೆಯಾಯಿತು, ಜಗತ್ತಿನಲ್ಲಿ ನೂರಾರು ಭಾಷೆಗಳು ಏಕೆ ಹುಟ್ಟಿದುವು ಎಂಬ ಪ್ರಶ್ನೆಗಳಿಗೆ ನಿರ್ದಿಷ್ಟ ಉತ್ತರ ಇಲ್ಲ. ವೇದಗಳಲ್ಲಿ ಭಾಷೆಯನ್ನು ದೇವತೆಗಳು ಸೃಷ್ಟಿಸಿದರು ಎಂದು ಹೇಳಲಾಗಿದೆ.

ದೇವೀಂ ವಾಚಮಜನಯನ್ತ
ದೇವಾಃ ತಾಂ ವಿಶ್ವರೂಪಾಃ
ಪಶವೋ ವದಂತಿ

ಎಂಬುದು ಋಗ್ವೇದದ ಮಾತು. ಒಂದು ಕಾಲದಲ್ಲಿ ಮನುಷ್ಯರೆಲ್ಲ ಒಂದೇ ಭಾಷೆಯನ್ನು ಮಾತನಾಡುತ್ತಿದ್ದರು. ಅವರಲ್ಲಿ ಐಕಮತ್ಯವಿತ್ತು. ಅದರಿಂದ ಅವರ ಬಲ ಹೆಚ್ಚಾಯಿತು. ಅವರು ದೇವರನ್ನು ಸೋಲಿಸಬಲ್ಲವರಾಗಬಹುದು ಎಂಬ ಭಯದಿಂದ ಅವರಲ್ಲಿ ಒಡಕನ್ನು ಮೂಡಿಸಲು ದೇವತೆಗಳು ಭಾಷಾಭೇದವನ್ನು ಹುಟ್ಟಿಸಿದರು ಎಂಬ ಕಥೆ ಬೈಬಲ್ಲಿನಲ್ಲಿದೆ. ಭಾಷೋತ್ಪತ್ತಿಯ ಬಗೆಗೆ ವೈಜ್ಞಾನಿಕ ವಿವರಣೆ ಇನ್ನೂ ಲಭ್ಯವಾಗಿಲ್ಲ. ಭಾಷೆಗಳು ಸಹಸ್ರಾರು ಇರುವುದು, ಅವುಗಳಲ್ಲಿ ಕೆಲವು ಸಾಮಾನ್ಯಾಂಶಗಳು ಇರುವುದೂ ಕೆಲವು ಭಿನ್ನ ಲಕ್ಷಣಗಳಿರುವುದೂ ವಾಸ್ತವ ಸತ್ಯ.

ಇದು ಭಾಷೆಯ ಕಥೆಯಾದರೆ, ಲಿಪಿಯದು ಇನ್ನು ಹೆಚ್ಚು ಸಂದಿಗ್ಧವಾದ ವಿಷಯ. ಭಾಷೆಯಲ್ಲಿ ಪ್ರತಿಪಾದಿತವಾದ ವಿಷಯ ಅತ್ಯಂತ ಮುಖ್ಯ ಅದು ಉಳಿದುಕೊಳ್ಳಲೇಬೇಕಾದುದು ಎಂದೆನಿಸಿದಾಗ ಅದನ್ನು ಸ್ಮೃತಿಯಲ್ಲಿ ದೃಢವಾಗಿಸಿಕೊಳ್ಳಲು ಕಂಠಸ್ಥವಾಗಿ ಮೂಡಿಸುವ ಸಂಪ್ರದಾಯದ ಆರಂಭವಾಯಿತು. ಹಾಗೆ ನಮ್ಮ ದೇಶದಲ್ಲಿ ಗುರುಶಿಷ್ಯ ಪರಂಪರೆಯಿಂದ ಉಳಿದುಕೊಂಡು ಬಂದಿದ್ದು ವೇದ. ಆ ಕಾರಣದಿಂದಲೇ ವೇದವನ್ನು 'ಶ್ರುತಿ' (ಕೇಳಿಸಿಕೊಂಡಿದ್ದು) ಎಂದು ಕರೆದರು. ಅದನ್ನು ಅನೇಕ ಶತಮಾನಗಳವರೆಗೆ ಯಾರೂ ಬರೆಯಲಿಲ್ಲ. ಆದರೆ ಈ ವ್ಯವಸ್ಥೆ ಎಲ್ಲಾ ಸಾಹಿತ್ಯವನ್ನು ಒಳಗೊಳ್ಳಲು ಸಾಧ್ಯವಾಗಲಿಲ್ಲ. ಮಾನವನ ಸ್ಮರಣಶಕ್ತಿ ಪರಿಮಿತ. ಅದರಿಂದ ಲೇಖನ ಅತ್ಯಂತ ಅವಶ್ಯಕವಾಯಿತು. ಇದಕ್ಕಾಗಿ ಲಿಪಿ ಹುಟ್ಟಿತು. ಭಾರತದ ಪ್ರಾಚೀನ ಲಿಪಿ ಬ್ರಾಹ್ಮೀ ಎಂದು ಪ್ರಸಿದ್ಧವಾಗಿದೆ. ಬ್ರಹ್ಮನೇ ಆವಿಷ್ಕರಿಸಿದ ಲಿಪಿ ಬ್ರಾಹ್ಮೀ. ಅದರ ವಿವಿಧ ಸ್ವರೂಪಗಳೇ ಭಾರತದಲ್ಲಿ ಇಂದು ಪ್ರಚಲಿತವಾಗಿರುವ ನಾನಾ ಲಿಪಿಗಳು ಎಂದು ವಿದ್ವಾಂಸರ ಅಭಿಪ್ರಾಯ. ಈ ಲಿಪಿಗಳೆಲ್ಲ ಎಡಗಡೆಯಿಂದ ಬಲಗಡೆಗೆ ಬರೆಯಲ್ಪಡುವ ಲಿಪಿಗಳು. ಭಾರತದ ಇನ್ನೊಂದು ಪ್ರಾಚೀನ ಲಿಪಿ ಖರೋಷ್ಠೀ. ಇದನ್ನು ಬಲಗಡೆಯಿಂದ ಎಡಗಡೆಗೆ ಬರೆಯುತ್ತಿದ್ದರು. ಇಂದು ಉಪಲಭ್ಯವಾಗಿರುವ ಯಾವ ತಾಳಪತ್ರ ಗ್ರಂಥದಲ್ಲೂ ಬ್ರಾಹ್ಮೀ ಲಿಪಿ ಇಲ್ಲ. ಬ್ರಾಹ್ಮೀ ಜನ್ಯವಾದ ದೇವನಾಗರೀ, ಕನ್ನಡ, ಮಲೆಯಾಲಂ ಮುಂತಾದ ಲಿಪಿಗಳೇ ತಾಳಪತ್ರ ಗ್ರಂಥಗಳಲ್ಲಿ ಕಾಣಿಸುತ್ತವೆ. ಅಶೋಕನ ಶಿಲಾ ಶಾಸನಗಳಲ್ಲಿ ಬ್ರಾಹ್ಮೀ ಲಿಪಿ ಕಂಡು ಬರುತ್ತದೆ.

ಲಿಪಿಗೂ ಭಾಷೆಗೂ ಅವಿನಾಭಾವ ಸಂಬಂಧವೇನೂ ಇಲ್ಲ. ಒಂದು ಲಿಪಿ ಒಂದೇ ಭಾಷೆಗೆ ಮೀಸಲು ಎಂಬ ನಿಯಮವೂ ಇಲ್ಲ. ರೋಮನ್ ಲಿಪಿಯನ್ನು ಇಂಗ್ಲಿಷ್, ಫ್ರೆಂಚ್, ಜರ್ಮನ್ ಮುಂತಾದ ಹಲವು ಯೂರೋಪಿಯನ್ ಭಾಷೆಗಳನ್ನು ಬರೆಯಲು ಉಪಯೋಗಿಸುತ್ತಾರೆ. ನಮ್ಮ ದೇಶದಲ್ಲಿ ದೇವನಾಗರೀ ಲಿಪಿಯನ್ನು ಸಂಸ್ಕೃತ, ಹಿಂದಿ, ಮರಾಠೀ ಮುಂತಾದ ಭಾಷೆಗಳಿಗೆ ಉಪಯೋಗಿಸುತ್ತಿದ್ದಾರೆ. ಸಂಸ್ಕೃತ ಭಾಷೆಯ ಗ್ರಂಥವನ್ನು ದೇಶದ ಎಲ್ಲ ಲಿಪಿಗಳಲ್ಲೂ ಬರೆಯಲು ಮತ್ತು ಮುದ್ರಿಸಲು ಸಾಧ್ಯ. ಭಾಷೆಯನ್ನು ಬರೆಯಲು ಲಿಪಿ ಒಂದು ಸಾಧನ ಮಾತ್ರ. ತಾಳಪತ್ರಗಳನ್ನು ಓದುವವರು ಹಲವಾರು ಲಿಪಿಗಳನ್ನು ಕಲಿತಿರಬೇಕು. ಒಂದೇ ಲಿಪಿ ಬೇರೆ ಬೇರೆ ಶತಮಾನಗಳಲ್ಲಿ ಭಿನ್ನ ಭಿನ್ನ ರೂಪಗಳನ್ನು ಪಡೆದಿರುತ್ತದೆ. ಅದನ್ನು ಅರಿತುಕೊಂಡು ಓದಬೇಕು.

ಹಸ್ತಲಿಖಿತ ಗ್ರಂಥಗಳು

ಕೈಯಿಂದ ಬರೆದ ಗ್ರಂಥವನ್ನು ಇಂಗ್ಲಿಷ್‌ನಲ್ಲಿ ಮ್ಯಾನುಸ್ಕ್ರಿಪ್ಟ್ (Manuscript) ಎಂದು ಕರೆಯುತ್ತಾರೆ. ಕನ್ನಡದಲ್ಲಿ ಅದನ್ನು ಹಸ್ತಪ್ರತಿ ಎಂದು ಕರೆಯುವ ರೂಢಿ ಇದೆ. ಕೈಯಿಂದಲೇ ಬರೆದ ಅಥವಾ ಕೆತ್ತಿದ ತಾಮ್ರ ಶಾಸನವನ್ನಾಗಲೀ, ಶಿಲಾಶಾಸನವನ್ನಾಗಲಿ ಹಸ್ತಪ್ರತಿ ಎಂದು ಕರೆಯಲಾಗದು. ಅದು ತಾಳಪತ್ರದಲ್ಲಾಗಲಿ ಯಾವುದೇ ವಿಧವಾದ ಕಾಗದದಲ್ಲಾಗಲಿ ಬರೆದಿದ್ದಾರೆ ಹಸ್ತಪ್ರತಿ (Manuscript) ಎನಿಸಿಕೊಳ್ಳುತ್ತದೆ. ಸಾಮಾನ್ಯವಾಗಿ ತಾಳಪತ್ರಗಳಲ್ಲಿ ಮೂಲ ಗ್ರಂಥಕಾರ ಅಥವಾ ಕವಿ ತನ್ನ ಹಸ್ತದಿಂದ ಬರೆದ ಕೃತಿಗಳು ದೊರಕುವುದಿಲ್ಲ. ಕಾಳಿದಾಸನೋ ಶಂಕರಾಚಾರ್ಯರೋ ಬರೆದ ತಾಳಪತ್ರ ಲಿಖಿತಗಳು ಇಂದು ಉಪಲಬ್ಧವಾಗಿಲ್ಲ.

ಕವಿಯೋ, ದಾರ್ಶನಿಕನೋ ಬರೆದ ಗ್ರಂಥವನ್ನು ನೋಡಿ ಅಥವಾ ಕೇಳಿ ಅದನ್ನು ಬರೆಯುವವರು ಲಿಪಿಕಾರರು. ಲಿಪಿಕಾರರೆಲ್ಲರೂ ಶ್ರೇಷ್ಠ ವಿದ್ವಾಂಸರಾಗಿರಲಿಲ್ಲ. ಮೂಲ ಹಸ್ತಪ್ರತಿಯನ್ನು ನೋಡಿ ತಮಗೇನು ಕಂಡಿತೋ ಅದನ್ನು ತಾಳಪತ್ರದಲ್ಲಿ ಬರೆಯುವುದು ಮಾತ್ರ ಲಿಪಿಕಾರನ ಕರ್ತವ್ಯವಾಗಿತ್ತು.

ಯಾದೃಶಂ ಪುಸ್ತಕೇ ದೃಷ್ಟಂ
ತಾದೃಶಂ ಲಿಖಿತಂ ಮಯೋ
ಅಬದ್ಧಂ ವಾ ಸುಬದ್ಧಂ ವಾ
ಮಮ ದೋಷೋ ನ ವಿದ್ಯತೇ॥

ಎನ್ನುವ ಲಿಪಿಕಾರರೇ ಹೆಚ್ಚು.

ಹಸ್ತಪ್ರತಿಗಳ ಶತ್ರುಗಳು

ಹಸ್ತಪ್ರತಿಗಳಿಗೂ ಮುದ್ರಿತ ಪುಸ್ತಕಗಳಿಗೂ ಶತ್ರುಗಳು ಹೆಚ್ಚು. ಬೆಂಕಿ ಸಮಸ್ತ ಗ್ರಂಥ ಭಂಡಾರವನ್ನೇ ಸುಟ್ಟು ಹಾಕಬಹುದು. ನೀರಿನ ತೊಂದರೆಯೂ ದೊಡ್ಡದು. ಮಕ್ಕಳ ಕೈಗೆ ಅಥವಾ ಮೂರ್ಖರ ಕೈಗೆ ಸಿಕ್ಕಿದ ಹಸ್ತಪ್ರತಿ ನಾಶವನ್ನು ಹೊಂದಬಹುದು. ಸಾಮಾನ್ಯವಾಗಿ ಹಸ್ತಪ್ರತಿಗಳಲ್ಲಿ ಲಿಪಿಕಾರರು ಬರೆದಿರುತ್ತಾರೆ.

ತೈಲಾದ್ರಕ್ಷೇಜ್ಜಲಾದ್ರಕ್ಷೇದ್
ರಕ್ಷೇಚ್ಛಿಥಿಲಬಂಧನಾತ್ ।
ಮೂರ್ಖಹಸ್ತೇ ನ ದಾತವ್ಯಮ್
ಏವಂ ವದತಿ ಪುಸ್ತಕಮ್ ॥

ಎಣ್ಣೆಯಿಂದ, ನೀರಿನಿಂದ ನನ್ನನ್ನು ಕಾಪಾಡಿರಿ. ನನ್ನ ರಟ್ಟು ಶಿಥಿಲವಾಗದಂತೆ ನೋಡಿಕೊಳ್ಳಿ. ಮೂರ್ಖರ ಕೈಗೆ ನನ್ನನ್ನು ಕೊಡಬೇಡಿ ಎಂದು ಪುಸ್ತಕವು ಹೇಳುತ್ತದೆ. ತಾಳಪತ್ರ ಎಂದರೆ ತಾಳೆಗಿಡದ ಎಲೆ ಅಲ್ಲವೆ. ಅದನ್ನು ತಿನ್ನಲು ಹಲವು ವಿಧದ ಕೀಟಗಳು ಹುಟ್ಟುತ್ತವೆ. ಅವುಗಳ ನಿವಾರಣೆಗೆ ಕ್ರಮವನ್ನು ವಹಿಸದಿದ್ದರೆ ಹಸ್ತ ಪ್ರತಿಗಳು ತೂತುಬಿದ್ದು ಹಾಳಾಗುತ್ತವೆ. ಲಿಪಿಕಾರರು ದೀರ್ಘ ಕಾಲದ ಶ್ರಮದಿಂದ ಬರೆದದ್ದು ಕಣ್ಣಿಗೆ ಕಾಣದೆ ಆಗುತ್ತದೆ. ತೇವ ಇದ್ದರೆ ಹಸ್ತಪ್ರತಿ ಹಾಳಾದಂತೆಯೇ ಸರಿ.

ಭಗ್ನಪೃಷ್ಠಕಟಿಗ್ರೀವಂ ಸ್ತಬ್ಧದೃಷ್ಟಿ
ಹ್ಯಧೋಮುಖಮ್।
ಕಷ್ಟೇನ ಲಿಖಿತಂ ಗ್ರಂಥಂ
ಯತ್ತೇನ ಪರಿಪಾಲಯ ॥

ಎಂದು ಲಿಪಿಕಾರರು ಬರೆದಿರುತ್ತಾರೆ. "ಬೆನ್ನು, ಸೊಂಟ, ಕತ್ತು ಇವುಗಳನ್ನು ಬಗ್ಗಿಸಿ ದೃಷ್ಟಿಯನ್ನು ಒಂದೇ ಕಡೆ ನಿಲ್ಲಿಸಿ ಮುಖ ಕೆಳಗೆ ತಿರುಗಿಸಿ ಕಷ್ಟಪಟ್ಟು ನಾನು ಬರೆದ ಗ್ರಂಥವನ್ನು ನೀನು ಪ್ರಯತ್ನಪಟ್ಟು ಕಾಪಾಡು". ಇದರಿಂದ ಗ್ರಂಥದ ಪರಿಪಾಲನೆ ಎಷ್ಟು ಮುಖ್ಯವೆಂಬುದು ಅರ್ಥವಾಗುತ್ತದೆ.

ಮುದ್ರಿತವಾದ ಗ್ರಂಥದ ಹಸ್ತಪ್ರತಿ ವ್ಯರ್ಥವೇ?

ಗ್ರಂಥ ಒಮ್ಮೆ ಮುದ್ರಣವನ್ನು ಕಂಡರೆ ಆಮೇಲೆ ಅದರ ಹಸ್ತಪ್ರತಿಗಳು ಏತಕ್ಕೆ ಎಂದು ಎಷ್ಟೋ ಜನ ಕೇಳುತ್ತಾರೆ. ಆದರೆ ಗ್ರಂಥ ಮುದ್ರಿತವಾಗಿದ್ದರೂ ಮೂಲವು ತಪ್ಪಿಲ್ಲದೆ ಮುದ್ರಿತವಾಗಿದೆ ಎಂದು ಹೇಗೆ ಹೇಳುವುದು? ಸಂಪಾದಕನ ತಪ್ಪಿನಿಂದ ಮೂಲಕಾರನನ್ನು ತಪ್ಪಾಗಿ ಅರ್ಥೈಸಿಕೊಳ್ಳುವ ಸಂದರ್ಭಗಳಿವೆ. ಅಂಥ ತಪ್ಪುಗಳನ್ನು ತಿದ್ದಲು ಹಸ್ತಪ್ರತಿಯನ್ನು ರಕ್ಷಿಸಿಡಬೇಕು. ಎಷ್ಟೋ ಸಲ ಒಂದು ಪದವೋ, ವಾಕ್ಯವೋ ಮೂಲದಲ್ಲಿದ್ದುದು ಮುದ್ರಿತ ಪುಸ್ತಕದಲ್ಲಿ ಇರುವುದಿಲ್ಲ. ಆದ್ದರಿಂದ ಮೂಲವನ್ನೆಂದೂ ಕಳೆದುಕೊಳ್ಳಬಾರದು.

ಮೈಸೂರಿನ ಪ್ರಾಚ್ಯವಿದ್ಯಾ ಸಂಶೋಧನಾಲಯ (Oriental Research Institute) 1909ರಲ್ಲಿ ಒಂದು ಹಸ್ತಪ್ರತಿಯಲ್ಲಿದ್ದ ಅರ್ಥಶಾಸ್ತ್ರವನ್ನು ಬೆಳಕಿಗೆ ತಂದು ವಿಶ್ವವಿಖ್ಯಾತವಾಯಿತು. ಪುಣೆಯಲ್ಲಿರುವ ಭಂಡಾರಕರ್ ಓರಿಯೆಂಟಲ್ ರಿಸರ್ಚ್ ಇನ್ಸ್‌ಟಿಟ್ಯೂಟ್‌ನ ಪ್ರಸಿದ್ಧ ವಿದ್ವಾಂಸರು ನೂರಾರು ಹಸ್ತಪ್ರತಿಗಳನ್ನು ಉಪಯೋಗಿಸಿ ಮಹಾ ಭಾರತದ ಪರಿಷ್ಕೃತ ಆವೃತ್ತಿಯನ್ನು ಪ್ರಕಟಿಸಿ ವಿದ್ವಲ್ಲೋಕಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಭಾರತದಲ್ಲಿ ಸುಮಾರು ಅರವತ್ತು ಸಂಸ್ಥೆಗಳು ತಾಳಪತ್ರ ಗ್ರಂಥಗಳ ಸಂರಕ್ಷಣೆಯಲ್ಲಿ ತೊಡಗಿವೆ.

ಬೆಂಗಳೂರಿನ ಮಿಥಿಕ್ ಸೊಸೈಟಿ, ಮೈಸೂರಿನ ಪ್ರಾಚ್ಯವಿದ್ಯಾ ಸಂಶೋಧನಾಲಯದ ತಾಳಪತ್ರ ಗ್ರಂಥಗಳ ಸಂರಕ್ಷಣೆಗೆ ಅಪಾರವಾದ ನೆರವನ್ನು ನೀಡುತ್ತಿದೆ. ಕ್ರಿಮಿಗಳ ನಿವಾರಣೆಗಾಗಿ ಫ್ಯೂಮಿಗೇಶನ್ ವಿಧಾನವನ್ನು ಈಗ ಅನುಸರಿಸಿ ಅದು ತಾಳಪತ್ರಗಳ ದೀರ್ಘ ಜೀವಿತಕ್ಕೆ ಅನುವು ಮಾಡಿಕೊಟ್ಟಿದೆ. ಡಿಜಿಟೈಸೇಶನ್ ಕಾರ್ಯಕ್ರಮವನ್ನೂ ಅದು ಹಾಕಿಕೊಂಡಿರುವುದರಿಂದ ವೈಜ್ಞಾನಿಕ ರೀತಿಯಿಂದ ತಾಳಪತ್ರಗಳಲ್ಲಿರುವ ಸಾಹಿತ್ಯವನ್ನು ಜಗತ್ತಿನ ಯಾವುದೇ ಮೂಲೆಯಲ್ಲಿರುವ ವಿದ್ವಾಂಸನಾದರೂ ಪಡೆಯಬಹುದಾಗಿದೆ ಮಿಥಿಕ್ ಸೊಸೈಟಿಗೆ ವಿಶ್ವದ ಎಲ್ಲ ಸಂಸ್ಕೃತಜ್ಞರೂ ಋಣಿಯಾಗಿದ್ದಾರೆ ಎಂಬುದನ್ನು ಬೇರೆ ಹೇಳಬೇಕಾಗಿಲ್ಲ.

ತಾಳಪತ್ರಗಳಲ್ಲಿರುವ ಗ್ರಂಥಗಳನ್ನು ಹೊರತೆಗೆದು ಪುಸ್ತಕ ರೂಪದಲ್ಲಿ ಲೋಕಕ್ಕೆ ಅರ್ಥವಾಗುವಂತೆ ಸಂಪಾದಿಸಿಕೊಡುವುದು ಸುಲಭದ ಕೆಲಸವಲ್ಲ. ಅದಕ್ಕೆ ಲಿಪಿಗಳ ಜ್ಞಾನ ಆವಶ್ಯಕ. ಹಲವಾರು ಹಸ್ತಪ್ರತಿಗಳನ್ನು ಅನ್ವೀಕ್ಷಿಸಿ, ಸರಿಯಾದ ಪಾಠವನ್ನು ನಿರ್ಣಯಿಸಿ, ಗ್ರಂಥಕಾರನ ಕಾಲದೇಶಗಳನ್ನು ತಿಳಿಸಿ, ಆವಶ್ಯಕ ಸ್ಥಳಗಳಲ್ಲಿ ಟಿಪ್ಪಣಿಗಳನ್ನು ಬರೆದು ಗ್ರಂಥವನ್ನು ಸಿದ್ಧಪಡಿಸುವುದು ಪರಿಶ್ರಮ ಸಾಧ್ಯವಾದ ಕೆಲಸ. ಇದಕ್ಕೆ ಹೆಚ್ಚು ತಾಳ್ಮೆ ಬೇಕು. ಇಂತಹ ಗ್ರಂಥಗಳ ಅನುವಾದವನ್ನೂ ಕೊಡುವುದು ಸ್ತುತ್ಯ. ಅದೆಲ್ಲ ಒಂದು ರೀತಿಯ ತಪಸ್ಸು ಎನ್ನಬೇಕು.

ಎಲ್ಲ ತಾಳಪತ್ರಗಳಲ್ಲಿರುವ ಎಲ್ಲ ಗ್ರಂಥಗಳನ್ನೂ ಮುದ್ರಿತರೂಪಕ್ಕೆ ತಂದ ಮೇಲೆ ಕೂಡ, ತಾಳಪತ್ರಗಳನ್ನು ಅನುಪಯೋಗಿ ಎಂದು ಎಸೆಯಬಾರದು. ಅವುಗಳಲ್ಲಿರುವ ಲೇಖನಚಾತುರ್ಯವನ್ನು ಮುಂದಿನ ಪೀಳಿಗೆಗಳವರೂ ನೋಡಿ ಅರಿತುಕೊಳ್ಳುವಂತೆ ಮಾಡಲು ಹಸ್ತಪ್ರತಿಗಳನ್ನು ಸಂರಕ್ಷಿಸಿಡಬೇಕು. ಅವು ನಮ್ಮ ಪೂರ್ವಜರು ಬಿಟ್ಟು ಹೋಗಿರುವ ಅಮೂಲ್ಯ ಆಸ್ತಿ. ಅದರಿಂದ ಧನಲಾಭ ಆಗದಿದ್ದರೇನಂತೆ? ಲೇಖನ ಚರಿತ್ರೆಯ ಇತಿಹಾಸದ ಮುಖ್ಯ ಅಂಗವನ್ನು ನಾವು ಮರೆತು ಹೋಗಬಾರದು. ದೇಶದ ಇತಿಹಾಸವನ್ನು ರಚಿಸುವುದರಲ್ಲಿ ಸಾಹಿತ್ಯದ ಸ್ಥಾನ ಹೆಚ್ಚು ಪ್ರಾಮುಖ್ಯವನ್ನು ಪಡೆಯುತ್ತದೆ. ಅದರಿಂದ ರಾಜವಂಶಗಳ, ಸಾಮ್ರಾಜ್ಯಗಳ, ಯುದ್ಧಗಳ ವಿಷಯಗಳು ತಿಳಿದುಬರುತ್ತವೆ. ಆ ಸಾಹಿತ್ಯವನ್ನು ತಮ್ಮಲ್ಲಿ ಅಡಗಿಸಿಕೊಟ್ಟು ಕೊಂಡಿರುವ ತಾಳಪತ್ರ ಗ್ರಂಥಗಳಿಗೆ ನಮ್ಮ ಕೃತಜ್ಞತೆ ಸಲ್ಲಬೇಕು. ಅವುಗಳನ್ನು ದೀರ್ಘಕಾಲ ಸಂರಕ್ಷಿಸಿ ನಮ್ಮ ಕೃತಜ್ಞತೆಯನ್ನು ತೋರಿಸೋಣ.

ವಚನ ಸಾಹಿತ್ಯ ಸಂರಕ್ಷಕ ಮಡಿವಾಳ ಮಾಚಿದೇವರು

ಹನ್ನರಡನೇ ಶತಮಾನ ಒಂದು ಅದ್ಭುತ ಶರಣರ ಸಮಾಗಮದ ಕಾಲ. ಈ ಶತಮಾನದಲ್ಲಿ ನಡೆದಂತಹ ಶರಣ ಚಳುವಳಿ ಅನನ್ಯವಾದದ್ದು, ಬಸವಣ್ಣನ ಮುಂದಾಳತ್ವದಲ್ಲಿ ಜರುಗಿದ ಈ ಚಳುವಳಿಗೆ ಹಲವಾರು ಶರಣರು ಕೈಜೋಡಿಸಿದರು. ಅವರಲ್ಲಿ ಮಡಿವಾಳ ಮಾಚಿದೇವರು ಪ್ರಮುಖರು. ಅಂದಿನ ಸಮಾಜದಲ್ಲಿ ವೈದಿಕ ಧರ್ಮದ ವರ್ಣವ್ಯವಸ್ಥೆಯ ಪ್ರಭಾವದಿಂದಾಗಿ ಮೇಲು–ಕೀಳು, ಉಚ್ಚ–ನೀಚ, ಶ್ರೇಷ್ಠ–ಕನಿಷ್ಠ ಎಂಬ ಸಾಮಾಜಿಕ ಮತ್ತು ಆರ್ಥಿಕ ಶೋಷಣೆಗೆ ಒಳಗಾಗಿದ್ದಂ ತಹ ಕಾಲ. ಮಹಿಳೆಯರಿಗೆ ಉತ್ತಮವಾದಂತಹ ಕಾಲವೇನಲ್ಲ. ಧಾರ್ಮಿಕ ಸಂಪ್ರದಾಯದ ಹೆಸರಿನಲ್ಲಿ ಮೂಢನಂಬಿಕೆಗಳು, ಕಂದಾಚಾರಗಳು ರಾರಾಜಿಸುತ್ತಿದ್ದವು. ಮಹಿಳೆಯರು ಹಲವಾರು ರೀತಿಯ ಶೋಷಣೆಗೆ ಒಳಗಾಗಿದ್ದ ಕಾಲವದು. ಅಂತಹ ಸಂದರ್ಭದಲ್ಲಿ ಧರ್ಮದ ಸುಧಾರಣೆ ಹಾಗೂ ಸಮಾನತೆ, ಸರ್ವರಿಗೂ ಸಮಪಾಲು, ಸರ್ವರಿಗೂ–ಸಮಬಾಳನ್ನು ಒದಗಿಸುವ ದೃಷ್ಟಿಯಿಂದ ಬಸವಣ್ಣ, ಮಾಚಿದೇವ, ಅಕ್ಕಮಹಾದೇವಿ, ಚೆನ್ನಬಸವಣ್ಣ ಇತ್ಯಾದಿ ಹತ್ತು ಹಲವಾರು ಶರಣರು ಸಾಮಾಜಿಕ ಪರಿವರ್ತನೆಯ ಕ್ರಾಂತಿಯನ್ನು ಕೈಗೊಂಡಂತಹ ಒಂದು ಅವಿಸ್ಮರಣೀಯ ಕಾಲವದು. ಮಡಿವಾಳ ಮಾಚಯ್ಯ, ಮಡಿವಾಳಯ್ಯ, ಮಾಚಪ್ಪ ಹೀಗೆ ಅನೇಕ ಹೆಸರುಗಳಿಂದ ಮಾಚಿದೇವರು ಪ್ರಸಿದ್ಧರಾದವರು. ಕವಿಯಾಗಿ, ಕಲಿಯಾಗಿ ಹೆಸರು ಮಾಡಿದ್ದವರು. ಈತನ ಕಾಲ ಕ್ರಿ.ಶ. ಸುಮಾರು 1160, ಮಾಚಿದೇವರು 477ಕ್ಕಿಂತಲೂ ಅಧಿಕ ವಚನಗಳನ್ನು ರಚಿಸಿದ್ದಾರೆ. ಮಾಚಿದೇವರ ವಚನಗಳ ಅಂಕಿತ ಕಲಿದೇವರದೇವ. ಹೀಗಾಗಿಯೇ ಮಾಚಿದೇವರು ಶುದ್ಧ, ಸಿದ್ಧ ಬದುಕಿನ ಶರಣ, ಸಾಮಾಜಿಕ ಸುಧಾರಣಾ ಚಳುವಳಿಯ ದಂಡನಾಯಕ, ಸಾಮಾಜಿಕ ಹೊಣೆ ನಿರ್ವಹಿಸಿದ ಗಣಾಚಾರ ಸಂಪನ್ನ, ಶರಣರನ್ನು–ವಚನ ಸಾಹಿತ್ಯವನ್ನು ರಕ್ಷಿಸಿದ ವೀರ ಶರಣ, ವಚನ ಸಾಹಿತ್ಯ ಸಂರಕ್ಷಕ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಅಂದು ಮಾಚಿದೇವರು ವಚನಸಾಹಿತ್ಯ ರಕ್ಷಿಸದಿದ್ದಲ್ಲಿ ಶರಣ ಧರ್ಮಕ್ಕೆ, ಶರಣ ಸಂಸ್ಕೃತಿಗೆ, ಶರಣ ಸಾಹಿತ್ಯಕ್ಕೆ ಇಂದು ಜೀವಂತಿಕೆ ಇರುತ್ತಿರಲಿಲ್ಲ. ವ್ಯಕ್ತಿತ್ವ ವಿಕಸನ ಮತ್ತು ಸಾಮಾಜಿಕ ಪರಿವರ್ತನೆಗಾಗಿ ಸತ್ಯ, ನೇರ, ನಿಷ್ಠುರ, ನಡೆ–ನುಡಿಗಳಿಂದ ಸಮಾಜ ಜಾಗೃತಿಗೊಳಿಸಿದ ದಾರ್ಶನಿಕರಾಗಿದ್ದಾರೆ.



ಇವರ ಜನನ ಬಿಜಾಪುರ ಜಿಲ್ಲೆಯ ಸಿಂದಗಿ ತಾಲೂಕಿನ ದೇವರಹಿಪ್ಪರಗಿ, ಅಂದಿನ ಹಿಪ್ಪರಗಿಯೇ ಇಂದು ಮಾಚಿದೇವರ ಹಿಪ್ಪರಗಿ (ದೇವರ ಹಿಪ್ಪರಗಿ) ಎಂದು ಪ್ರಖ್ಯಾತಿ ಪಡೆದಿದ್ದನ್ನು ನಾವು ಸ್ಮರಿಸಬಹುದಾಗಿದೆ. ಇವರ ಕಾರ್ಯದಿಂದಾಗಿ ಅನೇಕ ಶರಣರಿಗೆ ಕಲ್ಯಾಣವೇ ಒದಗಿ ಬಂದಂತಾಗಿತ್ತು, ಮಾಚಿದೇವರ ದೀಕ್ಷಾಗುರು ಮಲ್ಲಿಕಾರ್ಜುನಸ್ವಾಮಿ, ಲಿಂಗಣ್ಣ ಚಾರ್ಯ ಎಂಬ ಮತ್ತೊಬ್ಬ ಗುರುವು ಇದ್ದರೆನ್ನಲಾಗಿದೆ. ಇವರ ಆರಾಧ್ಯ ದೈವ ಕಲ್ಲಿನಾಥ. ಇವರ ವಚನಗಳ ಅಂಕಿತವಿರುವುದು ಆರಾಧ್ಯ ದೈವದ ಹೆಸರಿನಲ್ಲಿಯೇ, ಮಾಚಿದೇವರ ವಚನಗಳನ್ನು ಅವಲೋಕಿಸುವಾಗ ಅವರೊಬ್ಬ ಅಪಾರಜ್ಞಾನ ಸಂಪತ್ತನ್ನು ಹೊಂದಿದ್ದರೆಂಬುದು, ಕಾಯಕದಲ್ಲಿ ನಂಬಿಕೆ, ಪ್ರಾಣಿಹಿಂಸೆ, ಪರನಿಂದನೆ ದ್ವೇಷಕನಾಗಿ, ಸ್ತ್ರೀ ರಕ್ಷಕನಾಗಿ ಕಾರ್ಯವನ್ನು ನಿರ್ವಹಿಸಿರುವುದನ್ನು ನಾವು ಗಮನಿಸಬಹುದಾಗಿದೆ. ಹಿಮಾಚಲದಂತೆ ಗಟ್ಟಿ ಕಾಯಕದ ಹಿರಿಯಾಳು ಮಾಚಿದೇವರಾಗಿದ್ದರು. ಹೀಗೆ ಮಡಿವಾಳ ಮಾಚಿದೇವರು ತಮ್ಮ ಮಹಾನ್ ಕರ್ತವ್ಯ ಪೂರೈಸಿ ದೇವರ ಹಿಪ್ಪರಗಿಗೆ ಬಂದು ನೆಲೆಸಿದರು, ಮುಂದೆ ಕೆಲ ವರ್ಷಗಳವರೆಗೆ ಜ್ಞಾನ ಅನುಭವವನ್ನು ಪ್ರಸಾರ ಮಾಡುತ್ತಾ ದೇವರಹಿಪ್ಪರಗಿಯ ಕಲಿದೇವರಲ್ಲಿ ಐಕ್ಯರಾದರು ಎಂಬ ಪ್ರತೀತಿಯಿದೆ. ಎಲ್ಲರ ಬಟ್ಟೆಯನ್ನು ಶುಚಿಗೊಳಿಸುವ ಮಡಿವಾಳರ ಬದುಕು ಮಾತ್ರ ಇನ್ನೂ ಹಸನಾಗದೆ ಇರುವುದು ದುರ್ದೈವದ ಸಂಗತಿ.

–ಸಿದ್ಧನಕೊಪ್ಪಲು ಕುಮಾರ್, ಕೆ.ಆರ್.ನಗರ, ಮೊ: 9008856567

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಖಾತಾ ಮಾಡಿಕೊಡಲು ಅನಗತ್ಯ ವಿಳಂಬ: ರೆವಿನ್ಯೂ ಇನ್‌ಸ್ಪೆಕ್ಟರ್ ತರಾಟೆಗೆ ತೆಗೆದುಕೊಂಡ ಮೇಯರ್

ಮೈಸೂರಿನ ಆಕಾಶವಾಣಿ ಸರ್ಕಲ್‌ನಲ್ಲಿರುವ ನಗರ ಪಾಲಿಕೆ ವಲಯ ಕಚೇರಿ-4ರಲ್ಲಿ ಅದಾಲತ್

ಮೈಸೂರು,ಜ.31(ಆರ್‌ಕೆ)–ಮನೆಯ ಖಾತೆ ಮಾಡಿಕೊಡಲು ಅನಗತ್ಯ ವಿಳಂಬ ಮಾಡಿದ್ದ ಪಾಲಿಕೆ ವಲಯ ಕಚೇರಿ–4ರ ರೆವಿನ್ಯೂ ಇನ್‌ಸ್ಪೆಕ್ಟರ್ ಪರಮೇಶ್‌ನನ್ನು ತರಾಟೆಗೆ ತೆಗೆದುಕೊಂಡ ಮೇಯರ್ ಶಿವಕುಮಾರ್, ಕರ್ತವ್ಯದಿಂದ ಬಿಡುಗಡೆಗೊಳಿಸುವುದಾಗಿ ಎಚ್ಚರಿಕೆ ನೀಡಿದ ಪ್ರಸಂಗ ಇಂದು ನಡೆಯಿತು.

ಮೈಸೂರಿನ ಆಕಾಶವಾಣಿ ಸರ್ಕಲ್‌ನಲ್ಲಿರುವ ಪಾಲಿಕೆ ವಲಯ ಕಚೇರಿ–4ರಲ್ಲಿ ಇಂದು ಆಯೋಜಿಸಿದ್ದ ಅದಾಲತ್‌ನಲ್ಲಿ ಭಾಗವಹಿಸಿದ್ದ ಜಗದೀಶ್ ಎಂಬ ಹಿರಿಯ ನಾಗರಿಕ, ತಮ್ಮ ಪತ್ನಿ ಮಮತಾ ಎಂಬುವರ ಹೆಸರಿಗೆ ಮನೆ ಖಾತೆ ಮಾಡಿಕೊಡಲು ಕೋರಿ ಅರ್ಜಿ ಸಲ್ಲಿಸಿ 8 ತಿಂಗಳಾಯಿತು. ಅಂದಿನಿಂದ ಅಲೆಯುತ್ತಿದ್ದರೂ, ಒಂದಲ್ಲಾ ಒಂದು ಸಬೂಬು ಹೇಳಿ ವಿಳಂಬ ಮಾಡುತ್ತಿದ್ದಾರೆ. ಅವರು ಕೇಳಿದ ಎಲ್ಲಾ ದಾಖಲೆಗಳನ್ನು ಪೂರೈಸಿದ್ದೇನೆ. ಆದರೂ ಖಾತಾ ಮಾಡಿಲ್ಲ ಎಂದು ದೂರಿದರು.

ಅದರಿಂದ ಕೆರಳಿದ ಮೇಯರ್ ಶಿವಕುಮಾರ್, ಸ್ಥಳದಲ್ಲೇ ಇದ್ದ ರೆವಿನ್ಯೂ ಇನ್‌ಸ್ಪೆಕ್ಟರ್ ಪರಮೇಶ್‌ರನ್ನು ಪ್ರಶ್ನಿಸಿದಾಗ 'ಸಾರ್ ಅವರ ಕಟ್ಟಡ ವಾಣಿಜ್ಯ ಸ್ಥಳವಾಗಿದೆಯಲ್ಲದೆ, ವಿಸ್ತೀರ್ಣದಲ್ಲಿ ಸ್ವಲ್ಪ ಏರುಪೇರಿರುವಂತೆ ಕಾಣುತ್ತಿದೆ' ಎಂದು ಉತ್ತರಿಸಿದರು.



ಅದರಿಂದ ಮತ್ತಷ್ಟು ಕೆರಳಿದ ಶಿವಕುಮಾರ್, ಅರ್ಜಿ ಪಡೆಯುವಾಗಲೇ ಎಲ್ಲಾ ದಾಖಲಾತಿಗಳನ್ನು ಪಡೆದಿರುತ್ತೀರಿ. ನಂತರ ನೀವು ಸ್ಥಳಕ್ಕೆ ತೆರಳಿ ಅಳತೆ ಮಾಡಿ ವಿಸ್ತೀರ್ಣಕ್ಕೆ ತಕ್ಕಂತೆ ತೆರಿಗೆ ನಿರ್ಧರಿಸಿ, ಕಂದಾಯ ಪಾವತಿಸಿಕೊಂಡು ಖಾತೆ ಮಾಡಿಕೊಡುವುದು ನಿಮ್ಮ ಕೆಲಸ. 8 ತಿಂಗಳಿಂದ ಕೆಲಸ ಮಾಡದೇ ಉದ್ದೇಶಪೂರ್ವಕವಾಗಿ ಸತಾಯಿಸುತ್ತಿದ್ದೀಯಾ, ನಿನ್ನನ್ನು ರಿಲೀವ್ ಮಾಡಿ ಬೇರೆ ವಲಯ ಕಚೇರಿಗೆ ನಿಯೋಜಿಸುವಂತೆ ಹೇಳುತ್ತೇನೆ ಎಂದರಲ್ಲದೆ, ಪರಮೇಶ್ ಬಗ್ಗೆ ಸಂಪೂರ್ಣ ಮಾಹಿತಿ ಪಡೆಯುವಂತೆ ತಮ್ಮ ಆಪ್ತ ಸಹಾಯಕ ನಂದೀಶ್‌ಗೆ ಮೇಯರ್ ಸೂಚಿಸಿದರು. ಅದೇ ರೀತಿ ತಮ್ಮ ನಿವೇಶನ, ಕಟ್ಟಡ, ಆಸ್ತಿಗಳ ಖಾತೆ ಮಾಡಿಕೊಡಲು ಅಧಿಕಾರಿಗಳು ತೊಂದರೆ ಕೊಡುತ್ತಿದ್ದಾರೆ ಎಂದು ನಾಲ್ಕೈದು ಮಂದಿ ಆರೋಪಿಸಿದಾಗ ಮಮತಾ ಸೇರಿದಂತೆ ಇತರರಿಗೆ ಇಂದೇ ಖಾತೆ ಮಾಡಿ, ಪ್ರತಿ ಹಸ್ತಾಂತರಿಸುವುದಾಗಿ ರೆವಿನ್ಯೂ ಇನ್‌ಸ್ಪೆಕ್ಟರ್ ಪರಮೇಶ್ ತಿಳಿಸಿದರು.

ಯಾದವಗಿರಿ ಬಡಾವಣೆಗೆ ನಿತ್ಯ 24 ಗಂಟೆಯೂ ನೀರು ಸರಬರಾಜಾಗಬೇಕು. ಒಳಚರಂಡಿ ಸಮಸ್ಯೆಗಳ ತಕ್ಷಣ ಸರಿಪಡಿಸಬೇಕು ಎಂಬಿತ್ಯಾದಿ ಮನವಿಗಳನ್ನು ನಾಗರಿಕರು ಅದಾಲತ್‌ನಲ್ಲಿ ಸಲ್ಲಿಸಿದಾಗ ಅಗತ್ಯ ಕ್ರಮ ವಹಿಸುವುದಾಗಿ ಮೇಯರ್ ಶಿವಕುಮಾರ್ ಭರವಸೆ ನೀಡಿದರು. ಪಾಲಿಕೆ ಸದಸ್ಯರಾದ ಭಾಗ್ಯ ಮಾದೇಶ್, ಎಸ್‌ಬಿಎಂ ಮಂಜು, ರವೀಂದ್ರ, ಉಪ ಆಯುಕ್ತ ಚಂದ್ರಮ್ಮ, ಅಭಿವೃದ್ಧಿ ಅಧಿಕಾರಿ ಹೇಮಾನಂದ್, ಎಲೆಕ್ಟ್ರಿಕಲ್ ಇಂಜಿನಿಯರ್ ವಿವೇದಿತ, ಪರಿಸರ ಇಂಜಿನಿಯರ್ ಶ್ರೀದೇವಿ, ಸಹಾಯಕ ಕಂದಾಯಾಧಿಕಾರಿ ಮನು ಹಾಗೂ ಇತರ ಅಧಿಕಾರಿಗಳು ಅದಾಲತ್‌ನಲ್ಲಿ ಹಾಜರಿದ್ದರು.

ಹೆಬ್ಬಾಳಿನ ಬಸವನಗುಡಿ ಸರ್ಕಲ್‌ನಲ್ಲಿರುವ ಪಾಲಿಕೆ ವಲಯ ಕಚೇರಿ–5 ರಲ್ಲೂ ನಡೆದ ಅದಾಲತ್‌ನಲ್ಲಿ ಮೇಯರ್ ಶಿವಕುಮಾರ್, ಉಪ ಮೇಯರ್ ಡಾ.ಜಿ. ರೂಪಾ, ಪಾಲಿಕೆ ಸದಸ್ಯರಾದ ಪೈ.ಶ್ರೀನಿವಾಸ್, ವಿ.ಶ್ರೀಧರ್, ಪ್ರೇಮಾ ಶಂಕರೇಗೌಡ, ಲಕ್ಷ್ಮಿ ಶಿವಣ್ಣ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಸ್ಯಾಂಟ್ರೋ ರವಿ ಮತ್ತೆ ನ್ಯಾಯಾಂಗ ಬಂಧನಕ್ಕೆ



ಮೈಸೂರು, ಜ.31(ಆರ್‌ಕೆ)–ಸಿಐಡಿ ಪೊಲೀಸರ ವಶದಲ್ಲಿದ್ದ ಕೆ.ಎಸ್.ಮಂಜುನಾಥ್ ಅಲಿಯಾಸ್ ಸ್ಯಾಂಟ್ರೋ ರವಿಯನ್ನು ಮತ್ತೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಪತ್ನಿ ಎನ್ನಲಾದ ಮಹಿಳೆ ನೀಡಿದ ದೂರಿನನ್ವಯ ವಿಜಯನಗರ ಠಾಣೆ ಪೊಲೀಸರು ಜ.2ರಂದು ಸ್ಯಾಂಟ್ರೋ ರವಿ ವಿರುದ್ಧ ವರದಕ್ಷಿಣೆ ನಿಷೇಧ ಕಾಯ್ದೆ, ಎಸ್ಸಿ–ಎಸ್ಟಿ ದೌರ್ಜನ್ಯ, ಲೈಂಗಿಕ ದೌರ್ಜನ್ಯ ಹಾಗೂ ಅತ್ಯಾಚಾರ ಕಾಯ್ದೆಯಡಿ ಪ್ರಕರಣ ದಾಖಲಿಸಿದ್ದರು.

ನಂತರ ತಲೆಮರೆಸಿಕೊಂಡಿದ್ದ ಆತನನ್ನು ಸಹಚರರಾದ ರಾಮ್‌ಜಿ ಮತ್ತು ಸತೀಶ್‌ಕುಮಾರ್‌ನೊಂದಿಗೆ ಜ.13ರಂದು ಗುಜರಾತಿನ ಅಹಮದಾಬಾದ್‌ನಲ್ಲಿ ಬಂಧಿಸಿ ಮೈಸೂರಿಗೆ ಕರೆತರಲಾಗಿತ್ತು. ಮರುದಿನ ಆರೋಪಿಗಳನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು. ಬಳಿಕ ಜ.16ರಂದು ನ್ಯಾಯಾಧೀಶರ ಮುಂದೆ ಹಾಜರುಪಡಿಸಿದ ಪೊಲೀಸರು, ಹೆಚ್ಚಿನ ವಿಚಾರಣೆಗಾಗಿ ತಮ್ಮ ವಶಕ್ಕೆ ಒಪ್ಪಿಸುವಂತೆ ಕೋರಿಕೊಂಡರಾದರೂ, ಅಷ್ಟರಲ್ಲಿ ಸರ್ಕಾರ ಪ್ರಕರಣದ ತನಿಖೆಯನ್ನು ಸಿಐಡಿಗೆ ಒಪ್ಪಿಸುವಂತೆ ಆದೇಶ ನೀಡಿದ್ದರಿಂದ, ಮರುದಿನ (ಜ.17)ರಂದು ಸಿಐಡಿ ಡಿವೈಎಸ್ಪಿ ನರಸಿಂಹಮೂರ್ತಿ ಅವರು ವಿಚಾರಣೆಗಾಗಿ ಆರೋಪಿಗಳನ್ನು ತಮ್ಮ ವಶಕ್ಕೆ ಒಪ್ಪಿಸುವಂತೆ ಕೋರಿ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿದ್ದರು. ಅರ್ಜಿ ಪರಿಗಣಿಸಿದ ನ್ಯಾಯಾಧೀಶರು ಸ್ಯಾಂಟ್ರೋ ರವಿ ಮತ್ತು ಇಬ್ಬರು ಸಹಚರರನ್ನು ಜ.30ರವರೆಗೆ ವಶಕ್ಕೆ ಒಪ್ಪಿಸಿದ್ದರು. ಆದರೆ, ವಿಚಾರಣೆ ಪೂರ್ಣಗೊಂಡ ಹಿನ್ನೆಲೆಯಲ್ಲಿ ಸಿಐಡಿ ಪೊಲೀಸರು, ಆರೋಪಿಗಳನ್ನು ಜನವರಿ 28ರಂದೇ ಎರಡು ದಿನಗಳ ಮುಂಚೆ ನ್ಯಾಯಾಧೀಶರ ಮುಂದೆ ಹಾಜರುಪಡಿಸಿದ ಹಿನ್ನೆಲೆಯಲ್ಲಿ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು ಎಂದು ಮೂಲಗಳು ತಿಳಿಸಿವೆ.

ಎಸ್.ಜಾಹ್ನವಿ ಮೈಸೂರು ನಗರ ನೂತನ ಡಿಸಿಪಿ–2



ಮೈಸೂರು,ಜ.31(ಎಸ್‌ಬಿಡಿ)–ಮೈಸೂರು ನಗರ ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಎಂ.ಎಸ್.ಗೀತಾ ಪ್ರಸನ್ನ ವರ್ಗಾವಣೆಯಾಗಿದ್ದು, ಎಸ್.ಜಾಹ್ನವಿ ನೂತನ ಡಿಸಿಪಿಯಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಸಾರ್ವತ್ರಿಕ ಚುನಾವಣೆ ಹಿನ್ನೆಲೆಯಲ್ಲಿ ಹಲವು ಪೊಲೀಸ್ ಅಧಿಕಾರಿಗಳ ವರ್ಗಾವಣೆ ಮಾಡಿದ್ದು, ಎಂ.ಎಸ್.ಗೀತಾ ಪ್ರಸನ್ನ ಅವರನ್ನು ಪೊಲೀಸ್ ತರಬೇತಿ ಶಾಲೆಗೆ ನಿಯೋಜಿಸಲಾಗಿದೆ. ಹಾಗೆಯೇ ಬೆಂಗಳೂರು ಎಫ್‌ಎಸ್‌ಎಲ್ ವಿಭಾಗದ ಜಂಟಿ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಜಾಹ್ನವಿ ಅವರನ್ನು ಮೈಸೂರು ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿಯಾಗಿ ನೇಮಿಸಲಾಗಿದೆ. ನೂತನ ಡಿಸಿಪಿಗೆ ಪೊಲೀಸ್ ಆಯುಕ್ತ ಬಿ.ರಮೇಶ್ ಅಧಿಕಾರ ಹಸ್ತಾಂತರಿಸಿದರು. ಕಾನೂನು–ಸುವ್ಯವಸ್ಥೆ ವಿಭಾಗದ ಡಿಸಿಪಿ ಮುತ್ತುರಾಜ್ ಶುಭ ಕೋರಿದರು.

ವಿಶ್ವಶಾಂತಿ ದಿನ ಆಚರಣೆ



ಮೈಸೂರು,ಜ.31(ಎಂಕೆ)–ಮೈಸೂರಿನ ಸೆಂಟ್ ಫಿಲೋಮಿನಾ ಚರ್ಚ್ ಆವರಣದಲ್ಲಿ ಮೈಸೂರಿನ ಸಂತ ಜೋಸೆಫರ ಪ್ರಧಾನಾಲಯ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಕ್ರೈಸ್ತ ಪೀಠದ ವತಿಯಿಂದ ವಿಶ್ವಶಾಂತಿ ದಿನವನ್ನು ಆಚರಿಸಲಾಯಿತು.

ವೇದಿಕೆಯ ಮೇಲೆ ಪಾರಿವಾಳ ಹಾರಿಬಿಡುವ ಮೂಲಕ ವಿಶ್ವ ಶಾಂತಿ ಸಂದೇಶ ಸಾರಲಾಯಿತು. ಬಳಿಕ ಸೆಂಟ್ ಮೆರಿಸ್ ಪ್ರೌಢಶಾಲೆ, ಕ್ರಿಸ್ಟಿ ಮತ್ತು ತಂಡ ಹಾಗೂ ಟೋನಿ ರೊಜಾರಿಯೋ ಮತ್ತು ತಂಡದಿಂದ ವಿದ್ಯಾರ್ಥಿಗಳಿಂದ ವಿವಿಧತೆಯಲ್ಲಿ ಏಕತೆ ಸಾರುವ ನೃತ್ಯ ಪ್ರದರ್ಶನ ಪ್ರಸ್ತುತಪಡಿಸಲಾಯಿತು. ಬಳಿಕ ಅಂಕಣಕಾರ ಡಾ.ಕೆ. ಜಾವೀದ್ ನಯೀಮ್ ಮಾತನಾಡಿ, ಕೂಡಿ ಬಾಳಿದರೆ ಸ್ವರ್ಗಸುಖ ಎಂಬಂತೆ ದೇಶ ಮುನ್ನಡೆಯಬೇಕಾದರೆ ಜಾತಿ–ಧರ್ಮ ಎಂಬುದನ್ನು ಬಿಟ್ಟು ನಾವು ಭಾರತೀಯರೆಂದು ಕೂಡಿ ಬಾಳಬೇಕು. ನಮ್ಮಲ್ಲಿ ಪರಸ್ಪರ ಹೊಂದಾಣಿಕೆ ಇದ್ದರೆ ದೇಶದ ಉನ್ನತಿ ಸಾಧ್ಯ ಎಂದರಲ್ಲದೆ ನೃತ್ಯ ಪ್ರದರ್ಶನ ನೀಡಿದ ವಿದ್ಯಾರ್ಥಿಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಹೊಸಮಠದ ಚಿದಾನಂದ ಸ್ವಾಮೀಜಿ, ಕ್ರೈಸ್ತ ಧರ್ಮಗುರುಗಳಾದ ಅಲ್ಫ್ರೆಡ್ ಜಾನ್ ಮೆಂಡೊನ್ಸಾ, ಡಾಮಿನಿಕ್ ವಾಸ್, ಸ್ಟ್ಯಾನಿ ಡಿ.ಆಲ್ಮೇಡಾ, ಮೈಸೂರು ವಿವಿ ಕ್ರೈಸ್ತಧರ್ಮ ವಿಭಾಗ ಮುಖ್ಯಸ್ಥ ವಾಲೆಂಟೈನ್ ರಾಜೇಂದ್ರಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಡಾ.ವಿಷ್ಣುವರ್ಧನ್ ಸ್ಮಾರಕ ವೀಕ್ಷಣೆಗೆ ಬೆಳಗ್ಗೆ 9 ರಿಂದ ಸಂಜೆ 5 ಗಂಟೆವರೆಗೆ ಅವಕಾಶ



ಮೈಸೂರು, ಜ.31(ಎಸ್‌ಬಿಡಿ)– ಮೇರುನಟ ಡಾ.ವಿಷ್ಣುವರ್ಧನ್ ಸ್ಮಾರಕವನ್ನು ಪ್ರತಿದಿನ ನಿಗದಿತ ಅವಧಿಯಲ್ಲಿ ವೀಕ್ಷಿಸಲು ಅವಕಾಶ ನೀಡಲಾಗಿದೆ. ಮೈಸೂರು–ಹೆಚ್.ಡಿ.ಕೋಟೆ ರಸ್ತೆ ಹಾಲಾಳು ಗ್ರಾಮದಲ್ಲಿ ಮೊನ್ನೆಯಷ್ಟೇ ಮುಖ್ಯಮಂತ್ರಿಗಳಿಂದ ಲೋಕಾರ್ಪಣೆಗೊಂಡಿರುವ ಡಾ.ವಿಷ್ಣುವರ್ಧನ್ ಸ್ಮಾರಕವನ್ನು ರಜಾ ದಿನಗಳನ್ನೂ ಒಳಗೊಂಡಂತೆ ಪ್ರತಿದಿನ ಬೆಳಗ್ಗೆ 9ರಿಂದ ಸಂಜೆ 5 ಗಂಟೆವರೆಗೆ ಸಾರ್ವಜನಿಕರು ವೀಕ್ಷಿಸಬಹುದು ಎಂದು ಡಾ.ವಿಷ್ಣುವರ್ಧನ ಸ್ಮಾರಕ ಪ್ರತಿಷ್ಠಾನದ ಪ್ರಕಟಣೆ ತಿಳಿಸಿದೆ.

ಸಿಎಂ ಬಸವರಾಜ ಬೊಮ್ಮಾಯಿ ಅವರು ಜ.29ರಂದು ಡಾ.ವಿಷ್ಣುವರ್ಧನ್ ಸ್ಮಾರಕದ ಉದ್ಘಾಟನೆ ನೆರವೇರಿಸಿದರು. ಆ ಸಂದರ್ಭದಲ್ಲಿ ಸಾವಿರಾರು ವಿಷ್ಣು ಅಭಿಮಾನಿಗಳು ನೆರೆದಿದ್ದರು. ಆದರೆ ಕಾರ್ಯಕ್ರಮದ ವೇಳೆ ಸ್ಮಾರಕ ವೀಕ್ಷಣೆಗೆ ಮುಂದಾದವರನ್ನು ಪೊಲೀಸರು ತಡೆದಿದ್ದರು. ಪರಿಣಾಮ ಆ ದಿನ ಸಂಜೆ ವೇಳೆಗೆ ನೂರಾರು ಅಭಿಮಾನಿಗಳು ಸ್ಮಾರಕ ಕಣ್ತುಂಬಿಕೊಳ್ಳಲು ಆಗಮಿಸಿದ್ದರು. ಆದರೆ ವಿದ್ಯುತ್ ಸಂಪರ್ಕವಿಲ್ಲದೆ ಕಗ್ಗತ್ತಲು ಆವರಿಸಿದ್ದರಿಂದ ತೀವ್ರ ನಿರಾಸೆ ಉಂಟಾಗಿತ್ತು. ಆ ವೇಳೆ ಕನಿಷ್ಠ ಸೌಕರ್ಯವನ್ನೂ ಕಲ್ಪಿಸಿಲ್ಲವೆಂದು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದರು. ಉದ್ಘಾಟನೆ ದಿನವಾದರೂ ರಾತ್ರಿಯಿಡೀ ಸ್ಮಾರಕ ವೀಕ್ಷಣೆಗೆ ಅವಕಾಶ ಮಾಡಿಕೊಡಬೇಕಿತ್ತು ಎಂದು ಬೇಸರ ಹೊರ ಹಾಕಿದ್ದರು. ಅಲ್ಲದೆ ವಿಷ್ಣುವರ್ಧನ್ ಸ್ಮಾರಕ ವೀಕ್ಷಣೆಗೆ ಸಮಯವನ್ನೂ ಪ್ರಕಟಿಸದ ಕಾರಣ ಸಾರ್ವಜನಿಕರಲ್ಲಿ ಗೊಂದಲ ಉಂಟಾಗಿತ್ತು. ಪ್ರತಿನಿತ್ಯ ಬೆಳಗ್ಗೆ 9ರಿಂದ ಸಂಜೆ 5ರವರೆಗೂ ಸಾರ್ವಜನಿಕರ ವೀಕ್ಷಣೆಗೆ ಅವಕಾಶ ಕಲ್ಪಿಸಿರುವುದರಿಂದ ಅಭಿಮಾನಿಗಳ ಸಂತಸ ಇಮ್ಮಡಿಯಾಗಿದೆ. ಈಗಾಗಲೇ ಹೆಚ್.ಡಿ.ಕೋಟೆ ರಸ್ತೆಯಲ್ಲಿ ಸಾಗುವವರು ವಿಷ್ಣು ಸ್ಮಾರಕಕ್ಕೆ ಭೇಟಿ ನೀಡಿ ಪ್ರಯಾಣ ಮುಂದುವರೆಸುತ್ತಿದ್ದಾರೆ ಎಂದು ತಿಳಿದುಬಂದಿದೆ. ಮುಂದಿನ ದಿನಗಳಲ್ಲಿ ನಿತ್ಯ ಸಾವಿರಾರು ಮಂದಿ ಭೇಟಿ ನೀಡಬಹುದು. ಅದಕ್ಕೆ ಪೂರಕವಾದ ಎಲ್ಲಾ ವ್ಯವಸ್ಥೆ ಕಲ್ಪಿಸಬೇಕೆಂದು ಅಭಿಮಾನಿಗಳು ಸಂಬಂಧಪಟ್ಟವರಲ್ಲಿ ಮನವಿ ಮಾಡಿದ್ದಾರೆ.

ಯಶಸ್ವಿನಿ ಯೋಜನೆಗೆ ಮೈಸೂರಲ್ಲಿ 30 ಖಾಸಗಿ ಆಸ್ಪತ್ರೆ ನೋಂದಣಿ

ಮೈಸೂರು, ಜ.31(ಆರ್‌ಕೆ)–ಸರ್ಕಾರ ಪುನಾರಂಭಿಸಿರುವ ಯಶಸ್ವಿನಿ ಆರೋಗ್ಯ ಯೋಜನೆಯಡಿ ವೈದ್ಯಕೀಯ ಸೇವೆ ಒದಗಿಸಲು ಮೈಸೂರು ನಗರ ಹಾಗೂ ಜಿಲ್ಲೆಯ 30 ಖಾಸಗಿ ಆಸ್ಪತ್ರೆಗಳು ನೋಂದಣಿ ಮಾಡಿಸಿವೆ.




2018ರಲ್ಲಿ ಸೇವೆ ಸ್ಥಗಿತಗೊಳ್ಳುವವರೆಗೆ ಈ ಹಿಂದೆ 26 ಆಸ್ಪತ್ರೆಗಳು ಸೇವೆ ಒದಗಿಸುತ್ತಿದ್ದು, ಇದೀಗ 4 ಆಸ್ಪತ್ರೆಗಳು ಹೆಚ್ಚುವರಿಯಾಗಿ ಸೇರಿವೆ. ಕೆಲ ಆರೋಗ್ಯ ಸೇವೆಗಳಿಗೆ ಸರ್ಕಾರ ನಿಗದಿಗೊಳಿಸಿರುವ ದರ ಕಡಿಮೆ ಇರುವುದರಿಂದ ಸೇವೆಗೆ ನೋಂದಾಯಿಸಲು ಕೆಲ ಆಸ್ಪತ್ರೆಯವರು ಆಸಕ್ತಿ ತೋರುತ್ತಿಲ್ಲ ಎಂಬ ಮಾತು ಕೇಳಿ ಬಂದಿತ್ತು.

ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿರುವ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಹೆಚ್.ಪ್ರಸಾದ್, ಕರ್ನಾಟಕ ಪ್ರೈವೇಟ್ ಮೆಡಿಕಲ್ ಎಸ್ಟಾಬ್ಲಿಷ್‌ಮೆಂಟ್ಸ್ ಕಾಯ್ದೆ (KPMEA)ಯನ್ವಯ ಸರ್ಕಾರ ಜನರಿಗಾಗಿ ತರುವ ಯಾವುದೇ ಆರೋಗ್ಯ ಯೋಜನೆಗಳನ್ನು ಅನುಷ್ಠಾನಗೊಳಿಸಬೇಕಾಗಿದ್ದು, ಖಾಸಗಿ ಆಸ್ಪತ್ರೆಗಳು ತಿರಸ್ಕರಿಸುವಂತಿಲ್ಲ. ಆದ್ದರಿಂದ ಯಶಸ್ವಿನಿ ಯೋಜನೆಯಡಿ ಸೇವೆ ಒದಗಿಸುವುದು ಕಡ್ಡಾಯವಾಗಿದೆ ಎಂದರು.

30 ಮತ್ತು ಅದಕ್ಕಿಂತ ಹೆಚ್ಚು ಹಾಸಿಗೆ ಸಾಮರ್ಥ್ಯದ ಆಸ್ಪತ್ರೆಗಳನ್ನು ಈ ಯೋಜನೆಯಡಿ ಆರೋಗ್ಯ ಸೇವೆ ಒದಗಿಸಲು ನೋಂದಣಿ ಮಾಡಬಹುದಾಗಿದ್ದು, ಸರ್ಕಾರ ನೀಡುವ ದರವನ್ನೇ ಒಪ್ಪಿಕೊಳ್ಳಬೇಕು. ಇದು ಅತ್ಯವಶ್ಯ ಸೇವೆಯಾಗಿರುವುದರಿಂದ ಇದನ್ನು ವಾಣಿಜ್ಯ ಉದ್ದೇಶದಿಂದ ನೋಡದೇ ಸೇವಾ ಮನೋಭಾವನೆಯಿಂದ ಪರಿಗಣಿಸಿ ರೋಗಿಗಳಿಗೆ ಚಿಕಿತ್ಸೆ ನೀಡಬೇಕಾಗಿದೆ ಎಂದು ಡಾ. ಪ್ರಸಾದ್ ನುಡಿದರು.

ಯಶಸ್ವಿನಿ ಆರೋಗ್ಯ ಯೋಜನೆ ಗುರುತಿನ ಕಾರ್ಡ್ ಹೊಂದಿರುವವರಿಗೆ ಉಚಿತವಾಗಿ ಚಿಕಿತ್ಸೆ ನೀಡಿ ನಿಯಮಾನುಸಾರ ಸರ್ಕಾರಕ್ಕೆ ಬಿಲ್ ಸಲ್ಲಿಸಿ ಹಣ ಪಡೆಯಬೇಕಾಗಿದೆ. ಮುಂದಿನ ದಿನಗಳಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲೇ ಪ್ರತಿಯೊಂದು ಸೌಲಭ್ಯ ಒದಗಿಸಿ ಸ್ವಾವಲಂಬನೆ ಸಾಧಿಸಲು ಪ್ರಯತ್ನಗಳು ನಡೆಯುತ್ತಿವೆ. ಇಲ್ಲದಿದ್ದರೆ ಪ್ರತಿಯೊಂದು ಆರೋಗ್ಯ ಸೇವೆಗೆ ಖಾಸಗಿ ಆಸ್ಪತ್ರೆಗಳನ್ನೇ ಅವಲಂಬಿಸಬೇಕಾಗುತ್ತದೆ. ಅಗ ಅವರು ಹೇಳಿದಷ್ಟು ದರವನ್ನೇ ಪಾವತಿಸುವ ಅನಿವಾರ್ಯತೆ ಸೃಷ್ಟಿಯಾಗುತ್ತದೆ ಎಂದು ತಿಳಿಸಿದರು.

ಎಸ್.ಸ್ವಾಮಿಗೆ ಪಿಹೆಚ್.ಡಿ ಪದವಿ



ಮೈಸೂರು: ಡಾ.ಪಿ.ಜಯಶ್ರೀ ಮಾರ್ಗದರ್ಶನದಲ್ಲಿ ಎಸ್.ಸ್ವಾಮಿ ಭೂಗೋಳಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ, ಸಾದರಪಡಿಸಿದ ಮಹಾಪ್ರಬಂಧಕ್ಕೆ ಮೈಸೂರು ವಿವಿ ಪಿಎಚ್.ಡಿ ಪದವಿ ನೀಡಿದೆ.

ರಾಜ್ಯ ಮಟ್ಟದ ವಾಲಿಬಾಲ್ ಪಂದ್ಯಾವಳಿಯಲ್ಲಿ ಪುರುಷರಲ್ಲಿ ಬಳ್ಳಾರಿ, ಮಹಿಳೆಯರಲ್ಲಿ ಚಾ.ನಗರ ಚಾಂಪಿಯನ್



ಮೈಸೂರು,ಜ.31(ಎಂಕೆ)–ರಾಜ್ಯಮಟ್ಟದ ವಾಲಿಬಾಲ್ ಪಂದ್ಯಾವಳಿಯ ಪುರುಷರ ವಿಭಾಗದಲ್ಲಿ ಬಳ್ಳಾರಿ ಹಾಗೂ ಮಹಿಳೆಯರ ವಿಭಾಗದಲ್ಲಿ ಚಾಮರಾಜನಗರ ತಂಡ ಚಾಂಪಿಯನ್ ಆಯಿತು. ಮೈಸೂರು ವಿವಿ ಸ್ಪೋರ್ಟ್ಸ್ ಪೆವಿಲಿಯನ್ ಮೈದಾನದಲ್ಲಿ ಕರ್ನಾಟಕ ರಾಜ್ಯ ವಾಲಿಬಾಲ್ ಸಂಸ್ಥೆ ಹಾಗೂ ಮೈಸೂರು ಜಿಲ್ಲಾ ವಾಲಿಬಾಲ್ ಸಂಸ್ಥೆ ವತಿಯಿಂದ ಆಯೋಜಿಸಿದ್ದ 25ನೇ ಕರ್ನಾಟಕ ರಾಜ್ಯಮಟ್ಟದ ಹೊನಲು ಬೆಳಕಿನ ಅಂತರ ಜಿಲ್ಲಾ ವಾಲಿಬಾಲ್ ಪಂದ್ಯಾವಳಿಯ ಪುರುಷರ ವಿಭಾಗದ ಫೈನಲ್ ಪಂದ್ಯದಲ್ಲಿ ಬೆಂಗಳೂರು ಸೆಂಟ್ರಲ್ ವಿರುದ್ಧ ಬಳ್ಳಾರಿ ತಂಡ 1–3 (20–25, 25–20, 23–25, 17–20) ಅಂತರದಲ್ಲಿ ಜಯಗಳಿಸಿತು. ಮಹಿಳೆಯರ ವಿಭಾಗದಲ್ಲಿ ಮೈಸೂರು ತಂಡದ ವಿರುದ್ಧ ಚಾಮರಾಜನಗರ ತಂಡ 1–3(17–25, 44–42, 34–36, 17–25) ಅಂತರದಿಂದ ಜಯಭೇರಿ ಬಾರಿಸಿತು.

ಬಳಿಕ ವಿಜೇತ ತಂಡಗಳಿಗೆ ಮೈಸೂರು ಜಿಲ್ಲಾ ವಾಲಿಬಾಲ್ ಸಂಸ್ಥೆ ಅಧ್ಯಕ್ಷ ಟಿ.ಪ್ರಕಾಶ್ ಬಹುಮಾನ ವಿತರಿಸಿದರು. ಅಲ್ಲದೆ ವೈಯಕ್ತಿಕವಾಗಿ ಎರಡು ವಿಭಾಗದ ವಿಜೇತ ಹಾಗೂ ರನ್ನರ್ ಅಪ್ ತಂಡಗಳಿಗೆ ತಲಾ 1 ಲಕ್ಷ ನಗದು ಬಹುಮಾನ ನೀಡಿದರು. ಸಂಸ್ಥೆ ಕಾರ್ಯದರ್ಶಿ ಗಿರೀಶ್ ಚಂದನ್‌ಕುಮಾರ್, ಚಾಮರಾಜನಗರ ಜಿಲ್ಲಾ ವಾಲಿಬಾಲ್ ಸಂಸ್ಥೆ ಅಧ್ಯಕ್ಷ ಗೋಪಾಲ್‌ರೆಡ್ಡಿ, ವಾಲಿಬಾಲ್ ಕೋಚ್‌ಗಳಾದ ಸುದರ್ಶನ್, ಲೋಹಿತ್ ಮತ್ತಿತರರು ಉಪಸ್ಥಿತರಿದ್ದರು.

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಐಟಂ ಸ್ವತ್ತನ್ನು, ನನ್ನ ಕಕ್ಷಿದಾರರು ಅದರ ಮಾಲೀಕರಾದ, ಮೈಸೂರು ನಗರ, ಜೆ.ಪಿ. ಎಕ್ಸ್‌ಟೆನ್ಷನ್, ದಟ್ಟಗಳ್ಳಿ 3ನೇ ಹಂತ, ಕನಕದಾಸ ನಗರ, 11ನೇ ಮೇನ್, ಹೆಚ್. ಬ್ಲಾಕ್, ನಂಬರ್ 4066ರ ನಿವಾಸಿಯಾದ ಶ್ರೀ ಪ್ರಕಾಶ್ ಆರ್.ಪಿನ್. ಶ್ರೀ ರಾಜು ಮತ್ತು ಇವರ ಕುಟುಂಬದ ಸದಸ್ಯರುಗಳಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ಪರಭಾರೆಯ ವಿಚಾರದಲ್ಲಿ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಹತ್ತು (10) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಐಟಂ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಐಟಂ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್

ಐಟಂ–1 : ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ವರುಣಾ ಹೋಬಳಿ, ಇನಾಂ ಉತ್ತನಹಳ್ಳಿ ಗ್ರಾಮದ ಸರ್ವೆ ನಂ. 344/4ರಲ್ಲಿನ ಒಂದು ಎಕರೆ ಎರಡು ಗುಂಟೆ (1.02.00.00)ವಿಸ್ತೀರ್ಣದ ಜಮೀನಿಗೆ ಚಕ್ಕುಬಂದಿ:
ಪೂರ್ವಕ್ಕೆ: ಸರ್ವೆ ನಂ: 344/1 (ಕಾವೇರಿ ನೀರಾವರಿ ನಿಗಮ), ಪಶ್ಚಿಮಕ್ಕೆ: ಸರ್ವೆ ನಂ : 344/6, ಉತ್ತರಕ್ಕೆ: ಮೈಸೂರು –ತಿ.ನರಸೀಪುರ ರಸ್ತೆ, ದಕ್ಷಿಣಕ್ಕೆ : ಸರ್ವೆ ನಂಬರ್: 344/2.

ಐಟಂ–2 : ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ವರುಣಾ ಹೋಬಳಿ, ಇನಾಂ ಉತ್ತನಹಳ್ಳಿ ಗ್ರಾಮದ ಸರ್ವೆ ನಂ. 344/6ರಲ್ಲಿನ ಇಪ್ಪತ್ತೊಂಭತ್ತುವರೆ ಗುಂಟೆ (0.29.08.00) ವಿಸ್ತೀರ್ಣದ ಚಕ್ಕುಬಂದಿ
ಪೂರ್ವಕ್ಕೆ: ಸರ್ವೆ ನಂಬರ್ : 344/4, ಪಶ್ಚಿಮಕ್ಕೆ: ಸರ್ವೆ ನಂಬರ್: 344/5, ಉತ್ತರಕ್ಕೆ: ಮೈಸೂರು –ತಿ.ನರಸೀಪುರ ರಸ್ತೆ, ದಕ್ಷಿಣಕ್ಕೆ: ಸರ್ವೆ ನಂಬರ್ : 344/2 ಮತ್ತು 345

Sd/- M.N.Prakash Kalappa,
KAR-1996-2000, Advocate & Legal Consultant, # 2-3, first Floor, PRI Complex, 67/7A, New sayyajirao Road, Fort Mohalla,Mysore 570004,
Mob: 9343112535,
Email: mnprakashkalappa@gmail.com
ಮೈಸೂರು: 31.01.2023

IN THE COURT OF THE PRINCIPAL JUDGE, SMALL CAUSES AND SENIOR CIVIL JUDGE AT MYSORE.

F.D.P.No.3 of 2019

Petitioner : Smt.K.R.Sarva
V/s
Respondents : Sri. K.R.Shankararadhya and others

To,

(1) Smt. Puttamallajamma
W/o Late K.R.Ramaswamy Aradhya
Since dead by Lrs

(a) Smt. K.R.Sharadambika
aged 84 years, Wife of Late Srikantaradhya, Adarsha Convent Road, Kayi Arasu Mane Beedhis, Malavalli Town, Mandya Dist.

(2) Smt. K.R. Gayathri,
aged about 60 years, W/o Gurudev Aradhya, D/o Late K.R.Ramaswamy Aradhya, Residing at D.No.LIG 87, E & F Block, 3rd B Cross, Ramakrishnanagar, Mysuru.

(3) Sri.Ramesh Aradhya, aged about 55 years, Son of Late Nagarathnambike, residing at D.No.290, 9th Cross, Vishweshwara Nagar, Maddur.

SUMMONS TO APPEAR IN PERSON

Whereas, the petitioner has instituted these proceedings for drawing up final decree and to carve her 1/5th share in the schedule property. You are hereby summoned to appear in this court in person or by an Advocate duly instructed and able to answer all the material questions in relation to the suit or who shall be accompained by some person able to answer all such question on 04 day of march 2023 at 11A.M. in the forenoon to answer all the claims.

Take notice that in default of your appearance on that day before mentioned, the suit will be heard and determined in your absence.

SCHEDULE

1) ಮೈಸೂರು ನಗರ, ಜಿಲ್ಲೆ ಮೊಹಲ್ಲಾ, ಶ್ರೀನಿವಾಸ ಅಗ್ರಹಾರ, ರಾಮಾನುಜ ರಸ್ತೆ, 10ನೇ ಅಡ್ಡ ರಸ್ತೆಯಲ್ಲಿರುವ ಪೂರ್ವ ಪಶ್ಚಿಮ 15 ಅಡಿ ಉತ್ತರ ದಕ್ಷಿಣ 40 ಅಡಿ ಅಳತೆಯುಳ್ಳ 788/30 ಹೊಸ ಎಫ್ 30ನೇ ನಂಬರುಗಳ ನಿವೇಶನ ಮತ್ತು ಇತರ ಒಂದು ಭಾಗದಲ್ಲಿ ಕಟ್ಟಿರುವ ಕಟ್ಟಡ, ಇದಕ್ಕೆ ಚೆಕ್ಕುಬಂದಿ: ಪೂರ್ವಕ್ಕೆ – ಗಲ್ಲಿ, ಪಶ್ಚಿಮಕ್ಕೆ – ಶರವಣಿಯವರ ಮನೆ, ದಕ್ಷಿಣಕ್ಕೆ– 10ನೇ ಅಡ್ಡ ರಸ್ತೆ, ಉತ್ತರಕ್ಕೆ – ಗಲ್ಲಿ.

2) ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕು, ಕಿರುಗಾವಲು ಗ್ರಾಮದಲ್ಲಿರುವ 12 ಕಂಬದ ತೊಟ್ಟಿ ಮನೆಯಲ್ಲಿ ಉತ್ತರಾರ್ಧ, ಕೆ ಪಿ ಮಲ್ಲಾರಾಧ್ಯರ ಹಿಸ್ಸೆ, ಚಾತಾ, ದಕ್ಷಿಣಾರ್ಧದಲ್ಲಿ ಪಶ್ಚಿಮಾರ್ಧದ ಮನೆ, ಇದಕ್ಕೆ ಸೇರಿದ ದನದ ಕೊಟ್ಟಿಗೆ, ಮೇಲಿನ ಒಟ್ಟು ಮನೆ, ಚೆಕ್ಕುಬಂದಿ: ಪೂರ್ವಕ್ಕೆ ಪಟ್ಟಸ್ವಾಮಾರಾಧ್ಯರ ಮನೆ, ಪಶ್ಚಿಮಕ್ಕೆ ಅನ್ನದಾನಪ್ಪರವರ ನಿವೇಶನದ, ದಕ್ಷಿಣಕ್ಕೆ ಪುಟ್ಟಸಾಮಾರಾಧ್ಯರ ಮನೆ, ಉತ್ತರಕ್ಕೆ ಬೀದಿ.

3) ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕು, ಕಿರುಗಾವಲು ಗ್ರಾಮದಲ್ಲಿ ಪೂರ್ವಕ್ಕೆ ಗಲ್ಲಿ ಮತ್ತು ರಂಗಪ್ಪನ ಮಲ್ಲಪ್ಪನ ಮನೆ, ಪಶ್ಚಿಮಕ್ಕೆ ಪುಟ್ಟಸ್ವಾಮಿ ಆರಾಧ್ಯರ ಮನೆ, ಉತ್ತರಕ್ಕೆ ಬೀದಿ, ದಕ್ಷಿಣಕ್ಕೆ ಗಲ್ಲಿ, ಈ ಮಧ್ಯ ಇರುವ ನಿವೇಶನದಲ್ಲಿ ಪೂರ್ವಾರ್ಧದ ಕೆ ಪಿ ಮಲ್ಲಾರಾಧ್ಯರ ಹಿಸ್ಸೆ, ಚಾತಾ, ಪಶ್ಚಿಮಾರ್ಧ ಮತ್ತು ಅದಕ್ಕೆ ಸೇರಿದಂತೆ ದಕ್ಷಿಣಕ್ಕಿರುವ ಮುದುಕಮ್ಮನ ಪುತ್ತಲಿನಲ್ಲಿ ಪಶ್ಚಿಮಾರ್ಧ.

4) ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕು, ಕಿರುಗಾವಲು ಗ್ರಾಮದಲ್ಲಿ ಪೂರ್ವಕ್ಕೆ ಅನ್ನದಾನಪ್ಪನವರ ನಿವೇಶನ, ಪಶ್ಚಿಮಕ್ಕೆ ತಿರುಗಾಡುವ ಓಣಿ, ಉತ್ತರಕ್ಕೆ ಬೇಲಿ ಮತ್ತು ದಕ್ಷಿಣಕ್ಕೆ ಓಣಿ, ಈ ಮಧ್ಯ ಇರುವ ನಿವೇಶನದಲ್ಲಿ ದಕ್ಷಿಣಾರ್ಧದ ಕೆ ಪಿ ಮಲ್ಲಾರಾಧ್ಯರ ಹಿಸ್ಸೆ, ಚಾತಾ, ಉತ್ತರಾರ್ಧದಲ್ಲಿ ಪೂರ್ವಕ್ಕೆ ಅರ್ಧ ನಿವೇಶನ ಮತ್ತು ಈ ನಿವೇಶನದಲ್ಲಿರುವ ಹುಣಸೇಮರ ಮಧ್ಯ.

5) ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕು, ಕಿರುಗಾವಲು ಗ್ರಾಮದಲ್ಲಿ ಪೂರ್ವಕ್ಕೆ ಬೀದಿ, ಪಶ್ಚಿಮಕ್ಕೆ ಅಮ್ಮ ಸಾಹೇಬರ ಹೊಲ, ಉತ್ತರಕ್ಕೆ ಹಜಮರ ಚಿಕ್ಕ ಹೈದ ವಗೈರೆ ಹಿತ್ತಲು ದಕ್ಷಿಣಕ್ಕೆ ಪುಟ್ಟಸಾಮಾರಾಧ್ಯರ ಕರಿ ಬಾವಿ ಹಿತ್ತಲು ಈ ಮಧ್ಯ ಇರುವ ಬಾವಿ ಹಿತ್ತಲಿನಲ್ಲಿ ಅರ್ಧ ಬಾವಿ ಮಧ್ಯ.

6) ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕು, ಕಿರುಗಾವಲು ಗ್ರಾಮದಲ್ಲಿ ಹೂವಿನ ಕೊಪ್ಪಲು ಗ್ರಾಮಕ್ಕೆ ಸೇರಿದ ಸರ್ವೆ ನಂಬರ್ 18 ರಲ್ಲಿ ಪಶ್ಚಿಮಕ್ಕೆ 2 ಎಕರೆ 17 ಗುಂಟೆ ಮತ್ತು ಡಿಟ್ಟೋ ಗ್ರಾಮದಲ್ಲಿರುವ ಸರ್ವೆ ನಂಬರ್ 19/1 ರಲ್ಲಿ 2 ಎಕರೆ, ಒಟ್ಟು 4 ಎಕರೆ 17 ಗುಂಟೆ ಪೈಕಿ ದಕ್ಷಿಣಾರ್ಧ 2 ಎಕರೆ 8 1/2 ಗುಂಟೆ, ಈ ಎರಡು ಸರ್ವೆ ನಂಬರುಗಳಿಗೆ ಚೌತರ್ಫ ಪೂರ್ವಕ್ಕೆ ಮಲ್ಲಾರಾಧ್ಯರ ಜಮೀನು ಮತ್ತು ಓಣಿ, ಪಶ್ಚಿಮಕ್ಕೆ ಸೊತ್ತೇಗೌಡ ಮತ್ತು ವಗೈರೇರ ಜಮೀನು, ಉತ್ತರಕ್ಕೆ ಸರ್ಕಾರಿ ಜಮೀನು ಮತ್ತು ಓಣಿ ದಕ್ಷಿಣಕ್ಕೆ ಎಲ್ಲೆ ಮತ್ತು ಕಾಲುವೆ.

7) ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕು, ಕಿರುಗಾವಲು ಗ್ರಾಮದಲ್ಲಿ ಹೂವಿನ ಕೊಪ್ಪಲು ಗ್ರಾಮಕ್ಕೆ ಸೇರಿದ ಸರ್ವೆ ನಂಬರ್ 32 ಕ್ಕೆ ಚೌತರ್ಫ ಪೂರ್ವಕ್ಕೆ ಓಣಿ, ಪಶ್ಚಿಮಕ್ಕೆ ಮತ್ತು ದಕ್ಷಿಣಕ್ಕೆ ಚನ್ನೇಗೌಡ ಮತ್ತು ವಗೈರೇರ ಜಮೀನು ಉತ್ತರಕ್ಕೆ ಹೈ ರೋಡು. ಈ ನಂಬರಿನ ಒಟ್ಟು ವಿಸ್ತೀರ್ಣದಲ್ಲಿ ಪಶ್ಚಿಮದ ಕಡೆ 1 ಎಕರೆ 20 ಗುಂಟೆ ಚಾತಾ ಉಳಿದ 2 ಎಕರೆ 23 ಗುಂಟೆಯಲ್ಲಿ 1 ಎಕರೆ 3 ಗುಂಟೆ.

8)ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕು, ಕಿರುಗಾವಲು ಗ್ರಾಮದಲ್ಲಿ ಹೂವಿನ ಕೊಪ್ಪಲು ಗ್ರಾಮಕ್ಕೆ ಸೇರಿದ ಸರ್ವೆ ನಂಬರ್ 43 ರಲ್ಲಿ 5 ಎಕರೆ 20 ಗುಂಟೆ ಜಮೀನಿಗೆ ಚೌತರ್ಫ ಪೂರ್ವಕ್ಕೆ ಲಿಂಗಯ್ಯ ವಗೈರೇರ ಜಮೀನು, ಪಶ್ಚಿಮಕ್ಕೆ ಓಣಿ ಉತ್ತರಕ್ಕೆ ಹೈ ರೋಡು ಮತ್ತು ದಕ್ಷಿಣಕ್ಕೆ ಕಟ್ಟೆ ಲಿಂಗಯ್ಯ ವಗೈರೇರ ಜಮೀನು. ಅದರ ಪೈಕಿ ಉತ್ತರಾರ್ಧ 2 ಎಕರೆ 30 ಗುಂಟೆಯಲ್ಲಿ ಪೂರ್ವಕ್ಕೆ 1 ಎಕರೆ 10 ಗುಂಟೆ ಚಾತಾ ಉಳಿಕೆಯಾದ 1 ಎಕರೆ 20 ಗುಂಟೆಯಲ್ಲಿ ದಕ್ಷಿಣಾರ್ಧ 30 ಗುಂಟೆ.

Given under my hand and seal of the court, this 20 day Jan of 2023.

By order of Court
Judge

Sd/- A.S.Nataraja, B.Sc., LL.M.,
Advocate,
No.116, 1st Floor, Banumaiah Chowk, Mysuru.

IN THE COURT OF THE CIVIL JUDGE AND JMFC AT KUSHALNAGARA

CRMC 142/2022
Petitioner : K.C. Nanjundaswamy & others
V/s
Respondent: Tahashildar

COURT NOTICE

The 1st Petitioner in the above case Mr. K.C. Nanjundaswamy S/o Late K.C.Channappashetty, Age 58 years, R/o Kanive Village, Kushalnagara, Kodagu District, Has filed a petition against Respondent namely Birth and Death Registrar, Tahashildar of Somwarpet and others for seeking a death certificate of Grand Father (Mother's Father) Mr. Siddalingappa @ Nanjappa Shetty who has died on 19-05-1962 at Kanive (Rampura) Village, Kushalnagara, Kodagu District.

Hence anyone who is having objection for issuance of Death certificate of Mr. Siddalingappa @ Nanjappa Shetty is hereby called upon to appear in person or through a pleader in CRMC no 142/2022 before the Civil judge and JMFC Court at Kushalnagara Kodagu District on dated : 04-03-2023 at 11 am without fail. Failing Which tha above case shall be decided accordingly.

By the order of the court
Sd/- Cheif Ministrerila Officer
Civil Judge and JMFC Court,
Kushalnagar.

Sd/- Advocate for Petitioners
Kushalnagara, Date:31-01-2023

IN THE COURT OF THE CIVIL JUDGE AND JMFC AT KUSHALNAGARA

CRMC 143/2022
Petitioner : K.C. Nanjundaswamy & others
V/s
Respondent: Tahashildar

COURT NOTICE

The 1st Petitioner in the above case Mr. K.C. Nanjundaswamy S/o Late K.C.Channappashetty, Age 58 years, R/o Kanive Village, Kushalnagara, Kodagu District, Has filed a petition against Respondent namely Birth and Death Registrar, Tahashildar of Somwarpet and others for seeking a death certificate of Grand Father (Father's Father) Mr. K.Channabasappa who has died on 11-05-1952 at Kanive (Rampura) Village, Kushalnagara, Kodagu District.

Hence anyone who is having objection for issuance of Death certificate of Mr. K Channabasappa is hereby called upon to appear in person or through a pleader in CRMC no 143/2022 before the Civil judge and JMFC Court at Kushalnagara Kodagu District on dated : 04-03-2023 at 11 am without fail. Failing Which tha above case shall be decided accordingly.

By the order of the court
Sd/- Cheif Ministrerila Officer
Civil Judge and JMFC Court,
Kushalnagar.

Sd/- Advocate for Petitioners
Kushalnagara, Date:31-01-2023

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.


ಝಾನ್ಸಿಲಕ್ಷ್ಮೀಬಾಯಿ ರಸ್ತೆ, ಮೈಸೂರು–570005

ಸಂಖ್ಯೆ:ಮೈನಪ್ರಾ:ನಯೋ:ಶಾ:ಭೂಉಬ:ನಯೋ–3:597:2022–23 ದಿನಾಂಕ: 31.01.2023

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮ ಯೋಜನಾ ಕಾಯ್ದೆ 1961ರ ಪ್ರಕರಣ 14(ಎ)ರನ್ವಯ

ಮೈಸೂರು ತಾಲ್ಲೂಕು, ವರುಣಾ ಹೋಬಳಿ, ಮದರಗಳ್ಳಿ ಗ್ರಾಮದ ಸರ್ವೆ ನಂ. 48/2ರಲ್ಲಿ 02 ಎಕರೆ – 16 ಗುಂಟೆ, 49/1 ರಲ್ಲಿ 04 ಎಕರೆ – 01 ಗುಂಟೆ ಮತ್ತು 89 ರಲ್ಲಿ 03 ಎಕರೆ–08 ಗುಂಟೆ ವಿಸ್ತೀರ್ಣದ ಜಮೀನಿನ ಭೂ ಉಪಯೋಗವನ್ನು ಕೆ.ಟಿ.ಸಿ.ಪಿ ಕಾಯ್ದೆ 1961 ಪ್ರಕರಣ 14(ಎ)ರನ್ವಯ ಕೈಗಾರಿಕಾ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡುವಂತೆ ಶ್ರೀ ಓಂಕಾರಪ್ಪ ರವರು ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯಿಂದ "ಈ ಜಮೀನುಗಳಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು ಮತ್ತು ಮಧ್ಯಮ ವರ್ಗದವರಿಗೆ ಹಾಗೂ ಸಾರ್ವಜನಿಕರಿಗೆ ಅಗತ್ಯ ಸೌಲಭ್ಯ ದೊರೆಯುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವ ಸಂದರ್ಭದಲ್ಲಿ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಮತ್ತು ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶದ ಅಭಿವೃದ್ಧಿ ಹೊಂದುತ್ತದೆ" ಎಂದು ಸಾರ್ವಜನಿಕ ಹಿತಾಸಕ್ತಿ ಕುರಿತು ಮನವಿಯಲ್ಲಿ ತಿಳಿಸಿರುತ್ತಾರೆ. ಸದರಿ ಜಮೀನಿನ ಭೂ ಉಪಯೋಗದ ಬದಲಾವಣೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಸಾರ್ವಜನಿಕರು ಈ ಪ್ರಕಟಣೆಯ ಪತ್ರಿಕೆಯಲ್ಲಿ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ನಗರ ಯೋಜಕ ಸದಸ್ಯರು, ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು–570005 ಇವರಿಗೆ ಮುದ್ದಾಂ ಅಥವಾ ನೋಂದಾಯಿತ ಅಂಚೆ ಮೂಲಕ ತಲುಪಿಸಬಹುದಾಗಿದೆ.



ಸಹಿ/– ನಗರ ಯೋಜಕ ಸದಸ್ಯರು, ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.

ರಾಜ್ಯ ರಾಜಕಾರಣಕ್ಕೆ ಸಂಸದೆ ಸುಮಲತಾ ಬರಲಿ

ಮಂಡ್ಯ, ಮದ್ದೂರಿನಿಂದ ಸ್ಪರ್ಧೆಗೆ ಬೆಂಬಲಿಗರ ಸಾಮೂಹಿಕ ಒತ್ತಾಯ



ಮಂಡ್ಯ, ಜ.31– ಸಂಸದೆ ಸುಮಲತಾ ಅಂಬರೀಷ್ ರಾಜ್ಯ ರಾಜಕಾರಣಕ್ಕೆ ಬರಬೇಕೆಂದು ಆಗ್ರಹಿಸಿರುವ ಬೆಂಬಲಿಗರು, ಬಿಜೆಪಿ ಅಥವಾ ಕಾಂಗ್ರೆಸ್ ಸೇರ್ಪಡೆ ಬಗ್ಗೆ ತಮ್ಮದೇ ಆದ ಅಭಿಪ್ರಾಯ ವ್ಯಕ್ತಪಡಿಸಿ, ಮುಂಬರುವ ಚುನಾವಣೆಯಲ್ಲಿ ಮಂಡ್ಯ ಅಥವಾ ಮದ್ದೂರಿನಿಂದ ಸ್ಪರ್ಧಿಸಲು ಸಲಹೆ ನೀಡಿದ್ದಾರೆ.

ನಗರದ ಕರ್ನಾಟಕ ಸಂಘದಲ್ಲಿ ಮಂಗಳವಾರ ನಡೆದ ಸುಮಲತಾ ಬೆಂಬಲಿಗರ ಸಭೆಯಲ್ಲಿ ಪಾಲ್ಗೊಂಡಿದ್ದ ಮಂಡ್ಯ ಲೋಕಸಭಾ ಕ್ಷೇತ್ರ ವ್ಯಾಪ್ತಿಯ 7 ತಾಲೂಕಿನ ಮುಖಂಡರು ತಮ್ಮದೇ ಆದ ಅಭಿಪ್ರಾಯ ವ್ಯಕ್ತಪಡಿಸಿದರು.

ಮುಖಂಡ ಹನಕೆರೆ ಶಶಿಕುಮಾರ್ ಮಾತನಾಡಿ, ಸಭೆಯಲ್ಲಿ ಎಲ್ಲರೂ ಸುಮಲತಾ ಅವರು ರಾಜ್ಯ ರಾಜಕಾರಣಕ್ಕೆ ಬರಬೇಕೆಂಬ ಇಂಗಿತ ವ್ಯಕ್ತಪಡಿಸಿದ್ದಾರೆ. ಜಿಲ್ಲೆ ಅಭಿವೃದ್ಧಿ ದೃಷ್ಟಿಯಿಂದ ಸುಮಲತಾ ಕೇವಲ ಶಾಸಕರಾಗುವುದು ಮಾತ್ರವಲ್ಲದೇ ಮಂತ್ರಿ ಆಗಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಸುಮಲತಾ ಅವರು ಬೆಂಬಲಿಗರ ಆಶೋತ್ತರ ಈಡೇರಿಸುತ್ತಾರೆ ಎಂಬ ವಿಶ್ವಾಸ ನಮಗಿದೆ ಎಂದರು. ಸುಮಲತಾ ರಾಜ್ಯ ರಾಜಕಾರಣ ಪ್ರವೇಶಿಸಿ ಜಿಲ್ಲೆಯ ಯಾವುದಾದರೊಂದು ಕ್ಷೇತ್ರ ಆಯ್ಕೆ ಮಾಡಿಕೊಳ್ಳಲಿ. ಅವರು ಕಾಂಗ್ರೆಸ್ ಅಥವಾ ಬಿಜೆಪಿ ಯಾವ ಪಕ್ಷಕ್ಕೆ ಸೇರ್ಪಡೆಯಾಗಬೇಕು ಎಂಬ ಬಗ್ಗೆ ಅಭಿಪ್ರಾಯ ಸಂಗ್ರಹಿಸಿ ಸುಮಲತಾ ಅವರಿಗೆ ತಿಳಿಸುತ್ತೇವೆ. ಅಂತಿಮವಾಗಿ ಅವರು ಯಾವ ನಿರ್ಧಾರ ತೆಗೆದುಕೊಳ್ಳುತ್ತಾರೋ, ಅದಕ್ಕೆ ನಾವೆಲ್ಲ ಬದ್ಧರಾಗಿರುತ್ತೇವೆ ಎಂದರು.

ಸಭೆಗೆ ಮಂಡ್ಯ ಲೋಕಸಭಾ ಕ್ಷೇತ್ರದ 8 ತಾಲೂಕಿನಿಂದ ಪ್ರತಿ ಕ್ಷೇತ್ರಕ್ಕೆ 15 ಮಂದಿಯಂತೆ ಬೆಂಬಲಿಗರು ಆಗಮಿಸಿದ್ದಾರೆ. ವಿಧಾನಸಭಾ ಚುನಾವಣೆ ಹತ್ತಿರವಾಗುತ್ತಿರುವುದರಿಂದ ಸುಮಲತಾ ಬೆಂಬಲಿಗರು ಯಾರನ್ನು ಬೆಂಬಲಿಸಬೇಕೆಂಬ ಗೊಂದಲದಲ್ಲಿದ್ದರು. ಈ ನಿಟ್ಟಿನಲ್ಲೇ ನಮ್ಮ ನಾಯಕಿ ಸುಮಲತಾ ಅವರು ರಾಜ್ಯ ರಾಜಕಾರಣಕ್ಕೆ ಒಂದು ಪಕ್ಷದ ಮೂಲಕ ಬರಲಿ ಎಂಬುದು ನಮ್ಮೆಲ್ಲರ ಒತ್ತಾಯ ಎಂದರು. ಇದು ಕೇವಲ ಬೆಂಬಲಿಗರ ಸಭೆ. ಕಾರ್ಯಕರ್ತರ ಸಭೆಯಲ್ಲ. ಮುಂದಿನ ದಿನಗಳಲ್ಲಿ ಸುಮಲತಾ ಅವರನ್ನು ಬೆಂಬಲಿಸಿ ಸಾವಿರಾರು ಕಾರ್ಯಕರ್ತರ ಸಭೆ ಹಮ್ಮಿಕೊಳ್ಳಲಾಗುವುದು. ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್, ಬಿಜೆಪಿ, ರೈತ ಸಂಘ ಹೀಗೆ ಎಲ್ಲರೂ ಸುಮಲತಾ ಅವರನ್ನು ಬೆಂಬಲಿಸಿದ್ದಾರೆ. ಸಂಸದರು ಒಳ್ಳೆಯ ನಿರ್ಧಾರ ಕೈಗೊಳ್ಳಲಿದ್ದಾರೆ ಎಂದರು.

ಕಾಂಗ್ರೆಸ್‌ನ ಕೆಲ ಮುಖಂಡರು ಈ ಸಭೆಗೆ ಹೋಗಬಾರದೆಂದು ಸುಮಲತಾ ಬೆಂಬಲಿಗರಿಗೆ ಬೆದರಿಸಿದ್ದಾರೆ ಎಂಬ ಆರೋಪ ಕೇಳಿ ಬಂದಿದೆ. ಬಹುಶಃ ಇದು ಬೆದರಿಸಿದ ನಾಯಕರಿಗೆ ತಮ್ಮ ಅಸ್ತಿತ್ವ ಹೋಗಬಹುದೆಂಬ ಭಯ ಕಾಡುತ್ತಿರಬಹುದು. ಅದಕ್ಕೂ ನಮಗೂ ಸಂಬಂಧವಿಲ್ಲ. ಮುಂದಿನ ಚುನಾವಣೆಯಲ್ಲಿ ಸುಮಲತಾ ಅವರು ರಾಜ್ಯ ರಾಜಕಾರಣಕ್ಕೆ ಮರಳಿ ಶಾಸಕರಾಗಬೇಕೆಂಬುದೇ ನಮ್ಮ ಒತ್ತಾಯ ಎಂದರು.

ಸಭೆಯಲ್ಲಿ ಅಖಿಲ ಕರ್ನಾಟಕ ಅಂಬರೀಷ್ ಅಭಿಮಾನಿಗಳ ಸಂಘದ ಅಧ್ಯಕ್ಷ ಬೇಲೂರು ಸೋಮಶೇಖರ್, ಸುಮಲತಾ ಬೆಂಬಲಿಗರಾದ ಶೆಟ್ಟಹಳ್ಳಿ ಲಿಂಗರಾಜು, ಬಿ.ವಿವೇಕಾನಂದ ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ಶ್ರೀರಂಗಪಟ್ಟಣ, ಜ.31– ಪಟ್ಟಣದಲ್ಲಿ ನಡೆದ ಜಾಯಿಂಟ್ ವ್ಹೀಲ್ ರೇಡ್ ಅವಘಡದಂತಹ ಘಟನೆಯನ್ನೇ ನೋಡಿರಲಿಲ್ಲ. ಘಟನೆ ವೀಡಿಯೋ ನೋಡಿ ನನ್ನ ಮನಸ್ಸಿಗೆ ನೋವಾಗಿದೆ ಎಂದು ಶಾಸಕ ರವೀಂದ್ರ ಶ್ರೀಕಂಠಯ್ಯ ಬೇಸರ ವ್ಯಕ್ತಪಡಿಸಿದರು.

ತಾಲೂಕಿನ ಬಳ್ಳೇಕೆರೆ, ನೇರಳಕೆರೆ ಹಾಗೂ ಶ್ರೀನಿವಾಸ ಅಗ್ರಹಾರ ಗ್ರಾಮಗಳಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಿ ಮಾತನಾಡಿದ ಅವರು, ಘಟನೆಯಿಂದ ಬಾಲಕಿಯ ಇಡೀ ತಲೆ ಚರ್ಮ ಕೂದಲು ಸಹಿತ ಕಿತ್ತು ಬಂದಿದೆ. ಯಾವುದೇ ಮುನ್ನೆಚ್ಚರಿಕೆ ವಹಿಸದಿರುವುದರಿಂದ ಈ ಘಟನೆ ನಡೆದಿದೆ. ನಾನು ಸಹ ವೈಯಕ್ತಿಕ ಪರಿಹಾರ ಕಳುಹಿಸಿಕೊಟ್ಟಿದ್ದೇನೆ ಈ ಸಂಬಂಧ ಮುಖ್ಯಮಂತ್ರಿಗಳ ಜೊತೆ ಚರ್ಚಿಸಿ, ವೈದ್ಯಕೀಯ ವೆಚ್ಚವನ್ನು ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಭರಿಸಿಕೊಡುವುದಾಗಿ ಭರವಸೆ ನೀಡಿದರು.

ಜಿಲ್ಲೆ ಅಭಿವೃದ್ಧಿಗೆ ಶಾಸಕರು ಸಹಕರಿಸುತ್ತಿಲ್ಲ ಎಂಬ ಸಂಸದರ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ಕಳೆದ ನಾಲ್ಕುವರೆ ವರ್ಷದಿಂದ ಕ್ಷೇತ್ರದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕೆಲಸಗಳನ್ನು ಜನರು ಗಮನಿಸಿದ್ದಾರೆ. ಸಂಸದೆಯಾಗಿ ಕನಿಷ್ಠ ಶ್ರೀರಂಗಪಟ್ಟಣದಲ್ಲಿ ರೈಲು ನಿಲುಗಡೆಗೆ ಸಹಕರಿಸಲಿ ಎಂದು ತಿರುಗೇಟು ನೀಡಿದರು. ಈ ವೇಳೆ ಸ್ಥಳೀಯ ಜನಪ್ರತಿನಿಧಿಗಳು, ಅಧಿಕಾರಿಗಳು ಸೇರಿದಂತೆ ಇತರರಿದ್ದರು.

ಇಂದು ಶ್ರೀರಾಮೇಶ್ವರ ಸಮುದಾಯ ಭವನ ಲೋಕಾರ್ಪಣೆ



ಚಿನಕುರಳಿ, ಜ.31– ಗ್ರಾಮದಲ್ಲಿ ಫೆ1ರಂದು ಶ್ರೀರಾಮೇಶ್ವರ, ಶ್ರೀಆಂಜನೇಯಸ್ವಾಮಿ ಮತ್ತು ಪರಿವಾರ ದೇವತೆಗಳ ಹಾಗೂ ಶ್ರೀ ರಾಮೇಶ್ವರ ಸಮುದಾಯ ಭವನ ಲೋಕಾರ್ಪಣೆ ಕಾರ್ಯಕ್ರಮ ನಡೆಯಲಿದೆ ಎಂದು ಜಿಪಂ ಮಾಜಿ ಸದಸ್ಯ ಸಿ.ಅಶೋಕ್, ಯಜಮಾನ್ ತಮ್ಮಣ್ಣೇಗೌಡ ತಿಳಿಸಿದರು.

ಚಿನಕುರಳಿ ಗ್ರಾಮದಲ್ಲಿ ಜಂಟಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಆದಿಚುಂಚನಗಿರಿ ಪೀಠಾಧ್ಯಕ್ಷ ಶ್ರೀನಿರ್ಮಲಾನಂದನಾಥ ಸ್ವಾಮೀಜಿ, ಶ್ರೀಪುರುಷೋತ್ತಮನಂದನಾಥ ಸ್ವಾಮೀಜಿ ಸಮಾರಂಭದ ಸಾನ್ನಿಧ್ಯ ವಹಿಸಲಿದ್ದಾರೆ. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ದೇವಸ್ಥಾನ ಹಾಗೂ ಸಮುದಾಯ ಭವನ ಲೋಕಾರ್ಪಣೆಗೊಳಿಸಿ, ಸಮಾರಂಭಕ್ಕೆ ಚಾಲನೆ ನೀಡುವರು. ಶಾಸಕ ಸಿ.ಎಸ್.ಪುಟ್ಟರಾಜು ಅಧ್ಯಕ್ಷತೆ ವಹಿಸುವರು ಎಂದು ತಿಳಿಸಿದರು.

ಶಾಸಕ ಸಿ.ಎಸ್.ಪುಟ್ಟರಾಜು ನೇತೃತ್ವದಲ್ಲಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀರಾಮೇಶ್ವರ ಸಮುದಾಯ ಭವನ, ಶ್ರೀರಾಮೇಶ್ವರಸ್ವಾಮಿ ದೇವಸ್ಥಾನ, ಮಹಾಗಣಪತಿ ದ್ವಾದಶ ವಿಮಾನ ಗೋಪುರ ಬ್ರಹ್ಮ ಕುಂಭಾಭಿಷೇಕ, ಶ್ರೀದಣ್ಣಮ್ಮ ದೇವಿ ವಿಮಾನ ಗೋಪುರ ಸ್ಥಾಪನೆ ಹಾಗೂ ಕುಂಭಾಭಿಷೇಕ, ಅರಳಿವೃಕ್ಷ ವಿಮಾನ ಮಹೋತ್ಸವ, ಶ್ರೀರಾಮಾಂಜನೇಯಸ್ವಾಮಿ ಮಹಾದ್ವಾರ ಉದ್ಘಾಟನೆ, ಶ್ರೀಅಂಕನಾಥೇಶ್ವರ ಶ್ರೀಮನೆ ಮಂಚಮ್ಮ, ಶ್ರೀಮಾಸ್ತಮ್ಮ, ಶ್ರೀಆದಿಲಕ್ಷ್ಮಿ, ಶ್ರೀಬೋರೇದೇವರು, ಶ್ರೀಹಿರಿದೇವಮ್ಮ, ಶ್ರೀಮೂಗ್ ಮಂಚಮ್ಮ, ಶ್ರೀಗಾಳಿ ಆಂಜನೇಯಸ್ವಾಮಿ, ಶ್ರೀಮಾರಮ್ಮ, ಶ್ರೀಲಕ್ಷ್ಮಿ ಶ್ರೀರಾಮ ಮಂದಿರ ವಿಶೇಷ ಪೂಜೆ, ಶ್ರೀಆಂಜನೇಯಸ್ವಾಮಿಯ ವಿಮಾನಗೋಪುರ ಕಳಸ ಸ್ಥಾಪನೆ, ಕುಂಭಾಭಿಷೇಕ ಹೆಬ್ಬಾಗಿಲು ಉದ್ಘಾಟನೆ, ಅರಳಿ ವೃಕ್ಷ ವಿವಾಹ ಮಹೋತ್ಸವ, ಶ್ರೀರಾಮೇಶ್ವರ ದೇವರ ವಿಮಾನ ಗೋಪುರ, ರಾಜಗೋಪುರ ಕಳಸಸ್ಥಾಪನೆ, ಶ್ರೀಪಟ್ಟಲದಮ್ಮ ದೇವಿ ವಿಮಾನ ಗೋಪುರ ಸ್ಥಾಪನೆ ಹಾಗೂ ಕುಂಭಾಭಿಷೇಕ, ಶ್ರೀರಾಮೇಶ್ವರ ಸಮುದಾಯ ಭವನದ ಉದ್ಘಾಟನೆ ಹಾಗೂ ಗಿರಿಜಾ ಕಲ್ಯಾಣ ಗುರುಪಾದುಕ ಪೂಜೆ ನಡೆಯಲಿದೆ ಎಂದರು.

ಕಾರ್ಯಕ್ರಮಕ್ಕೂ ಮುನ್ನಾ ಗ್ರಾಮದ ಗಣಪತಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ಶ್ರೀಆದಿಚುಂಚನಗಿರಿ ಪೀಠಾಧ್ಯಕ್ಷ ಡಾ.ಶ್ರೀನಿರ್ಮಲಾನಂದನಾಥ ಸ್ವಾಮೀಜಿ ಅವರನ್ನು ಪೂರ್ಣಕುಂಭ, ವಿವಿಧ ಕಲಾತಂಡಗಳೊಂದಿಗೆ ಮೆರವಣಿಗೆಯಲ್ಲಿ ವೇದಿಕೆಗೆ ಕರೆತರಲಾಗುವುದು ಎಂದರು.

ಕಾರ್ಯಕ್ರಮಕ್ಕೆ ಚಿನಕುರಳಿ, ಅಂಕೇಗೌಡನ ಕೊಪ್ಪಲು, ಕಣಿವೆಕೊಪ್ಪಲು, ಹೊನಗಾನಹಳ್ಳಿ, ಕೆ.ಮಲ್ಲೇನಹಳ್ಳಿ, ಚಿಕ್ಕಬೋಗನಹಳ್ಳಿ, ಲಿಂಗಾಪುರ ಗ್ರಾಮದ ಯಜಮಾನರು, ಮುಖಂಡರು ಸಹಕಾರ ನೀಡಿದ್ದು, ಕಾರ್ಯಕ್ರಮ ಯಶಸ್ವಿಗೆ ಸಿದ್ಧತೆ ಕೈಗೊಳ್ಳಲಾಗಿದೆ ಎಂದರು.

ಗೋಷ್ಠಿಯಲ್ಲಿ ತಾಪಂ ಮಾಜಿ ಸದಸ್ಯ ಸಿ.ಎಸ್.ಗೋಪಾಲಗೌಡ, ಲಾರಿ ಮಾಲೀಕರ ಸಂಘದ ಅಧ್ಯಕ್ಷ ಸಿ.ಶಿವಕುಮಾರ್, ಗ್ರಾಪಂ ಅಧ್ಯಕ್ಷ ಪಾಪಣ್ಣ, ವಿಎಸ್‌ಎಸ್‌ಎನ್‌ಬಿ ಅಧ್ಯಕ್ಷ ಮೊಗ್ಗಣ್ಣಗೌಡ, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಸಿ.ಪ್ರಕಾಶ್, ಯಜಮಾನರಾದ ತಮ್ಮಣ್ಣೇಗೌಡ, ಸುಬ್ಬೇಗೌಡ, ಎ.ಎಸ್. ರಮೇಶ್, ಸಿದ್ದೇಗೌಡ, ದೊಡ್ಡಣ್ಣ, ಯೋಗಣ್ಣ, ಲಕ್ಷ್ಮಣ್, ರಾಜೇಗೌಡ, ಸಿಂಗ್ರೀಗೌಡ, ಅನ್ನದಾನಿಗೌಡ, ಗಿರಿಗೌಡ, ನಾಗಣ್ಣ ಸೇರಿದಂತೆ ಇನ್ನಿತರರಿದ್ದರು.

ಚಿನಕುರಳಿಯಲ್ಲಿ ಪಾರ್ಕ್‌ಗಳ ಉದ್ಘಾಟನೆ

ಶ್ರೀರಾಮೇಶ್ವರ ದೇವಸ್ಥಾನದ ಹಿಂಭಾಗ ನಿರ್ಮಿಸಿರುವ ನೂತನ ಪಾರ್ಕ್‌ಗಳಿಗೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ, ರಾಷ್ಟ್ರಕವಿ ಕುವೆಂಪು ಹಾಗೂ ಡಾ.ಬಾಲಗಂಗಾಧರನಾಥ ಸ್ವಾಮೀಜಿ ಹೆಸರಿಡಲಾಗಿದ್ದು, ಈ ಪಾರ್ಕ್‌ಗಳನ್ನು ಶ್ರೀನಿರ್ಮಲಾನಂದನಾಥ ಸ್ವಾಮೀಜಿ ಉದ್ಘಾಟಿಸಲಿದ್ದಾರೆ. ದೇವಸ್ಥಾನಗಳ ಲೋಕಾರ್ಪಣೆ ಸಮಾರಂಭಕ್ಕೆ ಚಿನಕುರಳಿ ಸೇರಿದಂತೆ ಸುತ್ತಮುತ್ತಲ ಗ್ರಾಮಗಳಿಂದ ಸಾವಿರಾರು ಭಕ್ತರು, ಸಾರ್ವಜನಿಕರು ಆಗಮಿಸುವ ಹಿನ್ನೆಲೆಯಲ್ಲಿ 20 ಸಾವಿರಕ್ಕೂ ಅಧಿಕ ಮಂದಿಗೆ ಊಟದ ವ್ಯವಸ್ಥೆ ಮಾಡಲಾಗಿದೆ. ಸುತ್ತಮುತ್ತಲ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವ ಮೂಲಕ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

ವಿದ್ಯುನ್ಮಾನ ಮತಯಂತ್ರಗಳ ಪರಿಶೀಲನೆ ಪ್ರಾರಂಭ

ಮಂಡ್ಯ, ಜ.31– ಮುಂಬರುವ ಸಾರ್ವತ್ರಿಕ ವಿಧಾನಸಭಾ ಚುನಾವಣೆ–2023ರ ವಿದ್ಯುನ್ಮಾನ ಮತಯಂತ್ರಗಳ ಪ್ರಥಮ ಹಂತದ ಪರಿಶೀಲನಾ ಕಾರ್ಯ ಜಿಲ್ಲೆಯಲ್ಲಿ ಪ್ರಾರಂಭವಾಗಿದೆ.

ಹೆಚ್ಚುವರಿ ಮುಖ್ಯ ಚುನಾವಣಾಧಿಕಾರಿ ರಾಜೇಂದ್ರ ಚೋಳನ್ ಮಂಗಳವಾರ ಮತಯಂತ್ರಗಳ ಭದ್ರತಾ ಕೊಠಡಿಗೆ ಭೇಟಿ ನೀಡಿ ಕೆಲಸಗಳ ಪರಿಶೀಲನೆ ನಡೆಸಿ ಜಿಲ್ಲಾಧಿಕಾರಿಗಳಿಂದ ಮಾಹಿತಿ ಪಡೆದರು. ಭಾರತದ ಚುನಾವಣಾ ಆಯೋಗದ ನಿರ್ದೇಶನದಂತೆ ಇಂದಿನಿಂದ ಎಫ್‌ಎಲ್‌ಸಿ (ಫಸ್ಟ್ ಲೇವೆಲ್ ಚೆಕಿಂಗ್) ಜಿಲ್ಲೆಯಲ್ಲಿ ಪ್ರಾರಂಭವಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಹೆಚ್.ಎನ್ ಗೋಪಾಲಕೃಷ್ಣ ತಿಳಿಸಿದರು.

ಕಂಟ್ರೋಲ್ ಯೂನಿಟ್, ಬ್ಯಾಲೆಟ್ ಯೂನಿಟ್, ವಿವಿ ಪ್ಯಾಟ್‌ಗಳು ಜಿಲ್ಲೆಗೆ ನೀಡಲಾಗಿದ್ದು, ವಿದ್ಯುನ್ಮಾನ ಮತ ಯಂತ್ರಗಳು ಸರಿಯಾದ ರೀತಿ ಕೆಲಸ ನಿರ್ವಹಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ ಎಂದರು. 6 ದಿನಗಳ ಕಾಲ ಬೆಳಗ್ಗೆ 9 ರಿಂದ ಸಂಜೆ 6 ರವರೆಗೆ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಮುಖಂಡರ ಸಮಕ್ಷಮದಲ್ಲಿ ಪರಿಶೀಲನೆ ನಡೆಸಲಾಗುತ್ತದೆ. 96 ವೋಟ್ ಅನ್ನು ಪೋಲ್ ಮಾಡಿ ವಿದ್ಯುನ್ಮಾನ ಮತ ಯಂತ್ರಗಳನ್ನು ಪರಿಶೀಲನೆ ಮಾಡುತ್ತಿದೇವೆ ಎಂದರು.

ಬೆನ್ನುಮೂಳೆ ಮುರಿತಕ್ಕೊಳಗಾದ ಯುವಕನಿಗೆ ಆರ್ಥಿಕ ನೆರವು



ಕೆ.ಆರ್.ಪೇಟೆ, ಜ.31– ಬೆನ್ನುಮೂಳೆ ಮುರಿತಕ್ಕೊಳಗಾದ ಯುವಕನೋರ್ವನಿಗೆ ತಾಲೂಕು ಎಪಿಎಂಸಿ ಮಾಜಿ ಅಧ್ಯಕ್ಷ, ಚಿರಾಗ್ ಮೋಟಾರ್ಸ್ ಮಾಲೀಕ ಎಂ.ಪಿ. ಲೋಕೇಶ್ 10 ಸಾವಿರ ರೂ.ಗಳ ಸಹಾಯಧನ ವಿತರಿಸುವ ಮೂಲಕ ಮಾನವೀಯತೆ ಮೆರೆದರು.

ಪಟ್ಟಣದ ಅಗ್ನಿಶಾಮಕ ಠಾಣೆ ಬಳಿ ನೂತನವಾಗಿ ಆರಂಭಿಸಿರುವ ಚಿರಾಗ್ ಮೋಟಾರ್ಸ್ ಶಾಖಾ ಕಚೇರಿ ಉದ್ಘಾಟನೆ ಅಂಗವಾಗಿ ಬೆನ್ನುಮೂಳೆ ಮುರಿತಕ್ಕೆ ಒಳಗಾಗಿದ್ದ ರೋಹಿತ್ ಅವರಿಗೆ ಸಹಾಯಧನದ ಚೆಕ್ ಅನ್ನು ಲೋಕೇಶ್ ವಿತರಿಸಿದರು.

ಟಿಎಪಿಸಿಎಂಎಸ್ ಅಧ್ಯಕ್ಷ ಬಿ.ಎಲ್. ದೇವರಾಜು ಅವರು, ಉಳ್ಳವರು ಅನಾರೋಗ್ಯದಿಂದ ಬಳಲುವ ದುರ್ಬಲರಿಗೆ, ಬಡವರಿಗೆ, ನೊಂದವರಿಗೆ ಅಂಗವಿಕಲರಿಗೆ ಸಹಾಯಹಸ್ತ ಚಾಚುವ ಮೂಲಕ ಅವರಿಗೆ ನೆರವಾಗಬೇಕು. ಈ ಮೂಲಕ ತಮ್ಮ ಜೀವನದಲ್ಲಿ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು. ಒಂದು ರೀತಿ ಜನರಿಗೆ ಕೈಲಾದ ಸೇವೆ ಮಾಡಿಕೊಂಡು ಬರುತ್ತಿರುವ ತಾಲೂಕಿನ ಮಡವಿನಕೋಡಿ ಗ್ರಾಮದ ಎಂ.ಪಿ. ಲೋಕೇಶ್ ಅವರಿಗೆ ದೇವರು ಒಳ್ಳೆಯದು ಮಾಡಲಿ ಎಂದರು.

ಈ ವೇಳೆ ಜೆಡಿಎಸ್ ಹಿರಿಯ ಮುಖಂಡ ಬಸ್ ಕೃಷ್ಣೇಗೌಡ, ನಿರ್ದೇಶಕರಾದ ಶಶಿಧರ್ ಸಂಗಾಪುರ, ಎಂ.ಪಿ.ಲೋಕೇಶ್, ತಮ್ಮಣ್ಣ ಸೇರಿದಂತೆ ಇತರರಿದ್ದರು.

ತೆಂಗಿನ ಸಸಿಗಳ ಮಾರಾಟ

ಮಂಡ್ಯ, ಜ.31– ತೋಟಗಾರಿಕೆ ಇಲಾಖೆ ವತಿಯಿಂದ ತೋಟಗಾರಿಕೆ ಕ್ಷೇತ್ರಗಳಲ್ಲಿ ಉತ್ಕೃಷ್ಟ ಗುಣಮಟ್ಟದ ತೆಂಗಿನ ಸಸಿಗಳು ಮಾರಾಟಕ್ಕೆ ಲಭ್ಯವಿದೆ. ಒಂದು ತೆಂಗಿನ ಸಸಿಗೆ 75 ರೂ. ನಿಗದಿಪಡಿಸಲಾಗಿದೆ. ರೈತ ಬಾಂಧವರು ಹೆಚ್ಚಿನ ಮಾಹಿತಿಗಾಗಿ ಕ್ಷೇತ್ರಮಟ್ಟದ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ. ಇಲಾಖೆ ವತಿಯಿಂದ ಖರೀದಿ ಮಾಡಿದ ತೆಂಗಿನ ಸಸಿಗಳಿಗೆ MGNREGA ಒಳಗೊಂಡಂತೆ ಇಲಾಖೆಯ ವಿವಿಧ ಯೋಜನೆಗಳಡಿ ಸಹಾಯಧನ ಪಡೆಯಬಹುದಾಗಿದೆ ಎಂದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾಜ್ಯವಲಯ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಭಾರತದ ಆರ್ಥಿಕತೆ ಶೇ.6.5ರಷ್ಟು ಬೆಳವಣಿಗೆ ನಿರೀಕ್ಷೆ

2023-24ನೇ ಸಾಲಿನ ಆರ್ಥಿಕ ಸಮೀಕ್ಷೆ ಮಂಡಿಸಿದ ವಿತ್ತ ಸಚಿವೆ



ನವದೆಹಲಿ, ಜ.31– ಪ್ರಸಕ್ತ ಹಣಕಾಸು ವರ್ಷದಲ್ಲಿ ಶೇಕಡಾ 7 ಮತ್ತು 2021–22ರ ಆರ್ಥಿಕ ವರ್ಷದಲ್ಲಿ ಶೇಕಡಾ 8.7ಕ್ಕೆ ಹೋಲಿಸಿದರೆ, ಭಾರತದ ಆರ್ಥಿಕ ಸಮೀಕ್ಷೆ (2022–23) ಪ್ರಕಾರ ದೇಶದ ಆರ್ಥಿಕತೆಯು 2023–24ರಲ್ಲಿ ಶೇಕಡಾ 6.5ರಷ್ಟು ಬೆಳವಣಿಗೆಯಾಗಲಿದೆ ಎಂದು ಅಂದಾಜಿಸಲಾಗಿದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಶೇಕಡಾ 6.8 ಹಣದುಬ್ಬರ ಪ್ರಕ್ಷೇಪಣವು ಖಾಸಗಿ ಬಳಕೆಯನ್ನು ತಡೆಯುವಷ್ಟು ಹೆಚ್ಚಿಲ್ಲ ಅಥವಾ ಹೂಡಿಕೆಯನ್ನು ದುರ್ಬಲಗೊಳಿಸುವಷ್ಟು ಕಡಿಮೆಯಾಗಿಲ್ಲ ಎಂದು ಸೀತಾರಾಮನ್ ದೇಶದ ಆರ್ಥಿಕ ಸ್ಥಿತಿಗತಿಯನ್ನು ತೆರೆದಿಟ್ಟರು.

ಹಣಕಾಸು ಸಚಿವಾಲಯದ ಆರ್ಥಿಕ ವ್ಯವಹಾರಗಳ ಇಲಾಖೆಯ ಸಿದ್ಧಪಡಿಸಿದ ಮತ್ತು ಸರ್ಕಾರದ ಮುಖ್ಯ ಆರ್ಥಿಕ ಸಲಹೆಗಾರ ವಿ.ಅನಂತ ನಾಗೇಶ್ವರನ್ ಅವರ ಮೇಲ್ವಿಚಾರಣೆಯಲ್ಲಿ ರೂಪಿಸಲಾದ ಕೇಂದ್ರ ಬಜೆಟ್ ಮಂಡನೆಗೆ ಮುನ್ನ ಆರ್ಥಿಕ ಸಮೀಕ್ಷೆಯ ದಾಖಲೆಗಳನ್ನು ಇಂದು ಲೋಕಸಭೆಯಲ್ಲಿ ವಿತ್ತ ಸಚಿವೆ ಮಂಡಿಸಿದರು. ದೇಶದ ಆರ್ಥಿಕತೆಯ ಸ್ಥಿತಿ ಮತ್ತು ಪ್ರಸ್ತುತ ಹಣಕಾಸಿನ ವಿವಿಧ ಸೂಚಕಗಳ ಒಳನೋಟಗಳನ್ನು ಆರ್ಥಿಕ ಸಮೀಕ್ಷೆ ನೀಡುತ್ತದೆ.


ಕಳೆದ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಮುಂದಿನ ಹಣಕಾಸು ವರ್ಷದಲ್ಲಿ ಭಾರತೀಯ ಆರ್ಥಿಕತೆಯಲ್ಲಿ ಸ್ವಲ್ಪಮಟ್ಟಿನ ಕುಸಿತವನ್ನು ಕಾಣಬಹುದು ಎಂದು ಇಂದು ಅಂತರರಾಷ್ಟ್ರೀಯ ಹಣಕಾಸು ನಿಧಿ (IMF) ಹೇಳಿದೆ. ಮಾರ್ಚ್ 31ಕ್ಕೆ ಕೊನೆಗೊಳ್ಳುವ ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ಆರ್ಥಿಕ ಬೆಳವಣಿಗೆಯನ್ನು ಶೇಕಡಾ 6.8 ರಿಂದ ಶೇಕಡಾ 6.1ಕ್ಕೆ 0ಯೋಜಿಸಿದೆ.

IMF ತನ್ನ ವರ್ಲ್ಡ್ ಎಕನಾಮಿಕ್ ಔಟ್‌ಲುಕ್‌ನ ಜನವರಿ ನವೀಕರಣವನ್ನು ಬಿಡುಗಡೆ ಮಾಡಿದೆ, ಅದರ ಪ್ರಕಾರ ಜಾಗತಿಕ ಬೆಳವಣಿಗೆಯು 2022ರಲ್ಲಿ ಅಂದಾಜು 3.4 ಶೇಕಡಾದಿಂದ 2023ರಲ್ಲಿ 2.9 ಶೇಕಡಾಕ್ಕೆ ಕುಸಿಯುತ್ತದೆ ಎಂದು ಅಂದಾಜಿಸ ಲಾಗಿದೆ, ನಂತರ 2024 ರಲ್ಲಿ 3.1 ಶೇಕಡಾಕ್ಕೆ ಏರಿಕೆಯಾಗುತ್ತದೆ ಎಂದು ಹೇಳಿದೆ.

2022ರಲ್ಲಿ ಮಂಡಿಸಲಾದ ಆರ್ಥಿಕ ಸಮೀಕ್ಷೆಯು 2022–23ರಲ್ಲಿ ಭಾರತದ GDP ಬೆಳವಣಿಗೆಯನ್ನು ಶೇಕಡಾ 8ರಿಂದ ಶೇಕಡಾ 8.5 ಎಂದು ಅಂದಾಜಿಸಿದೆ, ಇದು ವ್ಯಾಪಕವಾದ ಕೋವಿಡ್ ಲಸಿಕೆ ಪೂರೈಕೆ, ದೃಢವಾದ ರಫ್ತು ಬೆಳವಣಿಗೆ ಮತ್ತು ಲಭ್ಯತೆಗಳನ್ನು ಅವಲಂಭಿಸಿದೆ ಎಂದು ಸರ್ಕಾರ ಭಾವಿಸಿದೆ. ಬಂಡವಾಳ ವೆಚ್ಚ, ದೇಶದ ಉದ್ಯೋಗ ಪ್ರಮಾಣವನ್ನು ಕೂಡ ಒಳಗೊಂಡಿದೆ.

ಕೇಂದ್ರ ಸರ್ಕಾರದ ಆರ್ಥಿಕ ಸಮೀಕ್ಷೆ: ಕೇಂದ್ರ ವಾರ್ಷಿಕ ಬಜೆಟ್ ಮಂಡನೆಗೆ ಮುನ್ನ ಆರ್ಥಿಕ ಸಮೀಕ್ಷೆಯನ್ನು ಮಂಡಿಸುವುದು ಸಂಪ್ರದಾಯ. ಅದರಂತೆ ಮೊದಲ ಆರ್ಥಿಕ ಸಮೀಕ್ಷೆಯು 1950–51ರಲ್ಲಿ ಅಸ್ತಿತ್ವಕ್ಕೆ ಬಂದಿತು, ಅದು ಬಜೆಟ್ ದಾಖಲೆಗಳ ಭಾಗವಾಗಿತ್ತು. 1960 ರ ದಶಕದಲ್ಲಿ, ಇದನ್ನು ಬಜೆಟ್ ದಾಖಲೆಗಳಿಂದ ಪ್ರತ್ಯೇಕಿಸಿ ಕೇಂದ್ರ ಬಜೆಟ್‌ಗೆ ಒಂದು ದಿನ ಮುಂಚಿತವಾಗಿ ಮಂಡಿಸಲಾಯಿತು.

ನಾಳೆ ಮಂಡನೆಯಾಗಲಿರುವ ಬಜೆಟ್ 2023ರಲ್ಲಿ 2024ರ ಏಪ್ರಿಲ್–ಮೇ ತಿಂಗಳಲ್ಲಿ ನಡೆಯಲಿರುವ ಮುಂದಿನ ಲೋಕಸಭೆ ಚುನಾವಣೆಯೊಂದಿಗೆ ಮೋದಿ ಸರ್ಕಾರದ ಎರಡನೇ ಅವಧಿಯ ಕೊನೆಯ ಪೂರ್ಣ ಬಜೆಟ್ ಆಗಿರಬಹುದು. ಈ ಬಾರಿ ಬಜೆಟ್ ದಾಖಲೆಗಳು ಆಂಡ್ರಾಯ್ಡ್ ಮತ್ತು ಆಪಲ್ ಓಎಸ್ ಪ್ಲಾಟ್‌ಫಾರ್ಮ್‌ಗಳಲ್ಲಿ 'ಯೂನಿಯನ್ ಬಜೆಟ್ ಮೊಬೈಲ್ ಅಪ್ಲಿಕೇಶನ್'ನಲ್ಲಿ ಲಭ್ಯವಿರುತ್ತವೆ.



ಮೈಸೂರು ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷರಾಗಿ ಹಡಜನ ಟಿ.ಲಿಂಗರಾಜು ಅವಿರೋಧವಾಗಿ ಆಯ್ಕೆಯಾದರು. ಈ ವೇಳೆ ಜಯಪುರ ಹೋಬಳಿ ವಿಕಾಸ ವೇದಿಕೆ ಅಧ್ಯಕ್ಷ ದಾರಿಪುರ ಡಿ.ಚಂದ್ರಶೇಖರ್, ಜಿಲ್ಲಾ ಘಟಕದ ಮಾಜಿ ಅಧ್ಯಕ್ಷ ಹಿನಕಲ್ ಬಸವರಾಜು, ಒಕ್ಕೂಟದ ಮಾಜಿ ಅಧ್ಯಕ್ಷ ಟಿ.ಎಸ್ ಲೋಕೇಶ್, ದೂರ ಶಿವ ಕುಮಾರ್, ಗುರುಸ್ವಾಮಿ, ಪಾಲಿಕೆ ಸದಸ್ಯ ರಾದ ಬಿ.ವಿ. ತಾಲೂಕು ಘಟಕದ ಅಧ್ಯಕ್ಷ ಬಿಕೆ ನಾಗರಾಜು, ಮಲ್ಲೇಶ್, ಕಾವಿ ಬಸಪ್ಪ, ಡಿ.ಎ ಮಹದೇವ ಸ್ವಾಮಿ, ವರಕೋಡು ಪ್ರಕಾಶ್, ಲೋಕೇಶ್, ಚಿನ್ನಬುದ್ದಿ, ಚೌಕಿ ಮಠದ ಮಂಜುನಾಥ್, ಡಿ.ವಿ ಷಡಕ್ಷರಿ, ಮುಖಂಡರು ಹಾಜರಿದ್ದರು

ಮೈಸೂರು-ಬೆಂಗಳೂರು ವಿಮಾನ ಸ್ಥಗಿತ



ದಶಪಥ ಎಕ್ಸ್‌ಪ್ರೆಸ್ ವೇ ಇಲ್ಲವೇ ವಂದೇ ಭಾರತ್ ಎಕ್ಸ್‌ಪ್ರೆಸ್‌ನಲ್ಲಿ ತ್ವರಿತ ಪ್ರಯಾಣದ ಫಲ; ವಿಮಾನ ಪ್ರಯಾಣಕ್ಕೆ ಜನರ ನಿರುತ್ಸಾಹ

ಇಂದಿನಿಂದ ಮೈಸೂರು–ಸಿಂಧುದುರ್ಗ ವಿಮಾನ ಹಾರಾಟ ಪ್ರಾರಂಭ; ಉದ್ಯಮಿಗಳಿಂದ ನೀರಸ ಪ್ರತಿಕ್ರಿಯೆ

ಮೈಸೂರು, ಜ.31(ಆರ್‌ಕೆ)– ಮೈಸೂರು ಮತ್ತು ಬೆಂಗಳೂರು ನಡುವೆ 2022ರ ನವೆಂಬರ್‌ನಿಂದ ವಿಮಾನ ಹಾರಾಟ ಸ್ಥಗಿತಗೊಂಡಿದೆ.

ಪ್ರಸ್ತುತ ಮೈಸೂರಿನಿಂದ ಹೈದರಾಬಾದ್, ಚೆನ್ನೈ, ಗೋವಾ ಮತ್ತು ಹುಬ್ಬಳ್ಳಿಗೆ ಮಾತ್ರ ವಿಮಾನಗಳು ಕಾರ್ಯಾಚರಣೆ ನಡೆಸುತ್ತಿವೆ. ಮೈಸೂರು–ಬೆಳಗಾವಿ ನಡುವಿನ ವಿಮಾನ ಹಾರಾಟವೂ ಸ್ಥಗಿತಗೊಂಡಿದೆ.

ಈ ನಡುವೆ ವಾರದಲ್ಲಿ ಎರಡು ದಿನ (ಬುಧವಾರ ಮತ್ತು ಭಾನುವಾರ) ಮೈಸೂರು ಮತ್ತು ಮಹಾರಾಷ್ಟ್ರದ ಸಿಂಧುದುರ್ಗ ವಿಮಾನ ನಿಲ್ದಾಣಕ್ಕೆ ಅಲಯನ್ಸ್ ಏರ್ ಇಂಡಿಯಾ ಸಂಸ್ಥೆ ಸೇವೆ ಒದಗಿಸಲು ಮುಂದೆ ಬಂದಿದೆ. ನಾಳೆ (ಫೆ1) ಯಿಂದ ಅಲಯನ್ಸ್ ವಿಮಾನವು ಈ ಮಾರ್ಗದಲ್ಲಿ ಸಂಚರಿಸಲಿದೆ ಎಂದು ಮೂಲಗಳು ತಿಳಿಸಿವೆ.

ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಕೊಚ್ಚಿನ್ ಇಂಟರ್ ನ್ಯಾಷನಲ್ ಏರ್‌ಪೋರ್ಟ್‌ಗೆ ಸೇವೆ ಒದಗಿಸುತ್ತಿದ್ದ ಅಲಯನ್ಸ್ ಏರ್ ವಿಮಾನವು ಮೈಸೂರಿಗೂ ಸಂಪರ್ಕ ಕಲ್ಪಿಸುತ್ತಿತ್ತು. ಆದರೆ, ಪ್ರಯಾಣಿಕರ ಕೊರತೆಯಿಂದಾಗಿ ಮೈಸೂರು ಸಂಪರ್ಕ ಕಡಿತಗೊಳಿಸಿರುವುದರಿಂದ ಅದು ನೇರವಾಗಿ ಬೆಂಗಳೂರು–ಕೊಚ್ಚಿನ್ ನಡುವೆ ಸಂಚರಿಸಲಿದೆ.

2022ರ ಅಕ್ಟೋಬರ್ 31 ರಿಂದೀಚೆಗೆ ಮೈಸೂರು–ಬೆಂಗಳೂರು ಮಾರ್ಗದ ಎಲ್ಲಾ ಬುಕಿಂಗ್‌ಗಳೂ ರದ್ದಾಗಿವೆ ಎಂದು ವಿಮಾನ ನಿಲ್ದಾಣದ ಮೂಲಗಳು ತಿಳಿಸಿವೆ. ಮೈಸೂರು–ಬೆಂಗಳೂರು ನಡುವೆ 10 ಪಥದ ರಾಷ್ಟ್ರೀಯ ಹೆದ್ದಾರಿ ಮುಕ್ತವಾಗಿರುವುದಲ್ಲದೆ, ವಂದೇ ಭಾರತ್ ಎಕ್ಸ್‌ಪ್ರೆಸ್‌ನಲ್ಲಿ ಒಂದೂವರೆ ಗಂಟೆ ಪ್ರಯಾಣ ಮಾಡಬಹುದಾಗಿರುವುದರಿಂದ ದುಬಾರಿ ವೆಚ್ಚ ಭರಿಸಿ ಈ ಮಾರ್ಗ ವಿಮಾನ ಪ್ರಯಾಣಕ್ಕೆ ಜನರು ನಿರಾಸಕ್ತಿ ತೋರುತ್ತಿದ್ದಾರೆ.

ಮೈಸೂರಿನಿಂದ ಮಂಡಕಳ್ಳಿ ಏರ್‌ಪೋರ್ಟ್ ತಲುಪಿ ಅಲ್ಲಿಂದ ಫ್ಲೈಟ್ ಹಿಡಿದು ಬೆಂಗಳೂರು ಏರ್‌ಪೋರ್ಟ್‌ನಲ್ಲಿ ಇಳಿದು ಮತ್ತೊಂದು ವಾಹನದಲ್ಲಿ ತಮ್ಮ ಸ್ಥಳಕ್ಕೆ ತಲುಪಬೇಕೆಂದರೆ ಅಧಿಕ ಸಮಯ, ದುಬಾರಿ ವೆಚ್ಚವಾಗುವುದರಿಂದ ಪ್ರಯಾಣಿಕರು ಮೈಸೂರು–ಬೆಂಗಳೂರು ನಡುವೆ ಬಸ್ಸು ಅಥವಾ ರೈಲಿನಲ್ಲಿ ಪ್ರಮಾಣಿಸಲು ಬಯಸುತ್ತಿರುವುದರಿಂದ ವಿಮಾನದಲ್ಲಿ ಪ್ರಯಾಣಿಸುವವರ ಸಂಖ್ಯೆ ಇಳಿಮುಖವಾಗಿದೆ ಎಂದು ಮೂಲಗಳು ತಿಳಿಸಿವೆ.

ಇಂದಿನಿಂದ ಮೈಸೂರು–ಸಿಂಧುದುರ್ಗ ವಿಮಾನ ಹಾರಾಟ: ಮೈಸೂರು–ಸಿಂಧುದುರ್ಗ ನಡುವೆ ನಾಳೆ (ಫೆ.1) ಯಿಂದ ಏರ್ ಅಲಯನ್ಸ್ ವಿಮಾನವು ವಾರಕ್ಕೆ ಎರಡು ದಿನ ಹಾರಾಟ ನಡೆಸಲಿದೆ. ಪ್ರತೀ ಬುಧವಾರ ಮತ್ತು ಭಾನುವಾರಗಳಂದು ಸಂಚರಿಸಲಿರುವ ಏರ್ ಅಲಯನ್ಸ್ ವಿಮಾನವು, ಹೈದರಾಬಾದಿನಿಂದ ಮಧ್ಯಾಹ್ನ 2 ಗಂಟೆಗೆ ಹೊರಟು ಸಂಜೆ 4 ಗಂಟೆಗೆ ಮೈಸೂರಿಗೆ ಆಗಮಿಸಲಿದ್ದು, ಇಲ್ಲಿಂದ ಹೊರಡು ನಂತರ ಸಂಜೆ 5.30 ಗಂಟೆಗೆ ಸಿಂಧುದುರ್ಗ ವಿಮಾನ ನಿಲ್ದಾಣ ತಲುಪಲಿದೆ.

ಸಂಜೆ 6 ಗಂಟೆಗೆ ಸಿಂಧುದುರ್ಗದಿಂದ ಹೊರಡುವ ವಿಮಾನವು ರಾತ್ರಿ 7.30 ಗಂಟೆಗೆ ಮೈಸೂರು ತಲುಪಿ, ನಂತರ ಹೈದರಾಬಾದ್‌ಗೆ ಪ್ರಯಾಣ ಬೆಳೆಸಲಿದೆ ಎಂದು ಸಂಸ್ಥೆಯು ತಿಳಿಸಿದೆ. ಪ್ರಸ್ತುತ ಆರಂಭವಾಗಲಿರುವ ಈ ಮಾರ್ಗದ ವಿಮಾನಕ್ಕೆ ನೀರಸ ಪ್ರತಿಕ್ರಿಯೆ ಇದ್ದು, ಮೈಸೂರು– ಸಿಂಧುದುರ್ಗ ಮಾರ್ಗಕ್ಕೆ ಈವರೆಗೆ ಒಂದೇ ಒಂದು ಟಿಕೆಟ್ ಬುಕ್ ಆಗಿಲ್ಲ ಎಂದು ಮೂಲಗಳು ತಿಳಿಸಿವೆ.

ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿರುವ ಮೈಸೂರು ಟ್ರಾವೆಲ್ಸ್ ಅಸೋಸಿಯೇಷನ್ ಅಧ್ಯಕ್ಷ ಸಿ.ಎ. ಜಯಕುಮಾರ್ ಅವರು, ಮೈಸೂರು–ಸಿಂಧುದುರ್ಗ ವಿಮಾನ ಹಾರಾಟದಿಂದ ಸಂಪನ್ಮೂಲ ವ್ಯರ್ಥ. ಪ್ರವಾಸಿಗರು, ಸ್ಟೇಕ್ ಹೋಲ್ಡರ್‌ಗಳು, ಮೈಸೂರಿಗರ ಅಭಿಪ್ರಾಯ ಪಡೆಯದೇ ಈ ಮಾರ್ಗಕ್ಕೆ ವಿಮಾನ ಹಾರಾಟ ಮಾಡಲಾಗುತ್ತಿದೆಯಾದ್ದರಿಂದ ಇದು ಯಶಸ್ವಿಯಾಗಲಾರದು ಎಂದರು.

ಮೈಸೂರಿಗರಿಗೆ ಸಿಂಧುದುರ್ಗ ಪರಿಚಯವಿಲ್ಲ. ಅದರ ವೈಶಿಷ್ಟ್ಯದ ಬಗ್ಗೆಯೂ ತಿಳಿದಿಲ್ಲ. ಅದರ ಬದಲಾಗಿ ಅತೀ ಬೇಡಿಕೆ ಇರುವ ಮೈಸೂರು–ಕೊಚ್ಚಿನ್ ನಡುವೆ ವಿಮಾನ ಹಾರಾಟ ಪುನಾರಂಭಿಸುವ ಬಗ್ಗೆ ಸಂಬಂಧಪಟ್ಟವರು ಪ್ರಯತ್ನಿಸುವುದು ಸೂಕ್ತ ಎಂದು ತಿಳಿಸಿದರು. ಈ ಸಂಬಂಧ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ. ನಾರಾಯಣ ಗೌಡರು ಪ್ರತಿಕ್ರಿಯಿಸಿ, ಅತೀ ಹೆಚ್ಚು ಪ್ರಯಾಣಿಕರು ಬಯಸುವ ಗೋವಾ, ಕೊಚ್ಚಿನ್, ಚೆನ್ನೈ, ಬೆಳಗಾಂಗಳಿಗೆ ಮೈಸೂರಿನಿಂದ ಹೆಚ್ಚುವರಿ ವಿಮಾನ ಹಾರಾಟ ಮಾಡಿಸಲು ಪ್ರಯತ್ನಿಸಬೇಕು. ಆದರೆ ಬೇಡಿಕೆಯೇ ಇಲ್ಲದ ಸಿಂಧುದುರ್ಗ ನಗರಕ್ಕೆ ಸೇವೆ ಆರಂಭಿಸಿದರೆ ಅದರಲ್ಲಿ ಯಾರೂ ಪ್ರಯಾಣಿಸುತ್ತಾರೆ ಎಂದು ಪ್ರಶ್ನಿಸಿದರು.

ಮೈಸೂರು ಸಂಘ–ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ಬಿ.ಎಸ್. ಪ್ರಶಾಂತ್, ಮೈಸೂರಿಂದ ಗೋವಾಗೆ ಮತ್ತೊಂದು ಫ್ಲೈಟ್ ಅಗತ್ಯವಿದೆ. ಮುಂಬೈ, ಪುಣೆ, ಶಿರಡಿ ಮತ್ತು ತಿರುಪತಿ ಹೊಸದಾಗಿ ವಿಮಾನ ಸಂಚಾರ ಆರಂಭಿಸಿದಲ್ಲಿ ಹೆಚ್ಚು ಜನರಿಗೆ ಉಪಯೋಗವಾಗಲಿದೆ. ಆದರೆ ಮೈಸೂರು–ಸಿಂಧುದುರ್ಗ ನಡುವೆ ಏಕೆ ಈ ವ್ಯವಸ್ಥೆ ಕಲ್ಪಿಸಲಾಗಿದೆಯೋ ಗೊತ್ತಿಲ್ಲ ಎಂದರು.

ಫೆ.4ಕ್ಕೆ, ನೇರ ಸಂದರ್ಶನ

ಮಂಡ್ಯ, ಜ.31– ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ ಆರ್‌ಟಿಓ ಕಚೇರಿ ಎದುರು ಫೆ.4ರಂದು ಬೆಳಗ್ಗೆ 10.30ಕ್ಕೆ ಕೊಡಚಾದ್ರಿ ಚಿಟ್ಸ್ ಪ್ರೈ.ಲಿ. ಮತ್ತು ಭಾರತ್ ಫೈನಾನ್ಷಿಯಲ್ ಪ್ರೈ.ಲಿ. ನೇರ ಸಂದರ್ಶನ ಹಮ್ಮಿಕೊಳ್ಳಲಾಗಿದೆ. ಆಸಕ್ತ ಎಸ್‌ಎಸ್‌ಎಲ್‌ಸಿ, ಪಿಯುಸಿ ಹಾಗೂ ಯಾವುದೇ ಪದವಿ ಹೊಂದಿರುವ ಅಭ್ಯರ್ಥಿಗಳು ಭಾಗವಹಿಸಬಹುದು. ವಿವರಗಳಿಗೆ ಉದ್ಯೋಗಾಧಿಕಾರಿಗಳ ಕಚೇರಿ ದೂ:08232–295124 ಸಂಪರ್ಕಿಸಬಹುದೆಂದು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಉದ್ಯೋಗಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕನ್ನಡ ಚಳವಳಿಗಾರರ ಸಂಘದಿಂದ ಸಾಧಕರಿಗೆ 'ಕನ್ನಡ ಸೇವಾರತ್ನ' ಪ್ರಶಸ್ತಿ ಪ್ರದಾನ



ಮೈಸೂರು, ಜ.31(ಆರ್‌ಕೆ)– ಜಿಲ್ಲಾ ಕನ್ನಡ ಚಳವಳಿಗಾರರ ಸಂಘದ ವತಿಯಿಂದ ಮೈಸೂರಿನ ರೋಟರಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಕನ್ನಡ ಹಬ್ಬ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ ಸಾಧಕರಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಕನ್ನಡ ಸೇವಾ ರತ್ನ ಪ್ರಶಸ್ತಿ ಪ್ರದಾನ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಸಮಾಜ ಸೇವಕ ನಟರಾಜ್ ಜೋಯಿಸ್, ಸಾಹಿತ್ಯ ಲೋಕದ ಅಧ್ಯಕ್ಷ ಡಾ. ವೈ.ಡಿ. ರಾಜಣ್ಣ, ಜಿಲ್ಲಾ ಆರೋಗ್ಯಾಧಿಕಾರಿ ಡಾ. ಕೆ.ಹೆಚ್. ಪ್ರಸಾದ್, ಕನ್ನಡ ಹೋರಾಟಗಾರರಾದ ಎಂ.ವಿ. ಶೈಲಜ, ಪೊಲೀಸ್ ಇನ್ಸ್‌ಪೆಕ್ಟರ್ ಜೆ.ಸಿ. ರಾಜು, ಸಾವಯವ ಕೃಷಿಕ ಚಂದನ ಗೌಡ, ಸಾಹಿತಿ ಕಳಲೆ ಜವರನಾಯಕ, ಸಮಾಜ ಸೇವಕ ಎಂ. ಪ್ರದೀಪ್ ಕುಮಾರ್, ಜವಳಿ ವಸ್ತ್ರಪ್ರಚಾರಕ ನಾಗೇಶ್ ಅವರು ಪ್ರಶಸ್ತಿ ಪುರಸ್ಕೃತರು.

ಹಿರಿಯ ಸಾಹಿತಿ ಸಿ.ಪಿ. ಕೃಷ್ಣ ಕುಮಾರ್, ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಎಂ. ಶಿವಣ್ಣ, ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್. ಮಹದೇವಯ್ಯ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ. ಶಿವಕುಮಾರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ಪಿ. ರಾಜೀವ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ. ನಾರಾಯಣಗೌಡ, ಖ್ಯಾತ ವೈದ್ಯ ಡಾ. ಎಸ್.ಪಿ. ಯೋಗಣ್ಣ, ಜಿಲ್ಲಾ ಕನ್ನಡ ಚಳವಳಿಗಾರರ ಸಂಘದ ಅಧ್ಯಕ್ಷ ಬಿ.ಎ. ಶಿವಶಂಕರ, ರವಿಶಾಸ್ತ್ರಿ, ರವೀಂದ್ರ ಭಟ್, ಮಹೇಶ್ ಕಾಮತ್ ಭಾಗವಹಿಸಿದ್ದರು.

ಪಾಕಿಸ್ತಾನದ ಪೇಶಾವರ ಮಸೀದಿಯಲ್ಲಿ ಸ್ಫೋಟ ಪ್ರಕರಣ; ಸಾವಿನ ಸಂಖ್ಯೆ 83ಕ್ಕೆ ಏರಿಕೆ



ಪೇಶಾವರ: ಪೇಶಾವರದ ಪೊಲೀಸ್ ಲೈನ್ಸ್ ಪ್ರದೇಶದ ಮಸೀದಿಯೊಂದರಲ್ಲಿ ಸೋಮವಾರ ನಡೆದಿದ್ದ ಪ್ರಬಲ ಆತ್ಮಹತ್ಯಾ ಸ್ಫೋಟ ಪ್ರಕರಣದಲ್ಲಿ ಮೃತಪಟ್ಟವರ ಸಂಖ್ಯೆ 83ಕ್ಕೆ ಏರಿಕೆಯಾಗಿದೆ.

ಪೇಶಾವರದ ಮಸೀದಿಯಲ್ಲಿ ನಿನ್ನೆ ಮಧ್ಯಾಹ್ನ 1.40ರ ಸುಮಾರಿಗೆ ವ್ಯಕ್ತಿಯೊಬ್ಬ ತನ್ನನ್ನು ತಾನು ಸ್ಫೋಟಿಸಿಕೊಂಡಿದ್ದ. ಆಗಷ್ಟೇ, ಪ್ರಾರ್ಥನೆ ಮುಗಿಸಿದ್ದ ರಿಂದ ಮಸೀದಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ಸೇರಿದ್ದರು. ಪರಿಣಾಮ ಸ್ಫೋಟದಲ್ಲಿ ಸಾವಿನ ಸಂಖ್ಯೆ ಹೆಚ್ಚಾಗಿದೆ. ಮಸೀದಿಯಲ್ಲಿ ಸುಮಾರು 260 ಜನ ಇದ್ದರು. ಎಲ್ಲರೂ ಆಗಷ್ಟೇ ಪ್ರಾರ್ಥನೆ ಮುಗಿಸಿದ್ದರು. ಇದೇ ವೇಳೆ ಆತ್ಮಾಹುತಿ ದಾಳಿ ನಡೆದಿದೆ ಎಂದು ತಿಳಿದುಬಂದಿದೆ. ಗಾಯಗೊಂಡವರಲ್ಲಿ ಮತ್ತಷ್ಟು ಜನರ ಪರಿಸ್ಥಿತಿ ಗಂಭೀರವಾಗಿರುವುದ್ದು, ಸಾವಿನ ಸಂಖ್ಯೆ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ, ದಾಳಿಯ ಕುರಿತು ಇದುವರೆಗೆ ಯಾವುದೇ ಉಗ್ರ ಸಂಘಟನೆಯು ಹೊಣೆ ಹೊತ್ತುಕೊಂಡಿಲ್ಲ.

ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷ, ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡರ ಹುಟ್ಟುಹಬ್ಬ

ಬೆಂಬಲಿಗರು, ಅಭಿಮಾನಿಗಳು, ಪಕ್ಷದ ಕಾರ್ಯಕರ್ತರಿಂದ ಅಭಿನಂದನೆ, ಶುಭಾಶಯಗಳ ಮಹಾಪೂರ

ಮೈಸೂರು, ಜ.31(ಆರ್‌ಕೆಬಿ)– ಕರ್ನಾಟಕ ರಾಜ್ಯ ಅಪೆಕ್ಸ್ ಬ್ಯಾಂಕ್‌ನ ಉಪಾಧ್ಯಕ್ಷರೂ ಆದ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ (ಎಂಸಿಡಿಸಿಸಿ) ಅಧ್ಯಕ್ಷ ಜಿ.ಡಿ.ಹರೀಶ್‌ಗೌಡರು, ಮಂಗಳವಾರ ತಮ್ಮ 36ನೇ ವರ್ಷದ ಹುಟ್ಟುಹಬ್ಬವನ್ನು ಅಭಿಮಾನಿಗಳ ಸಮ್ಮುಖದಲ್ಲಿ ಅದ್ದೂರಿಯಾಗಿ ಆಚರಿಸಿಕೊಂಡರು.

ಮುಂಜಾನೆ ಚಾಮುಂಡಿಬೆಟ್ಟಕ್ಕೆ ತೆರಳಿ ಅಧಿದೇವತೆ ಶ್ರೀ ಚಾಮುಂಡೇಶ್ವರಿಯ ದರ್ಶನ ಪಡೆದ ಅವರು, ಬಳಿಕ ವಿಜಯನಗರದ ತಮ್ಮ ನಿವಾಸದಲ್ಲಿ ಅಭಿಮಾನಿಗಳ ಸಮ್ಮುಖದಲ್ಲಿ ಕೇಕ್ ಕತ್ತರಿಸಿ, ಹುಟ್ಟುಹಬ್ಬ ಆಚರಿಸಿಕೊಂಡರು.

ನಿನ್ನೆ ಮಧ್ಯರಾತ್ರಿಯಿಂದಲೇ ಅಭಿಮಾನಿಗಳು, ಬೆಂಬಲಿಗರು ಹರೀಶ್‌ಗೌಡರಿಗೆ ಹಾರ, ತುರಾಯಿಗಳ ಮೂಲಕ ಅಭಿಮಾನದಿಂದ ಅಭಿನಂದಿಸಿದರು. ಮೈಸೂರು ನಗರ, ಜಿಲ್ಲೆ ಮತ್ತು ಹೊರ ಜಿಲ್ಲೆಗಳಿಂದ ಆಗಮಿಸಿದ್ದ ನೂರಾರು ಅಭಿಮಾನಿಗಳು, ಬೆಂಬಲಿಗರು, ಜೆಡಿಎಸ್ ಮುಖಂಡರು, ಕಾರ್ಯಕರ್ತರು ಹರೀಶ್‌ಗೌಡರಿಗೆ ಬೃಹತ್ ಹಾರ ಹಾಕಿ, ಅವರ ಮೂಲಕ ಕೇಕ್ ಕತ್ತರಿಸಿ, ಹುಟ್ಟುಹಬ್ಬದಲ್ಲಿ ಪಾಲ್ಗೊಂಡರು. ಜಿ.ಡಿ.ಹರೀಶ್‌ಗೌಡರಿಗೆ ಅಭಿಮಾನಿಗಳು ಕೊಬ್ಬರಿ ಹಾರ, ಸೇಬಿನ ಹಾರ, ಗುಲಾಬಿ ಹಾರ ಇನ್ನಿತರೆ ಹಾರಗಳನ್ನು ಹಾಕುವ ಮೂಲಕ ಸನ್ಮಾನಿಸಿ, ಅಭಿನಂದಿಸಿದರು. ಮೈಮುಲ್ ನಿರ್ದೇಶಕ ಕೆ.ಈರೇಗೌಡರ ನೇತೃತ್ವದಲ್ಲಿ ಹೆಚ್.ಡಿ.ಕೋಟೆ ಮಿಲ್ಕ್ ಡೈರಿಯ ಎಸ್.ಪಿ.ಸಕಲೇಶ್, ಸುಧೀರ್, ಮಂಜುನಾಥ್, ಉಮೇಶ್, ನಾಗೇಂದ್ರ, ಸ್ವಾಮಿ, ಚೇತನ್, ಮಹೇಶ್, ಬಸವರಾಜು, ನವೀನ್, ರಾಮು ಇನ್ನಿತರರು ಹಾರ ಹಾಕಿ, ಕೇಕ್ ಕತ್ತರಿಸಿ ಅಭಿನಂದಿಸಿದರು.


ಚಾಮುಂಡೇಶ್ವರಿ ಕ್ಷೇತ್ರದ ಜೆಡಿಎಸ್ ಮುಖಂಡ ಮನು ಬಿ.ಗೌಡ, ಜಿ.ಡಿ.ಹರೀಶ್‌ಗೌಡ ಅಭಿಮಾನಿ ಬಳಗದ ಲೇಜೆಟ್ ಮಂಜು ಮತ್ತು ಸ್ನೇಹಿತರು, ಮೈಸೂರು ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ಅಧ್ಯಕ್ಷ ಪಿ.ಎಂ.ಪ್ರಸನ್ನ ಮತ್ತು ನಿರ್ದೇಶಕರು, ವ್ಯವಸ್ಥಾಪಕ ನಿರ್ದೇಶಕರು, ಮೈಸೂರು–ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನೌಕರರ ಒಕ್ಕೂಟದ ಪದಾಧಿಕಾರಿಗಳು, ನಿರ್ದೇಶಕರು, ನೌಕರರ ವರ್ಗ ಹಾಗೂ ಇನ್ನಿತರೆ ಸಂಘಗಳು, ಅಭಿಮಾನಿಗಳು ಹರೀಶ್‌ಗೌಡರಿಗೆ ಶುಭ ಕೋರಿದರು.




ಕರ್ನಾಟಕ ರಾಜ್ಯ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷರೂ ಆದ ಮೈಸೂರು–ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ (ಎಂಸಿಡಿಸಿಸಿ) ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ಅವರ 36ನೇ ವರ್ಷದ ಹುಟ್ಟುಹಬ್ಬದ ಅಂಗವಾಗಿ ಅವರ ಮೈಸೂರು ನಿವಾಸದಲ್ಲಿ ಮೈಮುಲ್ ನಿರ್ದೇಶಕ ಕೆ.ಈರೇಗೌಡರ ನೇತೃತ್ವದಲ್ಲಿ ಹೆಚ್.ಡಿ.ಕೋಟೆ ಹಾಲಿನ ಡೈರಿಯ ಎಸ್.ಪಿ.ಸಕಲೇಶ್, ಸುಧೀರ್, ಮಂಜುನಾಥ್, ಉಮೇಶ್, ನಾಗೇಂದ್ರ, ಸ್ವಾಮಿ, ಚೇತನ್, ಮಹೇಶ್, ಬಸವರಾಜು, ನವೀನ್, ರಾಮು ಇನ್ನಿತರರು ಹಾರ ಹಾಕಿ, ಕೇಕ್ ಕತ್ತರಿಸಿ ಅಭಿನಂದಿಸಿದರು.

ಚಾಮುಂಡೇಶ್ವರಿ, ಹುಣಸೂರಲ್ಲಿ ಯಾವುದೇ ಷಡ್ಯಂತರ ಫಲಿಸದು

ಈ ಸಂದರ್ಭದಲ್ಲಿ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಜಿ.ಡಿ.ಹರೀಶ್‌ಗೌಡ ಅವರು, ರಾತ್ರಿ 12 ಗಂಟೆಯಿಂದಲೇ ಅಭಿಮಾನಿಗಳು, ಬೆಂಬಲಿಗರು ಶುಭಾಶಯ ಕೋರಿದ್ದಾರೆ. ಬಹಳ ಪ್ರೀತಿ, ವಿಶ್ವಾಸದಿಂದ ಕಂಡಿದ್ದಾರೆ. ಅವರೆಲ್ಲರ ಪ್ರೀತಿ ವಿಶ್ವಾಸಕ್ಕೆ ಚಿರಋಣಿಯಾಗಿದ್ದೇನೆ ಎಂದರು. ಹುಣಸೂರು ವಿಧಾನಸಭಾ ಕ್ಷೇತ್ರದಲ್ಲಿ ಯಾರು ಏನೇ ಷಡ್ಯಂತ್ರ ಮಾಡಿದರೂ ಮತದಾರರು ಈ ಬಾರಿ ಬದಲಾವಣೆ ತರಲು ಮನಸ್ಸು ಮಾಡಿದ್ದಾರೆ. ಹಾಗಾಗಿ ಯಾವುದೇ ಷಡ್ಯಂತ್ರ ನಡೆಯದು. ಚಾಮುಂಡೇಶ್ವರಿ ಕ್ಷೇತ್ರದಲ್ಲಿಯೂ ಕಾರ್ಯಕರ್ತರಿಗೆ ಹೆಚ್ಚು ಶಕ್ತಿ ಬಂದಿದೆ. ಈ ಬಾರಿ ನಾನು ಹುಣಸೂರಿನಲ್ಲಿ ಕೆಲಸ ಮಾಡಿದರೂ ಚಾಮುಂಡೇಶ್ವರಿ ಕ್ಷೇತ್ರದ ಕಾರ್ಯಕರ್ತರು ಜಿ.ಟಿ.ದೇವೇಗೌಡರನ್ನು ಗೆಲ್ಲಿಸುವ ಪಣ ತೊಟ್ಟಿದ್ದಾರೆ. ನಾನು ಹುಣಸೂರು ಕಡೆ ಇದ್ದರೂ ದೇವೇಗೌಡರು ಇಲ್ಲಿ ಅತ್ಯಧಿಕ ಮತಗಳಿಂದ ಗೆಲುವು ಸಾಧಿಸಲಿದ್ದಾರೆ. ಅದಕ್ಕಾಗಿ ನಮ್ಮ ಕಾರ್ಯಕರ್ತರು ದೊಡ್ಡ ಶಕ್ತಿಯಾಗಿದ್ದಾರೆ ಎಂದರು.



ಮೈಸೂರು ಜಿಲ್ಲೆಯ ಯುವಕರ ಕಣ್ಮಣಿ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷರು ಮತ್ತು ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷರು ಹಾಗೂ ಹುಣಸೂರು ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಆದ ಜಿ.ಡಿ.ಹರೀಶ್‌ಗೌಡರ ಹುಟ್ಟುಹಬ್ಬವನ್ನು ಶ್ರೀ ಚಾಮುಂಡೇಶ್ವರಿ ಅಮ್ಮನವರ ಸನ್ನಿಧಿಯಲ್ಲಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಚಾಮುಂಡಿಬೆಟ್ಟದ ಗ್ರಾಮಸ್ಥರು ಹುಟ್ಟುಹಬ್ಬಕ್ಕೆ ಶುಭ ಕೋರಿದರು. ಶ್ರೀಧರ್, ಶಂಭು, ಶಶಿನಾಯಕ್ ವಿ.ಜಿ.ಮಣಿ ಕುಮಾರ್, ಕೀರ್ತಿಕುಮಾರ್, ರಾಜೇಂದ್ರ, ಮುದ್ದಪ್ಪ, ಮಹದೇವ್ .ರಂಗಪ್ಪ ಸುನಿಲ್, ಎಸ್.ನಾಯಕ ಜನಾಂಗದ ಮುಖಂಡ ಮಂಜುನಾಯಕ ಇನ್ನಿತರರಿದ್ದರು.



ಮೈಸೂರು ನಗರಪಾಲಿಕೆ ಸದಸ್ಯ ರಮೇಶ್ ರಮಣಿ ನೇತೃತ್ವದಲ್ಲಿ ಜೆಡಿಎಸ್ ಪ್ರಮುಖರೂ ಆದ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡರನ್ನು ಹಾರ ಹಾಕಿ, ಅಭಿನಂದಿಸಿ, ಶುಭ ಕೋರಿದರು.



ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ಅವರ ಹುಟ್ಟುಹಬ್ಬದ ಅಂಗವಾಗಿ ಪ್ರಜ್ಞಾವಂತ ನಾಗರಿಕ ವೇದಿಕೆ ವತಿಯಿಂದ ಅವರನ್ನು ಅವರ ನಿವಾಸದಲ್ಲಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ವೇದಿಕೆಯ ಜಿ.ರಾಘವೇಂದ್ರ, ರಿಷಿ ವಿಶ್ವಕರ್ಮ, ಕಡಕೊಳ ಜಗದೀಶ್, ವಿಕ್ರಂ ಅಯ್ಯಂಗಾರ್, ಅಜಯ್ ಶಾಸ್ತ್ರಿ, ಮೋಹನ್‌ಕುಮಾರ್ ಗೌಡ, ಚೇತನ್ ಇನ್ನಿತರರು ಉಪಸ್ಥಿತರಿದ್ದರು.




ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡರಿಗೆ ಅವರ ಹುಟ್ಟುಹಬ್ಬದ ಅಂಗವಾಗಿ ಹೆಚ್.ಡಿ.ಕೋಟೆ ತಾಲೂಕಿನ ಅಂತರಸಂತೆ ಪಿಎಸಿಸಿಎಸ್ ಸಿಇಓ ಸಿದ್ದೇಗೌಡ ಇನ್ನಿತರರು ಕೊಬ್ಬರಿ ಹಾರ ಹಾಕಿ, ಅಭಿನಂದಿಸಿದರು.



ಮಂಗಳವಾರ ಹುಟ್ಟುಹಬ್ಬ ಆಚರಿಸಿಕೊಂಡ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ಅವರಿಗೆ ಮೈಸೂರು ನಗರಪಾಲಿಕೆ ಸದಸ್ಯ ಕೆ.ವಿ.ಶ್ರೀಧರ್ ಮತ್ತು ಅವರ ಬಳಗ ಹಾರ ಹಾಕಿ ಶುಭಾಶಯ ಕೋರಿತು.



ಮೈಸೂರಿನ ಎಂಸಿಡಿಸಿಸಿ ಬ್ಯಾಂಕ್ ಆವರಣದಲ್ಲಿ ಮಂಗಳವಾರ ಹುಟ್ಟುಹಬ್ಬ ಆಚರಿಸಿಕೊಂಡ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ಅವರಿಗೆ ಮೈಸೂರು ತಾಲೂಕಿನ ಮೆಲ್ಲಹಳ್ಳಿ ಹಾಗೂ ಹಳ್ಳಿಕೆರೆಹುಂಡಿ ಯುವಕರಾದ ಚೇತನ್, ಶಿವರಾಂ, ಕಿರಣ್, ದರ್ಶನ್ ಹಾಗೂ ಇನ್ನಿತರರು ಶುಭ ಕೋರಿದರು.



ಜೆಡಿಎಸ್ ಯುವ ನಾಯಕ ಹಾಗೂ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷರಾದ ಜಿ.ಡಿ.ಹರೀಶ್‌ಗೌಡರ ಹುಟ್ಟುಹಬ್ಬದ ಅಂಗವಾಗಿ ಉದ್ಯಮಿ ಸ್ವೀಟ್ಸ್ ಮಹೇಶ್ ಅಭಿನಂದಿಸಿ, ಶುಭಾಶಯ ಕೋರಿದರು.



ಹುಟ್ಟುಹಬ್ಬ ಆಚರಿಸಿಕೊಂಡ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಹಾಗೂ ರಾಜ್ಯ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷ ಜಿ.ಡಿ.ಹರೀಶ್‌ಗೌಡರನ್ನು ಉದ್ಯಮಿ ಎಸ್.ಶ್ರೀಕಾಂತ್ ಹೂಗುಚ್ಛ ನೀಡಿ, ಆತ್ಮೀಯವಾಗಿ ಶುಭ ಕೋರಿದರು. ಈ ವೇಳೆ ಜಯಪುರದ ಮುಖಂಡರಾದ ಅಬ್ದುಲ್ ಮುತಾಲಿಫ್, ಮಹದೇವಯ್ಯ, ಸಂತೋಷ್ ಇದ್ದರು.

ಬ್ರಾಹ್ಮಣ ಸಮುದಾಯಕ್ಕೆ ಸಬ್ಸಿಡಿ ಸಹಿತ ಸಾಲಸೌಲಭ್ಯ ಮಂಜೂರಾತಿ ಪತ್ರ ವಿತರಣೆ

ಮೊದಲ ಹಂತದಲ್ಲಿ 25 ಮಂದಿಗೆ ಸೌಕರ್ಯ ಕಲ್ಪಿಸಿದ ಶಾಸಕ ರಾಮದಾಸ್



ಮೈಸೂರು,ಜ.31(ಎಂಟಿವೈ)– ಆರ್ಥಿಕವಾಗಿ ಹಿಂದುಳಿದಿರುವ ಬ್ರಾಹ್ಮಣ ಸಮುದಾಯದ ಫಲಾನುಭವಿಗಳಿಗೆ ಬ್ರಾಹ್ಮಣ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಮಂಜೂರಾದ ಸಬ್ಸಿಡಿ ಸಹಿತ ಸಾಲ ಸೌಲಭ್ಯದ ಮಂಜೂರಾತಿ ಪತ್ರವನ್ನು ಶಾಸಕ ಎಸ್.ಎ.ರಾಮದಾಸ್ ವಿತರಿಸಿದರು.

ಮೈಸೂರಿನ ಕೆ.ಆರ್.ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಶ್ರೀರಾಂಪುರ ಭ್ರಮರಾಂಬ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ಅದಾಲತ್‌ನಲ್ಲಿ ಪಾಲಿಕೆ ವಾರ್ಡ್ 64 ಮತ್ತು 65ರಲ್ಲಿ ವಾಸಿಸುತ್ತಿರುವ ಅರ್ಹ ಫಲಾನುಭವಿಗಳಿಗೆ ಸರ್ಕಾರಿ ಸವಲತ್ತುಗಳ ವಿತರಿಸಿದರು.

ಬಳಿಕ ಮಾತನಾಡಿದ ಶಾಸಕ ಎಸ್.ಎ.ರಾಮದಾಸ್, ಆರ್ಥಿಕವಾಗಿ ಹಿಂದುಳಿದಿರುವ ಬ್ರಾಹ್ಮಣರು ಸ್ವಂತ ಉದ್ಯೋಗ ರೂಪಿಸಿಕೊಳ್ಳಲು ಇಡಬ್ಲ್ಯೂಎಸ್ ವರ್ಗದಡಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಸಹಾಯದ ನೆರವಿನಡಿ ಅರ್ಜಿ ಆಹ್ವಾನಿಸಲಾಗಿತ್ತು. ಕೃಷ್ಣರಾಜ ಕ್ಷೇತ್ರ ವ್ಯಾಪ್ತಿಯಲ್ಲಿ ಒಟ್ಟು 400 ಅರ್ಜಿಗಳು ಸಲ್ಲಿಕೆಯಾಗಿದ್ದು, ಮೊದಲ ಹಂತದಲ್ಲಿ 25 ಮಂದಿಗೆ ಮಂಜೂರಾತಿ ಪತ್ರ ನೀಡಲಾಗುತ್ತಿದೆ. ಈ ಮೂಲಕ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಮೇಲ್ವರ್ಗದ ಬಡವರಿಗೆಂದು ಮೀಸಲಿಟ್ಟ ಯೋಜನೆಗಳನ್ನು ದೊರಕಿಸಿಕೊಡಲು ಶ್ರಮಿಸುವುದಾಗಿ ಭರವಸೆ ನೀಡಿದರು. ಆರ್ಥಿಕವಾಗಿ ಹಿಂದುಳಿದ ಈ ವರ್ಗದ ಜನ ಹಣದ ಸದುಪಯೋಗಪಡಿಸಿಕೊಂಡರೆ ಸ್ವಂತ ಶಕ್ತಿ ಮೇಲೆ ಬದುಕು ಕಟ್ಟಿಕೊಳ್ಳಲು ಸಹಕಾರಿಯಾಗಲಿದೆ. ಕೃಷ್ಣರಾಜ ಕ್ಷೇತ್ರವನ್ನು ಮಾದರಿ ಕ್ಷೇತ್ರವನ್ನಾಗಿಸುವ ನಿಟ್ಟಿನಲ್ಲಿ ಹಲವು ಯೋಜನೆಗಳನ್ನು ಜಾರಿಗೊಳಿಸಲಾಗಿದೆ. ಅದರ ಉಪಯೋಗವನ್ನು ಕ್ಷೇತ್ರದ ಜನರಿಗೆ ದೊರಕಿಸಿಕೊಡಲು ಶ್ರಮಿಸಲಾಗುತ್ತಿದೆ. ಕೃಷ್ಣರಾಜ ಕ್ಷೇತ್ರ ವ್ಯಾಪ್ತಿಯಲ್ಲಿರುವ ಎಲ್ಲಾ ಬಡಾವಣೆಗಳು ನಗರಪಾಲಿಕೆ ವ್ಯಾಪ್ತಿಗೆ ಸೇರಿಸಲು ಕ್ರಮ ಕೈಗೊಳ್ಳಲಾಗಿದೆ. ಮಾರ್ಚ್ ಅಂತ್ಯದ ವೇಳೆಗೆ ಇಡೀ ಕ್ಷೇತ್ರ ವ್ಯಾಪ್ತಿಯಲ್ಲಿ ಕಾವೇರಿ, ಕಬಿನಿ ನೀರು ಲಭ್ಯವಿದೆ. ಈ ಮೂಲಕ ಬೋರ್‌ವೆಲ್ ಮುಕ್ತ ಕ್ಷೇತ್ರವಾಗಲಿದೆ. ಮಾತ್ರವಲ್ಲ, ಮುಂದಿನ ಒಂದು ತಿಂಗಳಲ್ಲಿ ಇಡೀ ಕ್ಷೇತ್ರದ ಎಲ್ಲಾ ರಸ್ತೆಗಳು ಸಂಪೂರ್ಣ ಡಾಂಬರೀಕರಣ ಆಗಲಿವೆ ಎಂದರು.

ಮೈಸೂರಲ್ಲಿ ರಾಪಿಡೋ ಬೈಕ್ ಟ್ಯಾಕ್ಸಿ ಸಂಚಾರ ವಿರೋಧಿಸಿ ಆಟೋ ಚಾಲಕರ ಪ್ರತಿಭಟನೆ

ಮೈಸೂರು,ಜ.31(ಎಂಟಿವೈ)– ಮೈಸೂರಲ್ಲಿ ರಾಪಿಡೋ ಬೈಕ್ ಟ್ಯಾಕ್ಸಿಗಳ ಸಂಚಾರಕ್ಕೆ ಅವಕಾಶ ನೀಡದಂತೆ ಒತ್ತಾಯಿಸಿ ಮೈಸೂರು ಆಟೋರಿಕ್ಷಾ ಸರ್ವಿಸ್ ಟ್ರಸ್ಟ್ ಕಾರ್ಯಕರ್ತರು ಮಂಗಳವಾರ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಿದರು.

ಮೈಸೂರು ಆಟೋರಿಕ್ಷಾ ಪರ್ಮಿಟ್ ವ್ಯಾಪ್ತಿಯೊಳಗೆ ಸಂಚರಿಸಲು ಅವಕಾಶ ಕೊಡಬಾರದು. ಮೈಸೂರಲ್ಲಿ ರಾಪಿಡೋ ಬೈಕ್ ಟ್ಯಾಕ್ಸಿಗಳ ಸೇವೆ ನಿಷೇಧಿಸಬೇಕು. ರಾಪಿಡೊ ವೈಟ್‌ಬೋರ್ಡ್ ಟ್ಯಾಕ್ಸಿಗಳು ಮೈಸೂರಿನ ಆಟೋರಿಕ್ಷಾ ಪರ್ಮಿಟ್ ವ್ಯಾಪ್ತಿಯಲ್ಲಿ ಅಕ್ರಮವಾಗಿ ಹಾಗೂ ಆರ್‌ಟಿಓ ನಿಯಮಾವಳಿಗಳನ್ನು ಉಲ್ಲಂಘಿಸಿ 3 ವರ್ಷದಿಂದ ಆಟೋರಿಕ್ಷಾಗೆ ಪರ್ಯಾಯವಾಗಿ ಸಂಚರಿಸುತ್ತಿವೆ. ಇದರ ಪರಿಣಾಮ ಆಟೋರಿಕ್ಷಾ ಚಾಲಕರ ದಿನನಿತ್ಯದ ದುಡಿಮೆಗೆ ತೊಂದರೆಯಾಗುತ್ತಿದೆ. ಚಾಲಕರು ಆಟೋರಿಕ್ಷಾದ ದುಡಿಮೆಯನ್ನೆ ನಂಬಿಕೊಂಡು ಖಾಸಗಿ ಬ್ಯಾಂಕ್, ಫೈನಾನ್ಸ್‌ಗಳಿಂದ ಸಾಲ ಪಡೆದು ಸರಿಯಾದ ಸಮಯಕ್ಕೆ ಸಾಲ ಮರುಪಾವತಿ ಮಾಡಲಾಗದೆ ಖಾಸಗಿ ಬ್ಯಾಂಕು, ಫೈನಾನ್ಸ್ ಕಂಪನಿಗಳ ಕಾನೂನು ಕ್ರಮ ಎದುರಿಸುವಂತಾಗಿದೆ ಎಂದು ವಿಷಾದಿಸಿದರು. ಆಟೋರಿಕ್ಷಾ ಕುಟುಂಬಗಳು ಆತಂತ್ರ ಸ್ಥಿತಿಗೆ ಸಿಲುಕಿ ಬೀದಿಗೆ ಬೀಳುವಂತಾಗಿದೆ. ಆಟೋರಿಕ್ಷಾ ಚಾಲಕರು ತಮ್ಮ ಮಕ್ಕಳ ವಿದ್ಯಾಭ್ಯಾಸವನ್ನು ಕುಟುಂಬದ ಆರೋಗ್ಯಕ್ಕೆ ಸಂಬಂಧಪಟ್ಟ ಜವಾಬ್ದಾರಿಯನ್ನು ನಿಭಾಯಿಸಲು ಸಾಧ್ಯವಾಗದೇ ಬಹಳ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಎರಡು ವರ್ಷದಿಂದ ಅನೇಕ ಬಾರಿ ಆಟೋರಿಕ್ಷಾ ಚಾಲಕರು ಸಂಬಂಧಪಟ್ಟ ಅಧಿಕಾರಿಗಳಿಗೆ ಹಾಗೂ ಸರ್ಕಾರಕ್ಕೆ ಧರಣಿ ಮಾಡಿ ಮನವಿ ಪತ್ರ ಸಲ್ಲಿಸಿದರೂ ಏನು ಪ್ರಯೋಜನವಾಗಿಲ್ಲ. 15 ದಿನದೊಳಗಾಗಿ ಆಟೋರಿಕ್ಷಾ ವರ್ಗಕ್ಕೆ ನ್ಯಾಯ ಸಿಗದೇ ಹೋದಲ್ಲಿ, ನ್ಯಾಯ ಸಿಗುವವರೆಗೂ ಆಟೋರಿಕ್ಷಾ ಚಾಲಕರು ತಮ್ಮ ಆಟೋರಿಕ್ಷಾದಲ್ಲಿ ಸರ್ಕಾರದ ವಿರುದ್ಧ ಧಿಕ್ಕಾರದ ಸೂಚಕವಾಗಿ ಕಪ್ಪು ಬಾವುಟ/ ಕಪ್ಪು ಪಟ್ಟಿಯನ್ನು ಧರಿಸಿ ಸಾರ್ವಜನಿಕರಿಗೆ ಸೇವೆ ನೀಡಲು ನಿರ್ಧರಿಸಿದ್ದೇವೆ ಎಂದು ಹೇಳಿದರು. ಪ್ರತಿಭಟನೆಯಲ್ಲಿ ಮೈಸೂರು ಆಟೋರಿಕ್ಷಾ ಸರ್ವಿಸ್ ಟ್ರಸ್ಟ್ ಅಧ್ಯಕ್ಷ ನಾಗರಾಜು, ಮಂಜುನಾಥ್, ರಾಜು, ಎಂ.ಬಿ. ವಸಂತ್ ಕುಮಾರ್, ವಿಜಯಕುಮಾರ್, ರಾಮಸ್ವಾಮಿ, ಲಕ್ಷ್ಮಿನಾರಾಯಣ ಇತರರಿದ್ದರು.

'ನಮ್ಮ ಮತ ಮಾರಾಟಕ್ಕಿಲ್ಲ' ಇಂದು ಅಭಿಯಾನ

ಮೈಸೂರು, ಜ.31(ಪಿಎಂ)– ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ವತಿಯಿಂದ ಫೆ.1ರಂದು 'ನಮ್ಮ ಮತ ಮಾರಾಟಕ್ಕಿಲ್ಲ' ಅಭಿಯಾನ ಹಮ್ಮಿಕೊಳ್ಳಲಾಗಿದೆ. ಅಂದು ಬೆಳಗ್ಗೆ 11ಕ್ಕೆ ನಾರಾಯಣಶಾಸ್ತ್ರಿ ರಸ್ತೆಯ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನದ ಗಾಂಧಿ ಪ್ರತಿಮೆ ಎದುರು ಕಾರ್ಯಕ್ರಮ ನಡೆಯಲಿದೆ.

ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು ಕಾರ್ಯಕ್ರಮ ಉದ್ಘಾಟಿಸಲಿದ್ದು, ಪ್ರಗತಿಪರ ಚಿಂತಕ ಪ್ರೊ.ಬಿ.ಪಿ.ಮಹೇಶ್‌ಚಂದ್ರ ಗುರು ಅಧ್ಯಕ್ಷತೆ ವಹಿಸಲಿದ್ದಾರೆ. ಸಾಹಿತಿ ನಾ.ದಿವಾಕರ್, ಪ್ರಗತಿಪರ ಚಿಂತಕ ಜಿ.ಪಿ.ಬಸವರಾಜು, ಮಾಜಿ ಮೇಯರ್ ಪುಷ್ಪಲತಾ ಚಿಕ್ಕಣ್ಣ, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ್ಯ, ಪಿಯುಸಿಎಲ್ ಮುಖಂಡ ಡಾ.ಲಕ್ಷ್ಮೀ ನಾರಾಯಣ್, ನೆಲೆ–ಹಿನ್ನೆಲೆ ಟ್ರಸ್ಟ್ ಅಧ್ಯಕ್ಷ ಕೆ.ಆರ್.ಗೋಪಾಲಕೃಷ್ಣ, ಹಿರಿಯ ಪ್ರಗತಿಪರ ಚಿಂತಕ ಲ.ಜಗನ್ನಾಥ್ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ಹೊರಗುತ್ತಿಗೆ ಪದ್ಧತಿ ರದ್ದುಗೊಳಿಸಲು ಆಗ್ರಹಿಸಿ ಹಾಸ್ಟೆಲ್ ನೌಕರರ ಪ್ರತಿಭಟನೆ

ಮೈಸೂರು,ಜ.31(ಎಂಟಿವೈ)– ಹೊರಗುತ್ತಿಗೆ ಪದ್ಧತಿ ರದ್ದುಗೊಳಿಸಿ, ಹಾಸ್ಟೆಲ್ ಕಾರ್ಮಿಕರನ್ನು ಖಾಯಂಗೊಳಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ವಸತಿನಿಲಯಗಳ ನೌಕರರು ಪ್ರತಿಭಟನಾ ಮೆರವಣಿಗೆ ನಡೆಸಿದರು.

ಕರ್ನಾಟಕ ರಾಜ್ಯ ಸಂಯುಕ್ತ ವಸತಿ ನಿಲಯ ಕಾರ್ಮಿಕರ ಸಂಘದ ನೇತೃತ್ವದಲ್ಲಿ ಮಂಗಳವಾರ ಬೆಳಗ್ಗೆ ಮೈಸೂರಿನ ರಾಮಸ್ವಾಮಿ ವೃತ್ತದಿಂದ ಜೆಎಲ್‌ಬಿ ರಸ್ತೆ ಮೂಲಕ ಮೆರವಣಿಗೆ ನಡೆಸಿದ ವಸತಿ ನಿಲಯಗಳ ನೌಕರರು ಜಿಲ್ಲಾಧಿಕಾರಿ ಕಚೇರಿ ಬಳಿ ಧರಣಿ ನಡೆಸಿದರು.

ಹಲವು ವರ್ಷಗಳಿಂದ ಹೊರಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ಹಾಸ್ಟೆಲ್ ಕಾರ್ಮಿಕರ ಸೇವೆಯನ್ನು ಖಾಯಂಗೊಳಿಸಿ, ಅಲ್ಲಿಯವರೆಗೂ ಅಥವಾ ನಿವೃತ್ತಿವರೆಗೂ ಅವರನ್ನು ಮುಂದುವರೆಸಬೇಕು. ವಸತಿನಿಲಯ, ವಸತಿಶಾಲೆ, ವಸತಿ ಕಾಲೇಜು, ಆಶ್ರಮ ಶಾಲೆಗಳಲ್ಲಿ ಹಲವಾರು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಡಿ ಗ್ರೂಪ್‌ನ ಅಡುಗೆಯವರು, ಅಡುಗೆ ಸಹಾಯಕರು, ಕಾವಲುಗಾರರನ್ನು ಖಾಯಂಗೊಳಿಸಬೇಕು. ಗುತ್ತಿಗೆ– ಹೊರಗುತ್ತಿಗೆ ಪದ್ಧತಿಯನ್ನು ರದ್ದು ಮಾಡಬೇಕು. ವಸತಿ ನಿಲಯಗಳ ಹೊರಗುತ್ತಿಗೆ ಕಾರ್ಮಿಕರಿಗೆ ನೀಡುತ್ತಿರುವ ಕನಿಷ್ಠ ವೇತನವನ್ನು ಮಾಸಿಕ 35,950ರೂ.ಗೆ ಹೆಚ್ಚಿಸಬೇಕು. ತುಟ್ಟಿಭತ್ಯೆ ಹೆಚ್ಚಿಸಬೇಕು, ಹಣದುಬ್ಬರಗಳನ್ನು ಪರಿಗಣಿಸಿ ವೈಜ್ಞಾನಿಕವಾಗಿ ಕನಿಷ್ಠ ವೇತನವನ್ನು ನಿಗದಿ ಮಾಡಬೇಕು ಎಂದು ಒತ್ತಾಯಿಸಿದರು.

ಕಾನೂನುಬದ್ಧವಾಗಿ ನೀಡಬೇಕಾದ ವಾರದ ರಜೆ, ರಾಷ್ಟ್ರೀಯ ಹಬ್ಬಗಳ ರಜೆ, ಸಾಂದರ್ಭಿಕ ರಜೆಗಳನ್ನು ನೀಡಬೇಕು. ರಜೆ ದಿನಗಳಲ್ಲಿ ಕೆಲಸ ಮಾಡಿಸಿದರೆ ಕಾರ್ಮಿಕ ಕಾಯ್ದೆಯಡಿ ದುಪ್ಪಟ್ಟು ವೇತನ ನೀಡಬೇಕೆಂಬ ಸರ್ಕಾರದ ಆದೇಶವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು. ದಿನಕ್ಕೆ 8 ಗಂಟೆಗಳ ಅವಧಿಯಲ್ಲಿ ಕೆಲಸ ಮಾಡಿಸಿಕೊಳ್ಳಬೇಕು. 8 ಗಂಟೆಗಳ ನಂತರದ ಹೆಚ್ಚುವರಿ ಅವಧಿಯ ಕೆಲಸಕ್ಕೆ ಕಾರ್ಮಿಕ ಕಾನೂನುಗಳ ಪ್ರಕಾರ ದುಪ್ಪಟ್ಟು ವೇತನ ನೀಡಬೇಕು ಎಂಬ ಕಾರ್ಮಿಕ ಇಲಾಖೆಯ ಆದೇಶ ತುರ್ತಾಗಿ ಜಾರಿಯಾಗುವಂತೆ ಸೂಕ್ತ ನಿರ್ದೇಶನ ನೀಡಬೇಕು ಎಂದು ಒತ್ತಾಯಿಸಿದರು. ಲಾಕ್‌ಡೌನ್ ಅವಧಿಯ ವೇತನವನ್ನು ತಕ್ಷಣ ಪಾವತಿಸಬೇಕು. ಮಾಸಿಕ ವೇತನ, ಇಪಿಎಫ್ ಮತ್ತು ಇಎಸ್‌ಐ ವಂತಿಗೆಯನ್ನು ಪ್ರತಿ ತಿಂಗಳು ನೀಡದ ಗುತ್ತಿಗೆ ಏಜೆನ್ಸಿಯವರ ಮೇಲೆ ದೂರು ದಾಖಲಿಸಬೇಕು ಎಂಬ ನಿಯಮ ಕಟ್ಟುನಿಟ್ಟಾಗಿ ಜಾರಿಯಾಗಬೇಕು ಹಾಗೂ ಕಾರ್ಮಿಕರ ಖಾತೆಗಳಿಗೆ ಪ್ರತಿ ತಿಂಗಳು ಮಾಸಿಕ ವೇತನ, ಇಪಿಎಫ್, ಇಎಸ್‌ಐ ವಂತಿಕೆ ಜಮಾ ಆಗುವಂತೆ ಕ್ರಮ ವಹಿಸಬೇಕು ಎಂದು ಆಗ್ರಹಿಸಿದರು.

ಗುತ್ತಿಗೆ ಏಜೆನ್ಸಿಯಿಂದ ಪ್ರತಿ ತಿಂಗಳು ವೇತನ ಪಾವತಿ ಚೀಟಿ ಕೊಡಿಸಬೇಕು. ಇಎಸ್‌ಐ ಕಾರ್ಡ್ ವಿತರಿಸಬೇಕು. ವಸತಿ ಶಾಲೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ, ಅವರ ಕುಟುಂಬದೊಂದಿಗೆ ವಸತಿಶಾಲೆಯಲ್ಲಿ ಉಳಿದುಕೊಳ್ಳಲು ವಸತಿ ಕಟ್ಟಡ ಸೌಲಭ್ಯ ನೀಡಬೇಕು ಎಂದು ಮನವಿ ಮಾಡಿದರು.

ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ಸಂಯುಕ್ತ ವಸತಿನಿಲಯ ಕಾರ್ಮಿಕರ ಸಂಘದ ಜಿಲ್ಲಾಧ್ಯಕ್ಷ ಎನ್. ಮುದ್ದುಕೃಷ್ಣ, ಜಿಲ್ಲಾ ಕಾರ್ಯದರ್ಶಿ ಎಸ್. ಚಂದನ್, ಚಂದ್ರಶೇಖರ್ ಮೇಟಿ, ಯಶೋಧರ, ರವಿಚಂದ್ರ, ಲೋಕೇಶ್, ರಾಜೇಶ್, ರಾಣಿ, ಮಹದೇವಮ್ಮ, ರಾಜು, ಶೇಖರ್, ಶಿವಮ್ಮ, ಕೋಮಲ, ಲೋಕೇಶ್, ಲಕ್ಷಮ್ಮ ಇತರರು ಪಾಲ್ಗೊಂಡಿದ್ದರು.

ಬೇಸಿಗೆಯಲ್ಲಿ ಹಾಸ್ಟೆಲ್‌ಗಳಲ್ಲಿ ಸುರಕ್ಷತಾ ಕ್ರಮ ಕೈಗೊಳ್ಳಿ

ನಿಲಯಪಾಲಕರಿಗೆ ಹಿಂದುಳಿದ ವರ್ಗದ ಜಿಲ್ಲಾ ಅಧಿಕಾರಿ ಮಹೇಶ್ ಸೂಚನೆ



ಮೈಸೂರು, ಜ.31(ಎಂಟಿವೈ)– ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳಲ್ಲಿ ಶುಚಿತ್ವ ಕಾಪಾಡಿಕೊಳ್ಳಲು ಅಗತ್ಯ ಕ್ರಮ ಕೈಗೊಳ್ಳುವಂತೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಜಿ.ಆರ್.ಮಹೇಶ್ ಸಲಹೆ ನೀಡಿದ್ದಾರೆ.

ಮೈಸೂರಿನ ರಾಘವೇಂದ್ರನಗರದಲ್ಲಿರುವ ಡಿ.ದೇವರಾಜ ಅರಸು ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿನಿಲಯದಲ್ಲಿ ನಡೆದ ತಾಲೂಕು ಕಲ್ಯಾಣಾಧಿಕಾರಿಗಳು, ಜಿಲ್ಲೆಯ ನಿಲಯ ಮೇಲ್ವಿಚಾರಕರು ಹಾಗೂ ಆಶ್ರಮಶಾಲೆ ಶಿಕ್ಷಕರುಗಳ ಸಭೆಯಲ್ಲಿ ಮಾತನಾಡಿದ ಅವರು, ಬೇಸಿಗೆ ಆರಂಭವಾಗುತ್ತಿದ್ದು, ಕುಡಿಯುವ ನೀರಿನ ಟ್ಯಾಂಕ್ ಹಾಗೂ ಸಂಪುಗಳನ್ನು ಸ್ವಚ್ಛಗೊಳಿಸಿಕೊಳ್ಳಬೇಕು. ಕಿಟಕಿ, ನಲ್ಲಿಗಳು, ಶೌಚಾಲಯದಲ್ಲಿ ಸಮಸ್ಯೆಗಳಿದ್ದರೆ ಸರಿಪಡಿಸಿಕೊಳ್ಳಬೇಕು. ಹಾಸ್ಟೆಲ್‌ಗಳಲ್ಲಿ ಮೆನು ಚಾರ್ಟ್ ಪ್ರಕಾರ ನಿಗದಿತ ಸಮಯಕ್ಕೆ ವಿದ್ಯಾರ್ಥಿಗಳಿಗೆ ಊಟ–ತಿಂಡಿ ಮಾಡಿಕೊಡಬೇಕು ಎಂದು ಸೂಚಿಸಿದರು.

ಅಡುಗೆ ಮಾಡುವ ವೇಳೆ ಸಮವಸ್ತ್ರ, ಕೈಗಳಿಗೆ ಗ್ಲೌಸ್, ತಲೆಗೆ ಕ್ಯಾಪ್ ಹಾಕಬೇಕು. ಬಯೋಮೆಟ್ರಿಕ್ ಅನ್ನು ಬೆಳಗ್ಗೆ, ಸಂಜೆ ಎರಡು ಸಮಯದಲ್ಲೂ ಕಡ್ಡಾಯವಾಗಿ ಹಾಕಬೇಕು. ಪ್ರತಿ ಹಾಸ್ಟೆಲ್‌ಗಳಲ್ಲೂ ನಿಲಯಪಾಲಕರು ಹಾಜರಿದ್ದು, ಆಹಾರ ಪದಾರ್ಥಗಳ ಗುಣಮಟ್ಟವನ್ನು ಪರಿಶೀಲಿಸಬೇಕು. ಸ್ಪೋಕನ್ ಇಂಗ್ಲಿಷ್, ವ್ಯಕ್ತಿತ್ವ ವಿಕಸನ, ಕರಾಟೆ ತರಗತಿಗಳು ಕಡ್ಡಾಯವಾಗಿ ನಡೆಯುವಂತೆ ನೋಡಿಕೊಳ್ಳಬೇಕು. ಆಹಾರ ಪದಾರ್ಥ ಸರಬರಾಜು ಮಾಡಲು ಗುತ್ತಿಗೆ ಪಡೆದಿರುವವರು ಕಳಪೆ ಆಹಾರ ಸಾಮಗ್ರಿ ಸರಬರಾಜು ಮಾಡಿದರೆ ತಿರಸ್ಕರಿಸುವುದರೊಂದಿಗೆ ಕಚೇರಿಗೆ ಲಿಖಿತ ರೂಪದಲ್ಲಿ ದೂರು ನೀಡಬೇಕು. ವಿದ್ಯಾರ್ಥಿಗಳು ಹಾಗೂ ಪೋಷಕರೊಂದಿಗೆ ಉತ್ತಮ ಬಾಂಧವ್ಯ ಹೊಂದಿರಬೇಕು. ಇಷ್ಟೆಲ್ಲಾ ಎಚ್ಚರಿಕೆ ಸಲಹೆ ಕೊಟ್ಟ ಮೇಲೂ ಲೋಪದೋಷಗಳು ಕಂಡು ಬಂದರೆ ಸಂಬಂಧಪಟ್ಟವರ ಮೇಲೆ ಕ್ರಮಜರುಗಿಸಲಾಗುವುದು ಎಂದು ಎಚ್ಚರಿಸಿದರು. ಸಭೆಯಲ್ಲಿ ತಾಲೂಕು ಕಲ್ಯಾಣಾಧಿಕಾರಿಗಳಾದ ಚಂದ್ರಕಲಾ, ವಿಶ್ವನಾಥ್, ಮೇಘ, ಸ್ವರ್ಣಲತಾ, ಶಶಿಕಲಾ, ಹರೀಶ್, ಸುಕನ್ಯ, ಸತೀಶ್, ಜಿಲ್ಲಾ ಕಚೇರಿಯ ಪತ್ರಾಂಕಿತ ವ್ಯವಸ್ಥಾಪಕರಾದ ಎ.ಎಸ್.ದೀಪಕ್, ಮೇಲ್ವಿಚಾರಕರಾದ ಎಂ.ಛಾಯಾ, ಲೆಕ್ಕ ಅಧೀಕ್ಷಕರಾದ ನಿರಂಜನ ಮೂರ್ತಿ, ರಮ್ಯ, ಲೀಲಾ, ಪರಶುರಾಂ, ಯಶವಂತ ಸೇರಿದಂತೆ ಎಲ್ಲಾ ನಿಲಯ ಮೇಲ್ವಿಚಾರಕರು ಪಾಲ್ಗೊಂಡಿದ್ದರು.


ಮೈಸೂರು ಮಿತ್ರ ಬುಧವಾರ 1 ಫೆಬ್ರವರಿ 2023

ಕುವೈತ್‌ನಲ್ಲಿ ಸಿಲುಕಿದ್ದ ವಿರಾಜಪೇಟೆಯ ಮಹಿಳೆ ಸುರಕ್ಷಿತವಾಗಿ ತಾಯ್ನಾಡಿಗೆ

ಕುಟುಂಬದವರ ಮನವಿಗೆ ಸ್ಪಂದಿಸಿದ ಕೊಡಗು ಜಿಲ್ಲಾಡಳಿತ

● ಏಜೆಂಟ್ ಮಾತು ನಂಬಿ ಕುವೈತ್‌ನಲ್ಲಿ ಕೆಲಸಕ್ಕೆ ತೆರಳಿದ್ದ ಮಹಿಳೆ ● ಮನೆ ಮಾಲೀಕನಿಂದ ಕಿರುಕುಳ, ಗೃಹ ಬಂಧನ

ಮಡಿಕೇರಿ, ಜ.31– ಏಜೆಂಟ್ ಮೂಲಕ ಕುವೈತ್‌ಗೆ ಕೆಲಸಕ್ಕೆಂದು ತೆರಳಿ, ಅಲ್ಲಿ ಸಿಲುಕಿಕೊಂಡಿದ್ದ ವಿರಾಜಪೇಟೆ ತಾಲೂಕು ಕರಡಿಗೋಡು ಗ್ರಾಮ ನಿವಾಸಿ ಪಾರ್ವತಿ ಎಂಬ ಮಹಿಳೆಯನ್ನು ಸುರಕ್ಷಿತವಾಗಿ ತಾಯ್ನಾಡಿಗೆ ಕರೆತರುವಲ್ಲಿ ಕೊಡಗು ಜಿಲ್ಲಾಡಳಿತ ಯಶಸ್ವಿಯಾಗಿದೆ. ಮಂಗಳವಾರ ಬೆಳಗ್ಗೆ 9 ಗಂಟೆಗೆ ಕುವೈತ್‌ನಿಂದ ಚೆನ್ನೈ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಪಾರ್ವತಿ ಬಂದಿಳಿದಿದ್ದು, ಅಲ್ಲಿಂದ್ದ ತನ್ನ ಹುಟ್ಟೂರು ಕರಡಿಗೋಡುವಿಗೆ ಆಗಮಿಸುತ್ತಿದ್ದಾರೆ.



ಘಟನೆ ಹಿನ್ನೆಲೆ: ಕರಡಿಗೋಡು ಗ್ರಾಮದ ಪಾರ್ವತಿ ಬಡ ಕುಟುಂಬದವಳಾಗಿದ್ದು, ಈ ಹಿಂದೆ ಕೇರಳದ ಮನೆಯೊಂದರಲ್ಲಿ ಮನೆ ಕೆಲಸ ಮಾಡಿಕೊಂಡಿದ್ದರು. ಈ ನಡುವೆ ತಮಿಳುನಾಡು ಮೂಲದ ಏಜೆಂಟ್ ಒಬ್ಬನ ಪರಿಚಯವಾಗಿದ್ದು, ಆತ ಕುವೈತ್‌ನಲ್ಲಿ ಕೆಲಸ ಮಾಡಿಸಿಕೊಡುವುದಾಗಿ ಪಾರ್ವತಿಗೆ ಹೇಳಿದ್ದ. ಅದರಂತೆ ಏಜೆಂಟ್ 'ವರ್ಕಿಂಗ್' ವೀಸಾದ ಬದಲಿಗೆ 'ವಿಸಿಟಿಂಗ್' ವೀಸಾ ನೀಡಿ 2022ರ ಸೆಪ್ಟೆಂಬರ್ 3ರಂದು ಕುವೈತ್‌ಗೆ ಕಳುಹಿಸಿದ್ದ.

ಅಲ್ಲಿ ಶ್ರೀಲಂಕಾ ಮೂಲದ ಕುವೈತ್‌ನ ಏಜೆಂಟ್ ಒಬ್ಬ ಪಾರ್ವತಿಯನ್ನು ಬರಮಾಡಿಕೊಂಡು ಅರಬ್ಬಿ ಕುಟುಂಬದ ಮನೆಯೊಂದಕ್ಕೆ ಕೆಲಸಕ್ಕೆ ಸೇರಿಸಿದ್ದ. ಮನೆ ಯಜಮಾನ ಮನೆ ಕೆಲಸದ ಜೊತೆಯಲ್ಲಿ ಇತರ ಕಠಿಣ ಕೆಲಸ ಮಾಡುವಂತೆ ಹಿಂಸಿಸುತ್ತಿದ್ದ. ಇದರಿಂದ ಮನನೊಂದ ಪಾರ್ವತಿ ತನ್ನನ್ನು ಭಾರತಕ್ಕೆ ಕಳುಹಿಸುವಂತೆ ಅರಬ್ಬಿ ಬಳಿ ಮನವಿ ಮಾಡಿದ್ದಳು. ಈ ಸಂದರ್ಭ ಅರಬ್ಬಿ ಆಕೆಯ ಪಾಸ್‌ಪೋರ್ಟ್ ಕಿತ್ತಿಟ್ಟುಕೊಂಡು ಏಜೆಂಟ್ 3 ಲಕ್ಷ ರೂ. ಪಡೆದಿದ್ದು, ಆ ಹಣ ನೀಡಿದಲ್ಲಿ ಮಾತ್ರವೇ ಪಾಸ್‌ಪೋರ್ಟ್ ನೀಡುವುದಾಗಿ ಹೇಳಿ ಗೃಹ ಬಂಧನದಲ್ಲಿರಿಸಿದ್ದ.

ಈ ವೇಳೆ ಪಾರ್ವತಿ ತನ್ನ ಮೊಬೈಲ್ ಫೋನ್ ಮೂಲಕ ಕರಡಿಗೋಡುವಿನಲ್ಲಿದ್ದ ತನ್ನ ಕುಟುಂಬವನ್ನು ಸಂಪರ್ಕಿಸಿ ಏಜೆಂಟ್ ಮಾಡಿರುವ ಮೋಸ ಮತ್ತು ಕುವೈತ್‌ನಲ್ಲಿ ಅನುಭವಿಸುತ್ತಿರುವ ನರಕ ಯಾತನೆಗಳ ಬಗ್ಗೆ ವಿವರಿಸಿದ್ದಳು. ಮಾತ್ರವಲ್ಲದೇ ತನ್ನನ್ನು ಕೂಡಿ ಹಾಕಿರುವ ಕಟ್ಟಡದ ವಿಡಿಯೋ ರೆಕಾರ್ಡ್‌ಗಳು, ವಾಯ್ಸ್ ರೆಕಾರ್ಡ್‌ಗಳನ್ನು ಕಳುಹಿಸಿದ್ದಳು. ಈ ಸಂದರ್ಭ ಆಕೆಯ ಕುಟುಂಬದ ಸದಸ್ಯರು ಜಿಲ್ಲಾಡಳಿತವನ್ನು ಸಂಪರ್ಕಿಸಿ ವಿಚಾರ ತಿಳಿಸಿದ್ದರು.

ತಕ್ಷಣವೇ ಸ್ಪಂದಿಸಿದ ಜಿಲ್ಲಾಡಳಿತ ಜಿಲ್ಲಾ ವಿಪತ್ತು ನಿರ್ವಹಣಾ ಪರಿಣಿತ ಅಧಿಕಾರಿ ಅನನ್ಯ ವಾಸುದೇವ್ ಅವರಿಗೆ ಪಾರ್ವತಿಯನ್ನು ತಾಯ್ನಾಡಿಗೆ ಕರೆ ತರುವ ಜವಾಬ್ದಾರಿ ವಹಿಸಿತ್ತು. ಅನನ್ಯ ವಾಸುದೇವ್ ಈ ವಿಚಾರಕ್ಕೆ ಸಂಬಂಧಿಸಿದಂತೆ ಸರಕಾರದ ಮೂಲಕ ವ್ಯವಹರಿಸಿ ವಿದೇಶಾಂಗ ಇಲಾಖೆಯ ಮೂಲಕ ಕುವೈತ್‌ನ ಭಾರತೀಯ ರಾಯಬಾರಿ ಕಚೇರಿಗೆ ಮಾಹಿತಿ ನೀಡಿದ್ದರು. ಮಾತ್ರವಲ್ಲದೇ ಪಾರ್ವತಿಯನ್ನು ಸಂಪರ್ಕಿಸಿ ವಿವರಗಳನ್ನು ಪಡೆದು ಆಕೆ ಇರುವ ಪ್ರದೇಶವನ್ನು ಪತ್ತೆ ಹಚ್ಚಿದ್ದರು. ತದನಂತರ ವಿದೇಶಾಂಗ ಇಲಾಖೆ ಮತ್ತು ಭಾರತೀಯ ರಾಯಬಾರಿ ಕಚೇರಿಗಳು ಪಾರ್ವತಿ ಅವರೊಂದಿಗೆ ನಿರಂತರ ಸಂಪರ್ಕ ಸಾಧಿಸಿದ್ದವು.

ಈ ಎಲ್ಲಾ ಬೆಳವಣಿಗೆಗಳ ನಡುವೆ ಭಾರತೀಯ ರಾಯಬಾರ ಕಚೇರಿ ಮಂಗಳವಾರ ಇಂಡಿಗೋ ಏರ್‌ಲೈನ್ ಮೂಲಕ ಪಾರ್ವತಿಯನ್ನು ಸುರಕ್ಷಿತವಾಗಿ ಭಾರತಕ್ಕೆ ಕಳುಹಿಸಿದ್ದು, ಮಂಗಳವಾರ ಬೆಳಗ್ಗೆ 9 ಗಂಟೆಗೆ ಚೆನ್ನೈ ತಲುಪಿದ್ದಾರೆ. ಅಲ್ಲಿಂದ ಪಾರ್ವತಿ ನೇರವಾಗಿ ಕರಡಿಗೋಡುವಿಗೆ ಆಗಮಿಸುತ್ತಿದ್ದಾರೆ ಎಂದು ಜಿಲ್ಲಾಡಳಿತದ ಪ್ರಕಟಣೆ ತಿಳಿಸಿದೆ. ಪಾರ್ವತಿಯನ್ನು ಸುರಕ್ಷಿತವಾಗಿ ಕರೆತರುವಲ್ಲಿ ಶ್ರಮಿಸಿದ ಜಿಲ್ಲಾಡಳಿತ ಮತ್ತು ಜಿಲ್ಲಾ ವಿಪತ್ತು ನಿರ್ವಹಣಾ ಪರಿಣಿತ ಅಧಿಕಾರಿ ಅನನ್ಯ ವಾಸುದೇವ್ ಅವರಿಗೆ ಪಾರ್ವತಿ ಕುಟುಂಬ ಧನ್ಯವಾದ ಸಲ್ಲಿಸಿದೆ.

ಇಂದಿನಿಂದ ಸ್ಥಳೀಯ ಸಂಸ್ಥೆಗಳ ಹೊರಗುತ್ತಿಗೆ ನೌಕರರ ಮುಷ್ಕರ

▸ ಸ್ವಚ್ಛತಾ ಕಾರ್ಯ, ಕುಡಿಯುವ ನೀರಿನ ಸರಬರಾಜು ವ್ಯತ್ಯಯ
▸ ಹೊರಗುತ್ತಿಗೆ ನೌಕರರ ನೇರ ನೇಮಕಾತಿಗೆ ಆಗ್ರಹ

ಮಡಿಕೇರಿ, ಜ.31– ಹೊರಗುತ್ತಿಗೆ ನೌಕರರ ನೇರ ನೇಮಕಾತಿಯ ಪ್ರಮುಖ ಬೇಡಿಕೆಗೆ ರಾಜ್ಯ ಸರ್ಕಾರ ಸೂಕ್ತ ಸ್ಪಂದನ ನೀಡಿಲ್ಲ ಎನ್ನುವ ಪ್ರಮುಖ ಕಾರಣಗಳ ಹಿನ್ನೆಲೆ ಫೆ.1ರಿಂದ ಕೊಡಗನ್ನು ಒಳಗೊಂಡಂತೆ ರಾಜ್ಯದಾದ್ಯಂತ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಗಳ ಹೊರಗುತ್ತಿಗೆ ನೌಕರು ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಇಳಿಯಲಿದ್ದಾರೆ. ಈ ಕಾರಣದಿಂದ ಸ್ವಚ್ಛತಾ ಕಾರ್ಯ ಮತ್ತು ಕುಡಿಯುವ ನೀರಿನ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.

ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯ್ತಿ ಹೊರಗುತ್ತಿಗೆ ನೌಕರರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಡಿ.ಡಿ.ಈರಪ್ಪ ಶೆಟ್ಟಿ ಈ ವಿಚಾರ ತಿಳಿಸಿ, ಕೊಡಗಿನ ಮಡಿಕೇರಿ ನಗರಸಭೆ, ವಿರಾಜಪೇಟೆ, ಸೋಮವಾರಪೇಟೆ, ಕುಶಾಲನಗರ ನಗರ ಸ್ಥಳೀಯ ಸಂಸ್ಥೆಗಳ 80 ಮಂದಿ ಹೊರಗುತ್ತಿಗೆ ನೌಕರರು ಕಾರ್ಯಸ್ಥಗಿತಗೊಳಿಸಿ ಪ್ರತಿಭಟನೆ ನಡೆಸಲಿದ್ದಾರೆ. ಈ ಸಂದರ್ಭ ಜನರ ಮೂಲಭೂತ ಅಗತ್ಯವಾದ ನೀರು ಸರಬರಾಜಿನಲ್ಲಿ ಒಂದಷ್ಟು ವ್ಯತ್ಯಯಗಳಾಗಬಹುದಾದರು, ಸಾರ್ವಜನಿಕರು ಸಂಕಷ್ಟಕ್ಕೆ ಸಿಲುಕಬಾರದೆನ್ನುವ ಚಿಂತನೆಯಡಿ ನೀರು ಸರಬರಾಜಿಗೆ ಪರ್ಯಾಯ ಕ್ರಮಗಳನ್ನು ಮಾಡಲಾಗಿದೆ. ನಮ್ಮ ಹೋರಾಟಕ್ಕೆ ಸಾರ್ವಜನಿಕರು ಸಹಕರಿಸುವಂತೆ ಮನವಿ ಮಾಡಿದರು.



ಪ್ರಮುಖ ಬೇಡಿಕೆಯ ಬಗ್ಗೆ ಸರ್ಕಾರದ ಗಮನ ಸೆಳೆಯುವ ಉದ್ದೇಶದಿಂದ ಅಂದು ಮಡಿಕೇರಿ ನಗರಸಭೆಯ ಮುಂಭಾಗ 'ಮೌನ ಪ್ರತಿಭಟನೆ' ನಡೆಸಲಿರುವುದಾಗಿ ಈರಪ್ಪ ಶೆಟ್ಟಿ ತಿಳಿಸಿ, ಬೇಡಿಕೆ ಈಡೇರುವವರೆಗೆ ಮುಷ್ಕರ ಮುಂದುವರೆಯಲಿದೆ. ಹೊರಗುತ್ತಿಗೆ ನೌಕರರ ನೇರ ನೇಮಕಾತಿ ಮಾಡುವಂತೆ ಸರ್ಕಾರಕ್ಕೆ ಈ ಹಿಂದೆಯೇ ಮನವಿ ಮಾಡಿದ್ದರು ಸೂಕ್ತ ಸ್ಪಂದನ ನೀಡದ ಹಿನ್ನೆಲೆ ಮುಷ್ಕರದ ಹಾದಿ ಹಿಡಿದಿರುವುದಾಗಿ ಹೇಳಿದರು.

ರಾಜ್ಯ ಸರ್ಕಾರ ಹೊರಗುತ್ತಿಗೆ ನೌಕರರನ್ನು ಮಲತಾಯಿ ಧೋರಣೆಯಿಂದ ನಡೆಸಿಕೊಳ್ಳುತ್ತಿದ್ದು, ಈ ಬಾರಿ ನಮ್ಮ ಬೇಡಿಕೆ ಈಡೇರುವವರೆಗೆ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹೊರಗುತ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೀರು ಸರಬರಾಜುದಾರರು, ಡಾಟಾ ಆಪರೇಟರ್‌ಗಳು, ಸ್ವಚ್ಛತಾ ಕಾರ್ಯದಲ್ಲಿ ನಿರತ ಕಾರ್ಮಿಕರು ತಮ್ಮ ಕೆಲಸವನ್ನು ಸ್ಥಗಿತಗೊಳಿಸಲಿದ್ದಾರೆಂದು ಸ್ಪಷ್ಟಪಡಿಸಿದರು

ರಾಜ್ಯ ಸರ್ಕಾರ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುವ ಪೌರ ಕಾರ್ಮಿಕರನ್ನು ಕಾಯಂ ಗೊಳಿಸಲು ಮುಂದಾಗಿರುವ ಹಂತದಲ್ಲಿ, ಹೊರಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುವ ವಾಹನ ಚಾಲಕರು, ನೀರು ಸರಬರಾಜು ಸಹಾಯಕರು, ಡಾಟಾ ಆಪರೇಟರುಗಳು ಸೇರಿದಂತೆ 15 ಸಾವಿರಕ್ಕೂ ಹೆಚ್ಚು ನೌಕರರನ್ನು ಹಾಗೆಯೇ ಉಳಿಸಿ ತಾರತಮ್ಯ ಎಸಗುತ್ತಿದೆ. ಒಂದೇ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುವವರ ಮಧ್ಯೆ ಒಡೆದಾಳುವ ನೀತಿ ಅನುಸರಿಸುವುದು ಸರ್ಕಾರಕ್ಕೆ ಶೋಭೆ ತರಲಾರದು ಎಂದರು. ರಾಜ್ಯ ಸರ್ಕಾರ ಆಗಿರುವ ಲೋಪವನ್ನು ಸರಿಪಡಿಸಿ ಹೊರಗುತ್ತಿಗೆ ನೌಕರರನ್ನು ಪೌರಕಾರ್ಮಿಕರ ಮಾದರಿಯಲ್ಲಿ ನೇರಪಾವತಿಗೆ ಗೊಳಪಡಿಸುವವರೆಗೆ ಮುಷ್ಕರ ಮುಂದುವರೆಯಲಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಉಪಾಧ್ಯಕ್ಷ ಎ.ಎ. ಬೋಪಣ್ಣ, ಕಾರ್ಯದರ್ಶಿ ಟಿ.ಬಿ. ರಮೇಶ್ ಕುಟ್ಟಪ್ಪ, ಖಜಾಂಚಿ ಎಂ.ಎ. ಕಬೀರ್ ಅಹಮ್ಮದ್, ಸಂಚಾಲಕ ಕೆ.ಎಸ್. ಮಹದೇವಪ್ಪ ಉಪಸ್ಥಿತರಿದ್ದರು.

ಪೊನ್ನಂಪೇಟೆ–ಕಾನೂರು–ನಿಟ್ಟೂರು ರಸ್ತೆ ಉದ್ಘಾಟನೆ



ಗೋಣಿಕೊಪ್ಪ, ಜ.31– ಒಂದು ಕೋಟಿ ರೂ. ಅನುದಾನದಲ್ಲಿ ಅಭಿವೃದ್ಧಿ ಪಡಿಸಿದ ಪೊನ್ನಂಪೇಟೆ–ಕಾನೂರು–ನಿಟ್ಟೂರು ಸಂಪರ್ಕ ರಸ್ತೆಯನ್ನು ಶಾಸಕ ಕೆ. ಜಿ. ಬೋಪಯ್ಯ ಉದ್ಘಾಟಿಸಿದರು. ನಂತರ ಮಾತನಾಡಿ, ಮಳೆಯ ಕಾರಣದಿಂದ ಸಾಕಷ್ಟು ಕಾಮಗಾರಿ ವಿಳಂಬವಾಗಿತ್ತು. ಮಾರ್ಚ್ ಅಂತ್ಯದೊಳಗೆ ಕ್ಷೇತ್ರ ವ್ಯಾಪ್ತಿಯ ರಸ್ತೆ ಅಭಿವೃದ್ಧಿ ಕಾರ್ಯಗಳು ಮುಗಿಯಲಿದೆ ಎಂದು ತಿಳಿಸಿದರು.

ನಿಟ್ಟೂರು ಗ್ರಾ.ಪಂ. ಅಧ್ಯಕ್ಷ ಕಾಟಿಮಾಡ ಶರೀನ್ ಮುತ್ತಣ್ಣ ಮಾತನಾಡಿದರು. ಮೂಲ ಸೌಕರ್ಯಗಳು ಬೇಡಿಕೆಗೆ ಸ್ಪಂದಿಸಿದ್ದಾರೆ ಎಂದರು. ತಾಲೂಕು ಬಗರ್‌ಹುಕಂ ಸಕ್ರಮೀಕರಣ ಸಮಿತಿ ಅಧ್ಯಕ್ಷ ಕಾಡ್ಯಮಾಡ ಗಿರೀಶ್ ಗಣಪತಿ, ನಿಟ್ಟೂರು ಗ್ರಾಪಂ ಸದಸ್ಯ ಚಕ್ಕೇರ ಸೂರ್ಯ ಅಯ್ಯಪ್ಪ, ಬಿಜೆಪಿ ಕೃಷಿ ಮೋರ್ಚ ಸದಸ್ಯೆ ಮಾಪಂಗಡ ಯಮುನಾ ಚಂಗಪ್ಪ, ಐಟಿಡಿಪಿ ಅಧಿಕಾರಿ ನವೀನ್ ಇದ್ದರು.

ಹೇಮಂತ್‌ಗೆ ಪಿಎಚ್.ಡಿ

ವಿರಾಜಪೇಟೆ, ಜ.31– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರೊ.ಕವಿತಾ ರೈ ಅವರ ಮಾರ್ಗದರ್ಶನದಲ್ಲಿ ಹೇಮಂತ್ ಕುಮಾರ್ ಎಂ. ಎನ್. ಅವರು 'ಕೊಡವ ಹಾಗೂ ತುಳು ಸಂಸ್ಕೃತಿಗಳ ತೌಲನಿಕ ಅಧ್ಯಯನ' ಎಂಬ ವಿಷಯದ ಕುರಿತು ಸಂಶೋಧನೆ ನಡೆಸಿ ಸಲ್ಲಿಸಿದ ಮಹಾಪ್ರಬಂಧವನ್ನು ರಾಜ್ಯ ಮುಕ್ತ ವಿವಿ ಪಿಹೆಚ್‌ಡಿ ಪದವಿಗೆ ಅಂಗೀಕರಿಸಿದೆ. ಹೇಮಂತ್ ಕುಮಾರ್ ಎಂ.ಎನ್. ಇವರು ವಿರಾಜಪೇಟೆಯ ಸಂತ ಅನ್ನಮ್ಮ ಪದವಿ ಪೂರ್ವ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.



ಫುಟ್ಬಾಲ್ ಆಟ ಮಕ್ಕಳ ಭವಿಷ್ಯಕ್ಕೆ ಸಹಕಾರಿ

ವಿರಾಜಪೇಟೆ, ಜ.31– ಫುಟ್ಬಾಲ್ ಕ್ರೀಡೆಯು ಮಟ್ಟ ಮಕ್ಕಳಿಗೆ ಕಷ್ಟ ಅನಿಸಿದರು ಬಿಡದೆ ಮುಂದುವರೆಸಿದರೆ ಛಲದಿಂದ ಜೀವನದಲ್ಲಿ ಏಳಿಗೆ ಸಾಧ್ಯ. ವಿದ್ಯಾರ್ಥಿಗಳು ತಮ್ಮ ಜೀವನದ ಭವಿಷ್ಯವನ್ನು ಕ್ರೀಡೆಯಲ್ಲಿಯೇ ರೂಪಿಸಿ ಕೊಳ್ಳುವಂತಾಗಬೇಕು ಎಂದು ಭಾರತದ ಪ್ರತಿಷ್ಠಿತ ಫುಟ್ಬಾಲ್ ಲೀಗ್ ಅನುಭವಿ ಐಎಸ್‌ಎಲ್ ಆಟಗಾರ ತಮಿಳುನಾಡಿನ ಧನ್‌ಪಾಲ್ ಗಣೇಶ್ ತಿಳಿಸಿದರು.



ವಿರಾಜಪೇಟೆ ನಗರದಲ್ಲಿರುವ ಪ್ರಗತಿ ವಿದ್ಯಾಸಂಸ್ಥೆಯ ಮೈದಾನದಲ್ಲಿ 8 ರಿಂದ 13 ವರ್ಷದ ವಿದ್ಯಾರ್ಥಿಗಳಿಗೆ ಆಯೋಜಿಸಲಾಗಿದ್ದ ಫುಟ್ಬಾಲ್ ಪಂದ್ಯಾವಳಿಯ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿ ಮಕ್ಕಳ ಮುಂದಿನ ಭವಿಷ್ಯಕ್ಕೆ ಫುಟ್ಬಾಲ್ ಕ್ರೀಡೆಯು ಸಹಕಾರಿಯಾಗಲಿದ್ದು ಉತ್ತಮ ಕ್ರೀಡಾಪಟುಗಳಾಗಿ ಜಿಲ್ಲೆ, ರಾಜ್ಯ, ನಂತರ ರಾಷ್ಟ್ರಮಟ್ಟದಲ್ಲಿ ಭಾಗವಹಿಸುವಂತೆ ಶುಭ ಹಾರೈಸಿದರು.

ಪ್ರಗತಿ ಶಾಲಾ ಮುಖ್ಯಸ್ಥರು ರಗ್ಬಿ ಆಟಗಾರ ಮಾದಂಡ ತಿಮ್ಮಯ್ಯ ಅವರು ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, 8 ರಿಂದ 13 ವರ್ಷದ ಚಿಕ್ಕ ಮಕ್ಕಳಿಗೆ ಫುಟ್ಬಾಲ್ ಪಂದ್ಯಾಟದ ಬಗ್ಗೆ ಮಾಹಿತಿ ನೀಡುವ ಮೂಲಕ ಕಳೆದ ನಾಲ್ಕು ವಾರಗಳಿಂದಲೂ ಈ ಮೈದಾನದಲ್ಲಿ ವಿದ್ಯಾರ್ಥಿಗಳ 18 ತಂಡಗಳು ಭಾಗವಹಿಸಿದ್ದು, ನಂತರ ಅಮ್ಮತ್ತಿಯ ಮೈದಾನದಲ್ಲಿ ಅಂತಿಮ ಫುಟ್ಬಾಲ್ ಪಂದ್ಯಾಟ ನಡೆಯಲಿದೆ. ಕೊಡಗು ಫುಟ್ಬಾಲ್ ಅಶೋಸಿಯೇಶನ್ ಸಹಕಾರದೊಂದಿಗೆ ಕ್ರೀಡೆಯಲ್ಲಿ ಭಾಗವಹಿಸಿದ ಮಕ್ಕಳನ್ನು ಉತ್ತಮ ಕ್ರೀಡಾಪಟುಗಳನ್ನಾಗಿ ಬೆಳಸಿ ರಾಜ್ಯ ಮಟ್ಟದ ಕ್ರೀಡಾಪಟುಗಳಾಗಿ ಪಂದ್ಯಾಟದಲ್ಲಿ ಭಾಗವಹಿಸುವಂತೆ ಮಕ್ಕಳನ್ನು ಪ್ರೋತ್ಸಾಹಿಸಲಾಗುವುದು ಎಂದರು.

ಕೊಡಗು ಫುಟ್ಬಾಲ್ ಅಶೋಸಿಯೇಶನ್ ಅಧ್ಯಕ್ಷ ಜಗದೀಶ್ ಮಂದಪ್ಪ ಸಭೆಯನ್ನುದ್ದೇಶಿಸಿ ಮಾತನಾಡಿ, ಮಕ್ಕಳನ್ನು ಉತ್ತಮ ಆಟಗಾರರನ್ನಾಗಿ ಬೆಳೆಸುವ ನಿಟ್ಟಿನಲ್ಲಿ ನಮ್ಮ ಸಂಸ್ಥೆ ಕಾರ್ಯನಿರ್ವಹಿಸುತ್ತಿದೆ ಎಂದರು.

ಅಸೋಸಿಯೇಶನ್ ಕಾರ್ಯದರ್ಶಿ ನಾಗೇಶ್ ಅವರು ಮಾತನಾಡಿ ಫುಟ್ಬಾಲ್ ಕ್ರೀಡೆಯ ಬಗ್ಗೆ ವಿದ್ಯಾರ್ಥಿಗಳ ಮುಂದಿನ ಭವಿಷ್ಯಕ್ಕೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಕಳೆದ ಐದು ವರ್ಷಗಳಿಂದ ಕೊಡಗು ಜಿಲ್ಲೆಯಲ್ಲಿ ಕೊಡಗಿನ ಕ್ರೀಡಾಪಟುಗಳಾಗಿ ಮುಂದೆ ಬರಬೇಕೆಂದು ಮಕ್ಕಳಿಗೆ ಫುಟ್ಬಾಲ್ ಪಂದ್ಯಾಟಕ್ಕೆ ಪ್ರೋತ್ಸಾಹ ನೀಡಲಾಗುತ್ತಿದೆ. ಆದರೆ ಫುಟ್ಬಾಲ್ ಪಂದ್ಯಾಟಕ್ಕೆ ಮೈದಾನದ ಅವಶ್ಯಕತೆ ಇರುವುದಾಗಿ ತಿಳಿಸಿದರು. ಭಾರತದ ಫುಟ್ಬಾಲ್ ಆಟಗಾರ ಧನ್‌ಪಾಲ್ ಗಣೇಶ್ ಅವರಿಗೆ ವೇದಿಕೆಯಲ್ಲಿ ರಗ್ಬಿ ಆಟಗಾರ ಮಾದಂಡ ತಿಮ್ಮಯ್ಯ ಅವರು ಸನ್ಮಾನಿಸಿ ಗೌರವಿಸಿದರು. ವಿದ್ಯಾರ್ಥಿಗಳಾದ ಸೈಮಾ ಸ್ವಾಗತಿಸಿದರು, ಈಜ್ಬಾ ನಿರೂಪಿಸಿದರೆ, ಅಸ್ನಾ ವಂದಿಸಿದರು.

ಮುಕ್ತ ವಿವಿ; ಪ್ರವೇಶಾತಿ ಆರಂಭ

ಮಡಿಕೇರಿ, ಜ.31– ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಡಿಕೇರಿ ಪ್ರಾದೇಶಿಕ ಕೇಂದ್ರ ವತಿಯಿಂದ 2023ರ ಜನವರಿ ಆವೃತ್ತಿಗೆ ಶೈಕ್ಷಣಿಕ ಕಾರ್ಯಕ್ರಮಗಳ ಪ್ರವೇಶಾತಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಸ್ನಾತಕ ಶಿಕ್ಷಣ ಕಾರ್ಯಕ್ರಮಗಳು ಬಿ.ಎ., ಬಿ.ಕಾಂ, ಬಿ.ಲಿಬ್.ಐಎಸ್‌ಸಿ, ಬಿ.ಬಿ.ಎ (ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್), ಬಿ.ಎಸ್‌ಸಿ(ಸಂಯೋಜನೆಗಳು), ಸ್ನಾತಕೋತ್ತರ(ಪಿಜಿ) ಶಿಕ್ಷಣ ಕಾರ್ಯಕ್ರಮಗಳು ಎಂ.ಎ., ಎಂಬಿಎ, ಎಂಕಾಂ, ಎಂ.ಲಿಬ್, ಐಎಸ್‌ಸಿ, ಎಂಎಸ್‌ಸಿ, ಪ್ರವೇಶಾತಿ ಹಾಗೂ ಇನ್ನಿತರ ಮಾಹಿತಿಗೆ ಅರ್ಜಿದಾರರು ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾಲಯದ ಅಧಿಕೃತ ವೆಬ್‌ಸೈಟ್ www.ksoumysuru.ac.inನ್ನು ವೀಕ್ಷಿಸುವುದು. ಹೆಚ್ಚಿನ ಮಾಹಿತಿಗೆ ನಗರದ ಸರ್ಕಾರಿ ಜೂನಿಯರ್ ಕಾಲೇಜು ಆವರಣದಲ್ಲಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾಲಯ ಪ್ರಾದೇಶಿಕ ಕಚೇರಿಗೆ ಭೇಟಿ ನೀಡಿ ಮಾಹಿತಿ ಪಡೆಯಬಹುದಾಗಿದೆ. ದೂ. 08272–201147, 80733–42310, 9141938803 ಸಂಪರ್ಕಿಸಬಹುದು.

ಜಾನಪದ ಕಲೆಗಳಿಗೆ ವಿಶೇಷ ಒತ್ತು ಅಗತ್ಯ





ಚಾಮರಾಜನಗರ, ಜ.31– ಜಿಲ್ಲೆಯಲ್ಲಿ ಪ್ರತಿಭಾನ್ವಿತ ಜನಪದ ಕಲಾವಿದರಿದ್ದು, ಜಾನಪದ ಕಲೆಗಳಿಗೆ ಹೆಚ್ಚು ಒತ್ತು ಹಾಗೂ ಪ್ರೋತ್ಸಾಹ ನೀಡಬೇಕೆಂದು ಶಾಸಕ ಸಿ. ಪುಟ್ಟರಂಗಶೆಟ್ಟಿ ತಿಳಿಸಿದರು.

ನಗರದ ಜಿಲ್ಲಾಡಳಿತ ಭವನದಲ್ಲಿರುವ ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಆಯೋಜಿಸಲಾಗಿದ್ದ ಜನಪರ ಉತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಭಜನೆ, ತತ್ವಪದಗಳು, ಸೋಬಾನೆ ಸೇರಿದಂತೆ ಅನೇಕ ಜನಪದ ಕಲೆಗಳಿಗೆ ಜಿಲ್ಲೆ ಹೆಸರುವಾಸಿಯಾಗಿದೆ. ಇಲ್ಲಿನ ಕಲಾವಿದರ ಜನಪದ ಹಾಡುಗಳನ್ನು ಎಷ್ಟು ಆಸ್ವಾದಿಸಿದರು ಮತ್ತೆ ಮತ್ತೆ ಕೇಳಬೇಕು ಎನಿಸುತ್ತದೆ. ಸ್ಥಳೀಯ ಜಾನಪದ ಕಲೆ ಸಂಸ್ಕೃತಿ ಬೆಳೆಯಲು ಉತ್ತೇಜನ ಮುಂದುವರೆಸಬೇಕಿದೆ ಎಂದರು.

ಜಾನಪದ ಕಲೆಗಳ ಸಾರ ಹೆಚ್ಚು ಅರ್ಥಪೂರ್ಣವಾಗಿವೆ. ಇವುಗಳಲ್ಲಿ ಒಳ್ಳೆಯ ಅಂಶಗಳು ಇವೆ. ಕಲಾವಿದರಿಗೆ ಅವಕಾಶ ನೀಡುವ ಕಾರ್ಯಕ್ರಮಗಳು ಸಹಕಾರಿಯಾಗಲಿದೆ. ಹೀಗಾಗಿ ಇಲ್ಲಿನ ಕಲೆ, ಸಂಸ್ಕೃತಿಗೆ ವಿಶೇಷ ಮಹತ್ವ ನೀಡಬೇಕೆಂದು ಶಾಸಕರು ತಿಳಿಸಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ನಗರಸಭೆ ಅಧ್ಯಕ್ಷೆ ಸಿ.ಎಂ. ಆಶಾ ಅವರು ಜನಪದ ಕಲೆಗಳು ನಶಿಸಿ ಹೋಗುತ್ತಿರುವ ಇಂದಿನ ದಿನಗಳಲ್ಲಿ ನಮ್ಮ ಜನಪದ ಸಂಸ್ಕೃತಿ ಉಳಿಸಿ ಪೋಷಿಸಬೇಕು. ಇತ್ತೀಚಿನ ದಿನಗಳಲ್ಲಿ ನಮ್ಮ ಸಂಸ್ಕೃತಿಯನ್ನು ಮರೆತು ಅನ್ಯ ಸಂಸ್ಕೃತಿಯ ಪ್ರಭಾವಕ್ಕೆ ಹೆಚ್ಚು ಒಳಗಾಗುತ್ತಿದ್ದೇವೆ. ಯಾವುದೇ ಅರಿವು ಇಲ್ಲದ ಮುಂದಿನ ಪೀಳಿಗೆಯವರಿಗೆ ಸ್ಥಳೀಯ ಪರಂಪರೆ ಬಗ್ಗೆ ತಿಳಿಸಿಕೊಡಬೇಕಿದೆ. ಇಲ್ಲಿನ ಸಂಸ್ಕೃತಿ, ಜಾನಪದ ಕಲೆಗಳನ್ನು ಪ್ರೀತಿಸಬೇಕು ಮತ್ತು ಬೆಳೆಸಬೇಕು ಎಂದು ಹೇಳಿದರು.

ಕಾವೇರಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜಿ. ನಿಜಗುಣರಾಜು ಅವರು ಮಾತನಾಡಿ ಚಾಮರಾಜನಗರ ಎಂದ ಕೂಡಲೇ ಜಾನಪದ ತವರೂರು ಎಂದು ತಕ್ಷಣವೇ ನೆನಪಾಗುತ್ತದೆ. ಮಲೆ ಮಹದೇಶ್ವರರು, ಸಿದ್ದಾಪ್ಪಾಜಿಯವರ ನೆಲೆಯಾಗಿರುವ ಜಿಲ್ಲೆ ಜಾನಪದ ಕಲೆಗಳಿಂದ ಗುರುತಿಸಿಕೊಂಡಿದೆ ಎಂದರು.

ದಾಸ ಸಾಹಿತ್ಯ, ಕನ್ನಡ ಸಾಹಿತ್ಯ, ವಚನ ಸಾಹಿತ್ಯಗಳ ರೀತಿಯಲ್ಲಿ ಜಾನಪದ ಸಾಹಿತ್ಯಕ್ಕೂ ತನ್ನದೇ ಆದ ವಿಶೇಷತೆ ಇದೆ. ಇಂತಹ ಅಮೂಲ್ಯ ಪರಂಪರೆ ಮುಂದಿನ ಪೀಳಿಗೆಗೂ ತಲುಪಬೇಕಿದೆ. ಮುಖ್ಯಮಂತ್ರಿಯವರನ್ನು ಭೇಟಿಯಾಗುವ ಸಂದರ್ಭದಲ್ಲಿ ಚಾಮರಾಜನಗರ ಜಿಲ್ಲೆಯಲ್ಲೂ ಜಾನಪದ ವಿಶ್ವವಿದ್ಯಾಲಯ ಸ್ಥಾಪಿಸಲು ಮನವಿ ಮಾಡಲಾಗುವುದೆಂದು ಜಿ. ನಿಜಗುಣರಾಜು ತಿಳಿಸಿದರು.

ಹಿರಿಯ ಜಾನಪದ ಕಲಾವಿದರಾದ ಸಿ.ಎಂ. ನರಸಿಂಹಮೂರ್ತಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಎ. ರಮೇಶ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎನ್. ಗುರುಲಿಂಗಯ್ಯ, ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಉದ್ಘಾಟನಾ ಕಾರ್ಯಕ್ರಮಕ್ಕೂ ಮೊದಲು ಚಾಮರಾಜೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಗಣ್ಯರು ಕಲಾತಂಡಗಳ ಮೆರವಣಿಗೆಗೆ ಚಾಲನೆ ನೀಡಿದರು. ದೇವಸ್ಥಾನದಿಂದ ಹೊರಟ ಕಲಾತಂಡಗಳ ಮೆರವಣಿಗೆ ಬಿ ರಾಚಯ್ಯ ಜೋಡಿ ರಸ್ತೆಯ ಮೂಲಕ ಸಾಗಿ ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರಕ್ಕೆ ತಲುಪಿತು.

ಪ್ರೀತಿಸುವ ನಾಟಕವಾಡಿ ಅಪ್ರಾಪ್ತೆ ಅಪಹರಿಸಿ, ಅತ್ಯಾಚಾರ: 7 ಮಂದಿಗೆ 10 ವರ್ಷ ಜೈಲು

ಚಾಮರಾಜನಗರ, ಜ.31– ಪ್ರೀತಿಸುವ ನಾಟಕವಾಡಿ, ಬ್ಲ್ಯಾಕ್ ಮೇಲ್ ಮಾಡಿ ಅಪ್ರಾಪ್ತ ಬಾಲಕಿಯನ್ನು ಅಪಹರಿಸಿ, ಅತ್ಯಾಚಾರ ನಡೆಸಿದ ಪ್ರಮುಖ ಆರೋಪಿ ಮತ್ತು ಇದಕ್ಕೆ ಸಹಕರಿಸಿದ ಆರು ಮಂದಿಗೆ ನಗರದ ಮಕ್ಕಳ ಸ್ನೇಹಿ ಹಾಗೂ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಪೋಕ್ಸೋ ಕಾಯ್ದೆಯನ್ವಯ 10 ವರ್ಷಗಳ ಕಠಿಣ ಜೈಲು ಶಿಕ್ಷೆ ವಿಧಿಸಿದೆ.



ಪ್ರಮುಖ ಆರೋಪಿ ಮಹಮದ್ ಮೀನಜ್ ಖಾನ್



ನಗರದ ಕ್ರಿಶ್ಚಿಯನ್ ಕಾಲೋನಿ ನಿವಾಸಿ ಮಹಮದ್ ಮೀನಜ್ ಖಾನ್ (24) ಅತ್ಯಾಚಾರ ಎಸಗಿರುವುದು ಸಾಬೀತಾದ ಹಿನ್ನೆಲೆಯಲ್ಲಿ ನ್ಯಾಯಾಲಯ ಪೋಕ್ಸೋ ಕಾಯ್ದೆ ಕಲಂ 6ರ ಅನ್ವಯ 10 ವರ್ಷ ಕಠಿಣ ಶಿಕ್ಷೆ ವಿಧಿಸಿದೆ. ನಗರದ ಎ.ಪಿ. ಮೊಹಲ್ಲಾ ನಿವಾಸಿ ಸಲ್ಮಾನ್ ಖಾನ್ (24), ಮಂಡ್ಯ ನಗರದ ಶಾರುಖ್ ಖಾನ್ (22), ಬೆಂಗಳೂರಿನ ಬೊಮ್ಮನಹಳ್ಳಿಯ ಮಹೀದ್ ಅಹಮದ್ (18), ಮಂಡ್ಯದ ವಿ.ವಿ. ಬಡಾವಣೆಯ ಮಹಮದ್ ಅಮೀರ್ (24), ನಗರದ ಕ್ರಿಶ್ಚಿಯನ್ ಕಾಲೋನಿ ನಿವಾಸಿ ಮುಸ್ತಾಖಿಮ್ ಖಾನ್ (28) ಮೈಸೂರಿನ ಶಾಂತಿ ನಗರದ ಸಯ್ಯದ್ ಉಮರ್ (29) ಅತ್ಯಾಚಾರಕ್ಕೆ ಸಹಕರಿಸಿದ ಹಿನ್ನೆಲೆಯಲ್ಲಿ ಇವರೆಲ್ಲರಿಗೂ ಪೋಕ್ಸೋ ಕಾಯ್ದೆ ಕಲಂ 17ರ ಅನ್ವಯ ತಲಾ 10 ವರ್ಷ ಕಠಿಣ ಜೈಲು ಶಿಕ್ಷೆ ವಿಧಿಸಲಾಗಿದೆ.

ಪ್ರಕರಣದ ವಿವರ: 2016ರಲ್ಲಿ ಈ ಪ್ರಕರಣ ನಡೆದಿದ್ದು, ಮೊದಲ ಆರೋಪಿ ಮೀನಜ್‌ಖಾನ್ ಎಂಬಾತ ಅಪ್ರಾಪ್ತ ಬಾಲಕಿಯನ್ನು ಪ್ರೀತಿಸುವ ನಾಟಕವಾಡಿ, ಆಕೆಯ ಖಾಸಗಿ ಫೋಟೋಗಳನ್ನು ಸೆರೆಹಿಡಿದು, ತನ್ನ ಜೊತೆ ಬಾರದೇ ಹೋದರೆ, ಫೋಟೋಗಳನ್ನು ಬಹಿರಂಗಪಡಿಸುವುದಾಗಿ ಬ್ಲ್ಯಾಕ್ ಮೇಲ್ ಮಾಡಿದ್ದ. ಬಳಿಕ ಬಾಲಕಿಯನ್ನು ಅಪಹರಿಸಿಕೊಂಡು ಹೋಗಿದ್ದ. ಬಾಲಕಿಯ ಇಷ್ಟಕ್ಕೆ ವಿರುದ್ಧವಾಗಿ ಅತ್ಯಾಚಾರ ನಡೆಸಿದ್ದ. ಈ ಮಧ್ಯೆ ಕಾಣೆಯಾಗಿರುವ ತಮ್ಮ ಮಗಳನ್ನು ಹುಡುಕಿಕೊಡುವಂತೆ ಬಾಲಕಿಯ ತಂದೆ ಪಟ್ಟಣ ಠಾಣೆಗೆ ದೂರು ನೀಡಿದ್ದರು.

ಅಂದು ಪಟ್ಟಣ ಠಾಣೆ ಇನ್‌ಸ್ಪೆಕ್ಟರ್ ಆಗಿದ್ದ ಪ್ರಸ್ತುತ ನಗರದ ಪೂರ್ವ ಠಾಣೆ ಇನ್‌ಸ್ಪೆಕ್ಟರ್ ಆಗಿರುವ ಆರ್. ಶ್ರೀಕಾಂತ್ ಅವರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ್ದರು. ಬಾಲಕಿಯನ್ನು ಅಪಹರಿಸಿ ಮಂಡ್ಯ, ಮೈಸೂರು, ಬೆಂಗಳೂರಿನಲ್ಲಿ ಬಚ್ಚಿಡಲಾಗಿತ್ತು. ಇದಕ್ಕೆ ಮೊದಲ ಆರೋಪಿಗೆ ಉಳಿದ ಆರು ಮಂದಿ ಆರೋಪಿಗಳು ಸಹಕರಿಸಿದ್ದರು. ಪಟ್ಟಣ ಠಾಣೆ ಇನ್‌ಸ್ಪೆಕ್ಟರ್ ಶ್ರೀಕಾಂತ್ ಅವರು ಆರೋಪಿಗಳನ್ನು ಪತ್ತೆ ಹಚ್ಚಿ, ಬಂಧಿಸಿ, ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆದು, ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಮಂಗಳವಾರ ಮಕ್ಕಳ ಸ್ನೇಹಿ ಹಾಗೂ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶರಾದ ಎ.ಸಿ. ನಿಶಾರಾಣಿಯವರು ಅಪರಾಧಿಗಳಿಗೆ 10 ವರ್ಷಗಳ ಕಠಿಣ ಶಿಕ್ಷೆ ವಿಧಿಸಿದ್ದಾರೆ. ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರವು ನೊಂದ ಬಾಲಕಿಗೆ 2 ಲಕ್ಷ ರೂ. ಪರಿಹಾರವನ್ನು 30 ದಿನಗಳೊಳಗೆ ನೀಡಬೇಕೆಂದು ಆದೇಶಿಸಿದ್ದಾರೆ. ಪ್ರಾಸಿಕ್ಯೂಷನ್ ಪರವಾಗಿ ಕೆ. ಯೋಗೇಶ್ ವಾದ ಮಂಡಿಸಿದ್ದರು.

ನಶಿಸುತ್ತಿರುವ ರಂಗಭೂಮಿ ಕಲೆಯನ್ನು ಉಳಿಸಿ, ಬೆಳಸಿ: ಉಮೇಶ್

ಚಾಮರಾಜನಗರ, ಜ.31– ನಶಿಸುತ್ತಿರುವ ರಂಗಭೂಮಿ ಕಲೆಯನ್ನು ಬೆಳಸಿ, ಉಳಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ಕನಿಷ್ಠ ವೇತನ ಸಲಹಾ ಸಮಿತಿ ಮಾಜಿ ಅಧ್ಯಕ್ಷ ಎಸ್‌ಪಿಕೆ ಉಮೇಶ್ ತಿಳಿಸಿದ್ದಾರೆ.



ನಗರದ ಜಿಲ್ಲಾ ವರನಟ ಡಾ.ರಾಜ್‌ಕುಮಾರ್ ರಂಗಮಂದಿರದಲ್ಲಿ ಚೇತನ ಕಲಾವಾಹಿನಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಶ್ರೀ ಮಹದೇಶ್ವರ ಕಲಾ ಸಂಘದ ಸಹಯೋಗದಲ್ಲಿ ರಂಗಭೂಮಿ ಕಲಾವಿದ ಉತ್ತುವಳ್ಳಿ ದಿವಂಗತ ರಾಮು ಅವರ ಸ್ಮರಣಾರ್ಥ ನಡೆದ ದಕ್ಷಯಜ್ಞ ನಾಟಕ ಹಾಗೂ ರಂಗಸಂಭ್ರಮ ಸಾಂಸ್ಕೃತಿಕ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಜಿಲ್ಲೆಯ ಜಾನಪದ ಕಲೆಗಳ ತವರೂರಾಗಿದ್ದು, ನಮ್ಮ ಪೌರಾಣಿಕ ನಾಟಕಗಳನ್ನು ಗ್ರಾಮೀಣ ಪ್ರದೇಶ ಹೆಚ್ಚಾಗಿ ಆಡುತ್ತಿದ್ದರು. ಈ ರಂಗಕಲೆಯು ಇಂದು ತಾಲೂಕಿನ ಕಲಾವಿದರು ಸೇರಿ ಪ್ರದರ್ಶಿಸುವ ಮೂಲಕ ರಂಗ ಕಲೆಗೆ ಜೀವ ತುಂಬುವ ಕೆಲಸವಾಗುತ್ತಿದೆ ಎಂದರು. ರಂಗಭೂಮಿ ಕಲಾವಿದರಾಗಿದ್ದ ದಿವಂಗತ ರಾಮು ಅವರ ಸ್ಮರಣಾರ್ಥ ದಕ್ಷಯಜ್ಞ ನಾಟಕ ಅಯೋಜನೆ ಮಾಡಿರುವುದು ತುಂಬಾ ಸಂತಸವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ರಂಗಭೂಮಿ ಕಲಾವಿದರ ಸಂಘದ ಅಧ್ಯಕ್ಷ ಘಟಂಕೃಷ್ಣ, ಚಾಮುಲ್ ನಿರ್ದೇಶಕ ಸದಾಶಿವಮೂರ್ತಿ, ಚೇತನ ಕಲಾ ವಾಹಿನಿ ಅಧ್ಯಕ್ಷ ಜಿ.ರಾಜಪ್ಪ, ನಾಟಕದ ನಿರ್ದೇಶಕ ಆರ್.ಶಿವಣ್ಣ, ಜನ್ನೂರು ರೇವಣ್ಣ, ಬಸವರಾಜು, ನಂಜಯ್ಯ, ರಮೇಶ್, ಕೋಟಂಬಳ್ಳಿ ವೀರಭದ್ರಸ್ವಾಮಿ, ಪುರುಷೋತ್ತಮ್, ತೊರಹಳ್ಳಿಸ್ವಾಮಿ ಮುತ್ತುರಾಮು, ರವಿ ಗುರುಸಿದ್ದಪ್ಪ, ಪಾಜಿಲ್, ಮಹದೇವಯ್ಯ, ಸಿದ್ದಮಲ್ಲಪ್ಪ, ಭಾಸ್ಕರ್, ಪಾಜಿಲ್ ಹಾಜರಿದ್ದರು.

ಸಿಇಓ ಗಾಯತ್ರಿ ವರ್ಗಾವಣೆ, ನೂತನ ಸಿಇಓ ಪೂವೀತಾ




ಚಾಮರಾಜನಗರ, ಜ.31– ಚಾಮರಾಜನಗರ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ. ಗಾಯತ್ರಿ ಅವರು ವರ್ಗಾವಣೆಯಾಗಿದ್ದು, ಅವರ ಸ್ಥಾನಕ್ಕೆ ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯ ಜಂಟಿ ನಿರ್ದೇಶಕರಾದ ಎಸ್. ಪೂವೀತಾ ಅವರನ್ನು ನೇಮಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಕೆ.ಎಂ. ಗಾಯತ್ರಿ ಅವರನ್ನು ಮೈಸೂರು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ನಿಯೋಜಿಸಲಾಗಿದೆ.

ಕರ್ತವ್ಯ ಲೋಪ: ಪಿಡಿಓ ಅಮಾನತು

ಚಾಮರಾಜನಗರ, ಜ.31– ಕರ್ತವ್ಯ ಲೋಪದ ಹಿನ್ನೆಲೆಯಲ್ಲಿ ಗುಂಡ್ಲುಪೇಟೆ ತಾಲೂಕಿನ ಬನ್ನಿತಾಳಪುರ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಎನ್. ಗೋವಿಂದಪ್ಪ ಅವರನ್ನು ಅಮಾನತು ಮಾಡಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ. ಗಾಯಿತ್ರಿ ಆದೇಶ ಹೊರಡಿಸಿದ್ದಾರೆ.

ಮೂಲ ಕುರಟ್ಟಿ ಹೊಸೂರಿನ ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಯಾಗಿದ್ದು ಬನ್ನಿತಾಳಪುರ ಗ್ರಾಮ ಪಂಚಾಯಿತಿಗೆ ನಿಯೋಜನೆಯಾಗಿದ್ದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಎನ್. ಗೋವಿಂದಪ್ಪ ಅವರು ಕರ್ತವ್ಯಕ್ಕೆ ಗೈರು ಹಾಜರಾಗುತ್ತಿದ್ದು, ಕಚೇರಿಯ ಕೆಲಸಗಳನ್ನು ನಿರ್ವಹಿಸದೇ ಇರುವ ಬಗ್ಗೆ ದೂರು ಬಂದಿತ್ತು. ಈ ಹಿನ್ನೆಲೆಯಲ್ಲಿ ನೋಟಿಸ್ ನೀಡಿದ್ದರೂ ಯಾವುದೇ ಸಮಜಾಯಿಷಿ ನೀಡಿರಲಿಲ್ಲ. ಕರ್ತವ್ಯ ಲೋಪ ಹಿನ್ನೆಲೆಯಲ್ಲಿ ಎನ್. ಗೋವಿಂದಪ್ಪ ಅವರನ್ನು ಅಮಾನತು ಮಾಡಿ ಆದೇಶ ಹೊರಡಿಸಲಾಗಿದೆ.



ತಮ್ಮ 36ನೇ ವರ್ಷದ ಹುಟ್ಟುಹಬ್ಬ ಆಚರಿಸಿಕೊಂಡ ಮೈಸೂರು–ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನ ಅಧ್ಯಕ್ಷರಾದ ಜಿ.ಡಿ. ಹರೀಶ್ ಗೌಡ ಅವರನ್ನು ಚಾಮರಾಜನಗರ ತಾಲೂಕು ಕೆರೆಹಳ್ಳಿ ಗ್ರಾಮದ ಪಿಎಸಿಸಿಎಸ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆರೆಹಳ್ಳಿ ರಾಜೇಂದ್ರ ಕುಮಾರ್ ಅವರು ಅಭಿನಂದಿಸಿದರು.



ಹುಟ್ಟುಹಬ್ಬ ಆಚರಿಸಿಕೊಂಡ ಹಿಂದುಳಿದ ವರ್ಗದ ಜಿಲ್ಲಾಧ್ಯಕ್ಷ ಡಿ.ಶ್ರೀನಿವಾಸ್ ಅವರಿಗೆ ಶುಭಾಶಯ ಕೋರಲಾಯಿತು. ಚಿತ್ರದಲ್ಲಿ ಜೆಡಿಎಸ್ ಮುಖಂಡರೂ ಆದ ಪಾಲಿಕೆ ಸದಸ್ಯ ಎಸ್‌ಬಿಎಂ ಮಂಜು, ರವಿ, ಶಿವು, ಮಂಜು, ಶ್ರೀನಿವಾಸ್ ಬಾಬು, ದೇವರಾಜ್, ಶಿವಣ್ಣ, ನಾಗೇಶ್ ಮೂರ್ತಿ, ಕೃಪಾನಂದ, ಸತೀಶ್, ಎಸ್‌ಬಿಎಂ ಭರತ್, ಕೃಷ್ಣಕುಮಾರ್, ಅರುಣ್ ಇನ್ನಿತರರು ಉಪಸ್ಥಿತರಿದ್ದರು.



ರಂಜಿತಾ ಚಿಕ್ಕಮಾದು ಬಳಗದ ವತಿಯಿಂದ ಹುಟ್ಟುಹಬ್ಬ ಆಚರಿಸಿಕೊಂಡ ಜಿ.ಡಿ.ಹರೀಶ್‌ಗೌಡ ಅವರಿಗೆ ಕರ್ಜೂರದ ಹಾರ ಹಾಕಿ ಅಭಿನಂದಿಸಿ, ಶುಭಾಶಯ ಕೋರಲಾಯಿತು.


ಫೆ.4, 5ರಂದು ವಿಜಯಪುರದಲ್ಲಿ 37ನೇ ರಾಜ್ಯ ಪತ್ರಕರ್ತರ ಸಮ್ಮೇಳನ

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ವಾರ್ಷಿಕ ಪ್ರಶಸ್ತಿ ಪುರಸ್ಕೃತರ ಅಭಿನಂದಿಸಿ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಮಾಹಿತಿ

ಮೈಸೂರು,ಜ.31(ಪಿಎಂ)– ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಮತ್ತು ವಿಜಯಪುರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಜಂಟಿ ಆಶ್ರಯದಲ್ಲಿ ಫೆ.4 ಮತ್ತು 5ರಂದು ವಿಜಯಪುರದ ಶ್ರೀ ಕಂದಗಲ್ ಹಣಮಂತರಾಯ ರಂಗ ಮಂದಿರದಲ್ಲಿ 37ನೇ ರಾಜ್ಯ ಪತ್ರಕರ್ತರ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ವಾರ್ಷಿಕ ಪ್ರಶಸ್ತಿ ಪುರಸ್ಕೃತ ಮೈಸೂರಿನ ಪತ್ರಕರ್ತರಿಗೆ ಸೋಮವಾರ ಹಮ್ಮಿಕೊಂಡಿದ್ದ ಸನ್ಮಾನ ಕಾರ್ಯ ಕ್ರಮದಲ್ಲಿ ಸನ್ಮಾನಿಸಿ ಅವರು ಮಾತನಾಡಿದರು.

ಉತ್ತರ ಕರ್ನಾಟಕದ ವಿಜಯಪುರದಲ್ಲಿ ಇದೇ ಪ್ರಥಮ ಬಾರಿಗೆ ರಾಜ್ಯ ಪತ್ರಕರ್ತರ ಸಮ್ಮೇಳನ ಆಯೋಜಿಸಲಾಗಿದೆ. ಇದರಲ್ಲಿ ಪಾಲ್ಗೊಳ್ಳಲು ರಾಜ್ಯಾದ್ಯಂತ 2,500 ಪತ್ರಕರ್ತರು ನೋಂದಾಯಿಸಿದ್ದಾರೆ. ಫೆ4ರಂದು ಬೆಳಗ್ಗೆ 10.30ಕ್ಕೆ ವಿಜಯಪುರ ಜ್ಞಾನಯೋಗಾಶ್ರಮದ ಬಸವಲಿಂಗ ಸ್ವಾಮೀಜಿ ಸಾನಿಧ್ಯದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಮ್ಮೇಳನ ಉದ್ಘಾಟಿಸಲಿದ್ದಾರೆ. ಸಚಿವ ಗೋವಿಂದ ಕಾರಜೋಳ 'ಸ್ಮರಣ ಸಂಚಿಕೆ' ಬಿಡುಗಡೆ ಮಾಡಲಿದ್ದು, ಸಚಿವ ಮುರುಗೇಶ ನಿರಾಣಿ ವ್ಯಂಗ್ಯಚಿತ್ರ ಪ್ರದರ್ಶನಕ್ಕೆ ಚಾಲನೆ ನೀಡಲಿದ್ದಾರೆ. ಸಚಿವ ಸಿ.ಸಿ.ಪಾಟೀಲ್ ಛಾಯಾಚಿತ್ರ ಪ್ರದರ್ಶನ ಉದ್ಘಾಟಿಸಲಿದ್ದು, ಹಲವು ಗಣ್ಯರು ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು.



ಫೆ.5ರ ಮಧ್ಯಾಹ್ನ 1.45ಕ್ಕೆ ಸಮಾರೋಪ ಸಮಾರಂಭ ಹಮ್ಮಿಕೊಂಡಿದ್ದು, ವಿಜಯಪುರ ಜ್ಞಾನಯೋಗಾಶ್ರಮದ ಬಸವಲಿಂಗ ಸ್ವಾಮೀಜಿ ಸಾನಿಧ್ಯ ವಹಿಸಲಿದ್ದಾರೆ. ಸಚಿವ ಜೆ.ಸಿ.ಮಾಧುಸ್ವಾಮಿ ಸಮಾರೋಪ ಭಾಷಣ ಮಾಡಲಿದ್ದು, ಇದೇ ವೇಳೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ವಿವಿಧ ಪ್ರಶಸ್ತಿಗಳನ್ನು ಪ್ರದಾನ ಮಾಡಲಿದ್ದಾರೆ ಎಂದು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್ ಮಾತನಾಡಿ, ಸಮ್ಮೇಳದಲ್ಲಿ ಭಾಗವಹಿಸಲು ಮೈಸೂರು ಜಿಲ್ಲೆಯಿಂದ 87 ಮಂದಿ ತೆರಳುತ್ತಿದ್ದೇವೆ. ರಾಜ್ಯ ಸಂಘವು ಎಲ್ಲಾ ಜಿಲ್ಲಾ ಸಂಘಗಳನ್ನು ಒಗ್ಗೂಡಿಸಿ ಮುನ್ನಡೆಸುತ್ತಿದೆ. ಮೈಸೂರು ಸಂಘಕ್ಕೆ ಮುಡಾದಿಂದ ಸಿಎ ನಿವೇಶನ ಮಂಜೂರಾಗಿದೆ. ಸದರಿ ನಿವೇಶನದಲ್ಲಿ ಸಂಘದ ಸುಸಜ್ಜಿತ ಭವನ ನಿರ್ಮಿಸಲು ಸರ್ಕಾರದಿಂದ ಅನುದಾನ ಕಲ್ಪಿಸಿಕೊಡುವಂತೆ ರಾಜ್ಯಾಧ್ಯಕ್ಷರಲ್ಲಿ ಮನವಿ ಮಾಡಿದರು.

ಹುಣಸೂರು ತಾಲೂಕಿನ ಗಾವಡಗೆರೆ ಮಠದಲ್ಲಿ ಶೀಘ್ರದಲ್ಲಿ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಜಿಲ್ಲಾ ಸಮ್ಮೇಳನ ಆಯೋಜಿಸಲಾಗುವುದು ಎಂದು ತಿಳಿಸಿದರು. ಇದೇ ವೇಳೆ ಪ್ರಶಸ್ತಿ ಪುರಸ್ಕೃತ ಪತ್ರಕರ್ತರಾದ ಕೂಡ್ಲಿ ಗುರುರಾಜ್, ಎಲ್.ಎಸ್.ಶ್ರೀಕಾಂತ್, ಅವಿನಾಶ್ ಜೈನಹಳ್ಳಿ, ಎಸ್.ಎಸ್.ಸಚ್ಚಿತ್, ಮಹಿ ಮಹೇಶ್ (ವಿಶೇಷ ಪ್ರಶಸ್ತಿ) ಹಾಗೂ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಛಾಯಾಗ್ರಾಹಕ ಲಕ್ಷ್ಮೀನಾರಾಯಣ ಯಾದವ್ ಅವರನ್ನು ಸನ್ಮಾನಿಸಲಾಯಿತು.

ಇತ್ತೀಚೆಗೆ ನಿಧನ ಹೊಂದಿದ ತಿ. ನರಸೀಪುರದ ಪತ್ರಕರ್ತ ಮಂಜುನಾಥ್ ಕುಟುಂಬಕ್ಕೆ ಸರ್ಕಾರದಿಂದ 5 ಲಕ್ಷ ರೂ. ಪರಿಹಾರ ದೊರೆಕಿಸಿಕೊಟ್ಟ ಹಿನ್ನೆಲೆಯಲ್ಲಿ ರಾಜ್ಯ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಅವರಿಗೆ ಮಂಜುನಾಥ್ ಅವರ ಪತ್ನಿ ಪಾರ್ವತಿ ಇದೇ ವೇಳೆ ಕೃತಜ್ಞತೆ ಸಲ್ಲಿಸಿದರು. ರಾಜ್ಯ ಸಂಘದ ಉಪಾಧ್ಯಕ್ಷ ಅಜ್ಜಮಾಡ ರಮೇಶ್ ಕುಟ್ಟಪ್ಪ, ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಬಿ.ರಾಘವೇಂದ್ರ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಹ್ಮಣ್ಯ, ನಗರ ಉಪಾಧ್ಯಕ್ಷ ಎಂ.ಎಸ್.ಬಸವಣ್ಣ, ಗ್ರಾಮಾಂತರ ಉಪಾಧ್ಯಕ್ಷ ಧರ್ಮಾಪುರ ನಾರಾಯಣ್ ಮತ್ತಿತರರು ಹಾಜರಿದ್ದರು.

ಕಾಯಕ ಸಮಾಜಗಳ ಮೀಸಲಾತಿ ಪ್ರಮಾಣವನ್ನು

ಶೇ.27ಕ್ಕೆ ಹೆಚ್ಚಿಸಲು ಮುಖ್ಯಮಂತ್ರಿಗಳಿಗೆ ಒತ್ತಾಯ

ಮೈಸೂರು, ಜ.31(ಪಿಎಂ)– ಕರ್ನಾಟಕ ರಾಜ್ಯ ಕಾಯಕ ಸಮಾಜಗಳ ಒಕ್ಕೂಟದ ರಾಜ್ಯ ಪ್ರತಿನಿಧಿಗಳ ಮಹಾ ಅಧಿವೇಶನದಲ್ಲಿ 9 ನಿರ್ಣಯಗಳನ್ನು ಕೈಗೊಂಡಿದ್ದು, ಈ ಪೈಕಿ ಕಾಯಕ ಸಮಾಜಗಳಿಗೆ (ಪ್ರವರ್ಗ–2ಎ) ಶೇ.15ರಷ್ಟಿರುವ ಮೀಸಲಾತಿ ಪ್ರಮಾಣವನ್ನು ಶೇ.27ಕ್ಕೆ ಹೆಚ್ಚಿಸಬೇಕು ಮತ್ತು ಕಾಯಕ ಸಮಾಜಗಳ ಅಭಿವೃದ್ಧಿ ಪ್ರಾಧಿಕಾರ ರಚಿಸಿ ಸಾವಿರ ಕೋಟಿ ಅನುದಾನ ಕಲ್ಪಿಸಬೇಕೆಂಬ ಬೇಡಿಕೆಗಳನ್ನು ಆದ್ಯತೆ ಮೇರೆಗೆ ತುರ್ತಾಗಿ ಈಡೇರಿಸಲು ಮುಖ್ಯಮಂತ್ರಿಗಳು ಕ್ರಮ ವಹಿಸಬೇಕೆಂದು ಒಕ್ಕೂಟದ ರಾಜ್ಯಾಧ್ಯಕ್ಷ ಕೆ.ಸಿ.ಪುಟ್ಟಸಿದ್ದಶೆಟ್ಟಿ ಒತ್ತಾಯಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಶೇ.27ಕ್ಕೆ ಮೀಸಲಾತಿ ಹೆಚ್ಚಿಸಿ, ಜನಸಂಖ್ಯೆಗೆ ಅನುಗುಣವಾಗಿ ಒಳ ಮೀಸಲಾತಿ ಕಲ್ಪಿಸಬೇಕು. 2022–23ನೇ ಸಾಲಿನ ರಾಜ್ಯ ಸರ್ಕಾರದ ಬಜೆಟ್‌ನಲ್ಲಿ ಕಾಯಕ ಸಮಾಜಗಳ ಶ್ರೇಯೋಭಿವೃದ್ಧಿಗೆ 400 ಕೋಟಿ ರೂ. ಕಲ್ಪಿಸಿ, ಅದರಲ್ಲಿ ಹಿಂದುಳಿದ ವರ್ಗಗಳ ಮಠಗಳಿಗೆ 127 ಕೋಟಿ ಅನುದಾನ ನೀಡಲಾಗಿದೆ. ಇದಕ್ಕಾಗಿ ಒಕ್ಕೂಟವು ಸರ್ಕಾರಕ್ಕೆ ಕೃತಜ್ಞತೆ ಸಲ್ಲಿಸಲಿದೆ. ಇದರ ಜೊತೆಗೆ ಉಳಿದ ಅನುದಾನವನ್ನು ಕಾಯಕ ಸಮಾಜಗಳ ಸಮುದಾಯ ಭವನಗಳ ನಿರ್ಮಾಣಕ್ಕೆ ಮಾ.31ರೊಳಗೆ



ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದರು.

ಪ್ರತಿ ವಿಧಾನಸಭಾ ಕ್ಷೇತ್ರಗಳಲ್ಲಿ 60ರಿಂದ 70 ಸಾವಿರ ಮತದಾರರನ್ನು ಕಾಯಕ ಸಮಾಜಗಳು ಹೊಂದಿವೆ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ನಮ್ಮ ಸಮಾಜಗಳಿಗೆ ಎಲ್ಲಾ ಪಕ್ಷಗಳು ರಾಜಕೀಯ ಪ್ರಾತಿನಿಧ್ಯ ನೀಡಬೇಕು. ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯನವರು ಮಡಿವಾಳ ಸಮಾಜಕ್ಕೆ ಈ ಚುನಾವಣೆಯಲ್ಲಿ ಕ್ಷೇತ್ರವೊಂದರಲ್ಲಿ ಸ್ಪರ್ಧಿಸಲು ಅವಕಾಶ ಕಲ್ಪಿಸುವುದಾಗಿ ಘೋಷಣೆ ಮಾಡಿದ್ದಾರೆ. ಅದೇ ರೀತಿಯಲ್ಲಿ ಇನ್ನು ಕೆಲ ಕಾಯಕ ಸಮಾಜಗಳ ಮುಖಂಡರಿಗೆ ಸ್ಪರ್ಧಿಸಲು ಅವಕಾಶ ಕಲ್ಪಿಸಬೇಕೆಂದು ಸಿದ್ದರಾಮಯ್ಯರನ್ನು ಒತ್ತಾಯಿಸಿದರು.

ಒಕ್ಕೂಟದ ರಾಜ್ಯ ಪ್ರಧಾನ ಕಾರ್ಯದರ್ಶಿ ಬೋರಪ್ಪಶೆಟ್ಟಿ, ಉಪಾಧ್ಯಕ್ಷ ನಾಗೇಶ್, ಜಿಲ್ಲಾ ಉಪಾಧ್ಯಕ್ಷ ಕೆಂಪಶೆಟ್ಟಿ ಗೋಷ್ಠಿಯಲ್ಲಿದ್ದರು.

ನಾಳೆಯಿಂದ ಕದಂಬ ರಾಜ್ಯ ಮಟ್ಟದ ಏಕವ್ಯಕ್ತಿ ಮಹಿಳಾ ನಾಟಕೋತ್ಸವ



ಮೈಸೂರು,ಜ.31(ಪಿಎಂ)–ಮೈಸೂರಿನ ಹವ್ಯಾಸಿ ರಂಗತಂಡ ಕದಂಬ ರಂಗವೇದಿಕೆ ವತಿಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಫೆ.2ರಿಂದ 4ರವರೆಗೆ ಕದಂಬ ರಾಜ್ಯ ಮಟ್ಟದ ಏಕವ್ಯಕ್ತಿ ಮಹಿಳಾ ನಾಟಕೋತ್ಸವ ಆಯೋಜಿಸಲಾಗಿದೆ ಎಂದು ರಂಗವೇದಿಕೆ ಅಧ್ಯಕ್ಷ ರಾಜಶೇಖರ ಕದಂಬ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯಮಟ್ಟದಲ್ಲಿ ಏಕವ್ಯಕ್ತಿ ಮಹಿಳಾ ನಾಟಕ ಪ್ರದರ್ಶನವು ಮೈಸೂರಿನಲ್ಲಿ ಉತ್ಸವದ ರೀತಿಯಲ್ಲಿ ನಡೆಯುತ್ತಿರುವುದು ಬಹುಶಃ ಇದೇ ಮೊದಲು. ಕಲಾಮಂದಿರ ಆವರಣದ ಕಿರುರಂಗ ಮಂದಿರದಲ್ಲಿ ಸಂಜೆ 7ಕ್ಕೆ ನಾಟಕಗಳ ಪ್ರದರ್ಶನ ನಡೆಯಲಿದ್ದು, ಸಾರ್ವಜನಿಕರಿಗೆ ಉಚಿತ ಪ್ರವೇಶವಿದೆ ಎಂದರು.

ಫೆ.2ರಂದು ಸಂಜೆ 6.30ಕ್ಕೆ ಗುಬ್ಬಿವೀರಣ್ಣ ಅವರ ಮೊಮ್ಮಗಳಾದ ಹಿರಿಯ ರಂಗನಟಿ ಸುಂದರಶ್ರೀ ನಾಟಕೋತ್ಸವಕ್ಕೆ ಚಾಲನೆ ನೀಡಲಿದ್ದಾರೆ. ಅತಿಥಿಗಳಾಗಿ ಹಿರಿಯ ರಂಗನಟಿ ರಾಮೇಶ್ವರಿ ವರ್ಮ, ರಂಗಾಯಣದ ಉಪನಿರ್ದೇಶಕಿ ನಿರ್ಮಲಾ ಮಠಪತಿ ಪಾಲ್ಗೊಳ್ಳಲಿದ್ದಾರೆ. ಬಳಿಕ ಹೆಚ್.ಎಸ್.ದ್ಯಾವೇಶ್ ರಚನೆಯ 'ವಸುಂಧರೆ' ನಾಟಕವು ಸಾಣೇಹಳ್ಳಿಯ ಗ್ರಾಮರಂಗ ಸಾಂಸ್ಕೃತಿಕ ಟ್ರಸ್ಟ್‌ನಿಂದ ಪ್ರದರ್ಶನಗೊಳ್ಳಲಿದೆ. ವೈ.ಡಿ.ಬಾದಾಮಿಯವರ ನಿರ್ದೇಶನದಲ್ಲಿ ಮಂಜುಳಾ ಬಾದಾಮಿ ಅಭಿನಯಿಸಲಿದ್ದಾರೆ ಎಂದು ತಿಳಿಸಿದರು.

ಇಡೀ ಸೌರಮಂಡಲದಲ್ಲಿ ಜೀವಿಗಳಿರುವ ಏಕೈಕ ತಾಣ ಭೂಮಿ. ಹೀಗಾಗಿ ನಮ್ಮ ಹಿರಿಯರು ಭೂಮಿಯನ್ನು ಒಂದು ನಿರ್ಜೀವ ವಸ್ತುವಾಗಿ ನೋಡದೆ ವಸುಂಧರೆ, ಧರೆ, ಇಳೆ, ಪೃಥ್ವಿ, ಪೊಡವಿ, ರಸೆ, ಕ್ಷಮಾಧರಿತ್ರಿ, ಜೀವದಾಯಿ, ತಿರೆ, ಧಾತ್ರಿ, ಧರಣಿ, ಧಾರಿಣಿ ಎಂದೆಲ್ಲಾ ಗೌರವಿಸಿದ್ದಾರೆ ಎಂಬ ಸಂದೇಶದೊಂದಿಗೆ ಭೂಮಿಯ ಮಹತ್ವವನ್ನು ಈ ನಾಟಕ ತಿಳಿಸಿಕೊಡಲಿದೆ ಎಂದು ವಿವರಿಸಿದರು.

ಫೆ.3ರಂದು ಗಜಾನನ ಶರ್ಮ ಅವರ ರಾಣಿ ಚೆನ್ನಭೈರವಿ ಕಾದಂಬರಿಯ ಆಯ್ದ ಭಾಗವಾದ 'ಅವ್ವರಸಿ' ನಾಟಕವನ್ನು ಬೆಂಗಳೂರಿನ ಸೆಂಟರ್ ಫಾರ್ ಡಿವೈನ್ ಆರ್ಟ್ಸ್ ವತಿಯಿಂದ ಡಾ.ಲೀಲಾ ಬಸವರಾಜು ಅಭಿನಯಿಸಲಿದ್ದಾರೆ. ಪೋರ್ಚುಗೀಸರ ವಿರುದ್ಧ ಹೋರಾಡಿದ ವೀರ ರಾಣಿ ಚೆನ್ನಬೈರಾದೇವಿಯ ಜೀವನ ಕಥಾನಕವೇ 'ಅವ್ವರಸಿ' ನಾಟಕ. ಮಲೆನಾಡನ್ನು 54 ವರ್ಷಗಳು ಆಳಿದ ಚೆನ್ನಬೈರಾದೇವಿಯ ರಾಜನೀತಿ, ಜೀವನವಿಧಾನ, ಧೀಮಂತಿಕೆ ತೆರೆದಿಡುವ ನಾಟಕ ಇದಾಗಿದೆ ಎಂದು ತಿಳಿಸಿದರು.

ಫೆ.4ರಂದು ಅನಘನರಸಿಂಹ ರಚನೆಯ 'ರಂಗನಾಯಕಿ' ನಾಟಕ ಪ್ರದರ್ಶನಗೊಳ್ಳಲಿದ್ದು, ಬೆಂಗಳೂರಿನ ಕ್ಲೌನ್ಸ್ ರಿವರಿ ವತಿಯಿಂದ ಅಪೂರ್ವ ನಾಗರಾಜ್ ಈ ನಾಟಕದಲ್ಲಿ ಅಭಿನಯಿಸಲಿದ್ದಾರೆ. ನಾಟಕಕ್ಕೆ ಅವರದೇ ನಿರ್ದೇಶನವಿದೆ. ಈ ನಾಟಕದಲ್ಲಿ ಒಬ್ಬ ವೃದ್ಧೆ ತನ್ನ ಯೌವನದಲ್ಲಿ ನಟಿಯಾಗಿ ರಂಗದ ಮೇಲೆ ಕಳೆದ ದಿನಗಳನ್ನು ಮೆಲುಕು ಹಾಕುವ ಮೂಲಕ ಸಮಾಜ ಕಂಡ ಸಾಂಸ್ಕೃತಿಕ ಬದಲಾವಣೆಗಳನ್ನು ಅವಲೋಕಿಸುವ ಕಥಾಸಾರಂಶ ಒಳಗೊಂಡಿದೆ ಎಂದರು. ಹಿರಿಯ ರಂಗನಟಿ ಇಂದಿರಾ ನಾಯರ್, ವೇದಿಕೆ ಉಪಾಧ್ಯಕ್ಷ ಯು.ಎಸ್.ರಾಮಣ್ಣ, ಕಾರ್ಯದರ್ಶಿ ಸುಬ್ಬನರಸಿಂಹ, ರಂಗ ಕಲಾವಿದ ಅಶ್ವಥ ಕದಂಬ ಗೋಷ್ಠಿಯಲ್ಲಿದ್ದರು.

ಮೈಸೂರಲ್ಲಿ ಮಧ್ವನವಮಿ ಕಾರ್ಯಕ್ರಮ

ನಾವು ಮಾಡುವ ಪ್ರತಿ ಕಾರ್ಯದಲ್ಲೂ ಧರ್ಮಪಾಲನೆಯಾಗಬೇಕು: ರಾಮದಾಸ್



ಮೈಸೂರು,ಜ.31(ಎಂಟಿವೈ)– ಆಚಾರ್ಯತ್ರಯರ ಸಂದೇಶವನ್ನು ಎಲ್ಲರೂ ಜೀವನದಲ್ಲಿ ಅಳವಡಿಸಿಕೊಳ್ಳುವುದರೊಂದಿಗೆ ತಾವು ಮಾಡುವ ಕೆಲಸದಲ್ಲಿ ಧರ್ಮವನ್ನು ಕಾಣಬೇಕು ಎಂದು ಶಾಸಕ ಎಸ್.ಎ. ರಾಮದಾಸ್ ಸಲಹೆ ನೀಡಿದ್ದಾರೆ.

ಮೈಸೂರಿನ ಕುವೆಂಪು ನಗರದ ಸಾಮ್ರಾಟ್ ಭವನದಲ್ಲಿ ನಡೆದ ಮಧ್ವನವಮಿ ಕಾರ್ಯಕ್ರಮದಲ್ಲಿ ಮಧ್ವಾಚಾರ್ಯ, ಶಂಕರಾಚಾರ್ಯ ಹಾಗೂ ರಾಮಾನುಜ ಚಾರ್ಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಆಚಾರ್ಯತ್ರಯರು ದ್ವೈತ, ಅದ್ವೈತ ಹಾಗೂ ವಿಶಿಷ್ಟಾದ್ವೈತದ ಮೂಲಕ ವಿಶ್ವಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಇದರಿಂದಾಗಿ ಮಧ್ವಾಚಾರ್ಯರು, ಶಂಕರಾಚಾರ್ಯರ ವಿಚಾರಗಳ ತಿಳಿದುಕೊಳ್ಳಲು ಹೆಚ್ಚು ಗಮನ ಹರಿಸಬೇಕು. ಆ ಮೂಲಕ ಜೀವನದಲ್ಲಿ ಆಚಾರ್ಯತ್ರಯರ ಸಂದೇಶಗಳನ್ನು ಅಳವಡಿಸಿಕೊಂಡು ಧರ್ಮದ ಮಾರ್ಗದಲ್ಲಿ ಸಾಗಬೇಕು. ತಾವು ಮಾಡುವ ಎಲ್ಲಾ ಕೆಲಸಗಳಲ್ಲೂ ಧರ್ಮದ ಮಾರ್ಗ ಕಂಡುಕೊಳ್ಳಬೇಕು ಎಂದು ಸಲಹೆ ನೀಡಿದರು.

ಪ್ರಸ್ತುತ ಸಂದರ್ಭದಲ್ಲಿ ಸಮಾಜದ ಕಟ್ಟಕಡೆಯ ವ್ಯಕ್ತಿಯೂ ಧಾರ್ಮಿಕ ಬದುಕನ್ನು ನಡೆಸುವುದರ ಜೊತೆಗೆ ತನ್ನ ಕರ್ತವ್ಯದಲ್ಲಿ ಧರ್ಮವನ್ನು ಕಾಣಬೇಕು. ಎಲ್ಲರೂ ಮಾಡುವ ಕಾಯಕ ಹಾಗೂ ಜೀವನದಲ್ಲಿ ಧರ್ಮಯುತವಾದ ಅಂಶ ಇರಬೇಕೆಂಬ ವಿಚಾರಧಾರೆಯನ್ನು ಮಧ್ವಾಚಾರ್ಯರು ತಿಳಿಸಿದ್ದರು. ಈ ವಿಚಾರಧಾರೆ ಎಂದೆಂದಿಗೂ ಪ್ರಸ್ತುತ ಎನಿಸಿದೆ. ಹಾಗಾಗಿ ವಿವಿಧ ಸಂಘ–ಸಂಸ್ಥೆಗಳು ಮಧ್ವಾಚಾರ್ಯರ ವಿಚಾರವನ್ನು ಸಮಾಜಕ್ಕೆ ಅರ್ಪಿಸುವ ಕೆಲಸ ನಡೆಸುತ್ತಿರುವುದು ಶ್ಲಾಘನೀಯ ಎಂದರು. ಈ ಸಂದರ್ಭದಲ್ಲಿ ಡಾ.ಲಕ್ಷ್ಮೀನಾರಾಯಣ ಶೆಣೈ, ಡಾ.ಪುಷ್ಪ, ಡಾ.ರಾಜೇಶ್ವರಿ, ಎಂ.ಆರ್.ಬಾಲಕೃಷ್ಣ, ಶ್ರೀನಿವಾಸ್, ದೇವರಾಜೇಗೌಡ, ಡಿಪೋ ರವಿ, ರವಿ, ಪ್ರದೀಪ್ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.



ಮೈಸೂರಿನ ಕುಂಬಾರಕೊಪ್ಪಲು ಕಾಲೋನಿಯ 105 ಕುಟುಂಬಗಳಿಗೆ ಕೊಳಚೆ ನಿರ್ಮೂಲನಾ ಮಂಡಳಿ ವತಿಯಿಂದ ಶಾಸಕ ಎಲ್.ನಾಗೇಂದ್ರ ಹಕ್ಕುಪತ್ರ ವಿತರಿಸಿದರು. ಈ ಸಂದರ್ಭದಲ್ಲಿ ಪಾಲಿಕೆ ಸದಸ್ಯರಾದ ಶ್ರೀಮತಿ ಉಷಾ, ಶ್ರೀಮತಿ ವೇದಾವತಿ, ಚಿಕ್ಕವೆಂಕಟು, ನಗರ ಮಹಿಳಾ ಮೋರ್ಚಾ ಅಧ್ಯಕ್ಷೆ ಹೇಮಾ ನಂದೀಶ್, ಅಧಿಕಾರಿಗಳಾದ ರಾಮಚಂದ್ರು, ರಾಯ್, ವಾರ್ಡ್ ಬಿಜೆಪಿ ಅಧ್ಯಕ್ಷ ನರಸಿಂಹ ಮುಖಂಡರಾದ ಆರ್ಟ್ಸ್ ರಾಮು, ಪುನೀತ್, ಅಶ್ವಥ್, ದಿನೇಶ್‌ಗೌಡ, ಪ್ರವೀಣ್, ಸರ್ವೇಶ್, ಗಣೇಶ್, ಪ್ರಮೋದ್, ಮಾದೇಗೌಡ, ದೀಪಕ್, ನಾಗ, ಗಿರೀಶ್, ಅಶೋಕ್ ಇನ್ನಿತರರಿದ್ದಾರೆ.

ಒಂದನೇ ಪುಟದಿಂದ

ಕಾನೂನು ಸರಳೀಕರಣ

ಬಹಳಷ್ಟು ಆಗುತ್ತವೆ. ಅದಕ್ಕೆ ಹಣ ಮೀಸಲಿಡಬೇಕು. ಆರು ವರ್ಷಗಳ ಹಿಂದೆ 15 ಲಕ್ಷ ಮನೆ ಕಟ್ಟುವುದಾಗಿ ಘೋಷಣೆಯಾಯಿತು. ಹಿಂದಿನ ಸರ್ಕಾರ ಚುನಾವಣೆ ಸಂದರ್ಭದಲ್ಲಿ 15 ಲಕ್ಷ ಮನೆ ನೀಡುವ ಘೋಷಣೆ ಮಾಡಿದರು. ಅದಕ್ಕೆ ಹಣ ಮೀಸಲಿಡದೇ ಹೋದರು. 15 ಸಾವಿರ ಕೋಟಿ ರೂ. ಅಗತ್ಯವಿದ್ದರೆ, 3 ಸಾವಿರ ಕೋಟಿ ಮೀಸಲಿಟ್ಟರು. ಅಗತ್ಯವಿರುವಷ್ಟು ಮನೆಗಳನ್ನು ಕಟ್ಟಲು ಸಾಧ್ಯವಾಗಲಿಲ್ಲ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಅಗತ್ಯ ಅನುದಾನ ಒದಗಿಸಿ ಸುಮಾರು 10 ಲಕ್ಷ ಮನೆಗಳನ್ನು ಕಟ್ಟುವ ಗುರಿ ಹೊಂದಿ ಇಂದು 5 ಲಕ್ಷ ಮನೆಗಳನ್ನು ಪೂರ್ಣಗೊಳಿಸುವ ಕೊನೆಯ ಹಂತದಲ್ಲಿ ಇದ್ದೇವೆ ಎಂದು ತಿಳಿಸಿದರು. ನಾವು ಜನರಿಗೆ ಏನು ಮಾಡಲು ಸಾಧ್ಯವಿದೆ ಎಂಬ ಸತ್ಯವನ್ನು ಹೇಳಬೇಕು. ಜನರನ್ನು ಭ್ರಮಾಲೋಕದಲ್ಲಿಡುವ ಪ್ರಯತ್ನ ಈಗಲೂ ನಡೆಯುತ್ತಿದೆ. ಆದರೆ, ಜನಪ್ರತಿನಿಧಿಗಳು ಜನರು ಬುದ್ಧಿವಂತರಿದ್ದಾರೆ, ಜಾಗೃತರಾಗಿದ್ದಾರೆ ಎಂದು ಅರ್ಥ ಮಾಡಿಕೊಳ್ಳಬೇಕು.

ಸುಳ್ಳು ಭರವಸೆ ಕೊಟ್ಟು ಜನರನ್ನು ದಾರಿತಪ್ಪಿಸುವ ಕೆಲಸ ಮಾಡಬಾರದು. ಎಲ್ಲಾ ಸಮಯದಲ್ಲಿ ಎಲ್ಲರನ್ನೂ ಮೋಸ ಮಾಡಲು ಸಾಧ್ಯವಿಲ್ಲ ಎಂದು ಅರ್ಥಮಾಡಿಕೊಳ್ಳಬೇಕು. ಎಲ್ಲಾ ಉಚಿತವಾಗಿ ನೀಡುತ್ತೇವೆ ಎಂದರೆ ಯಾರೂ ನಂಬುವುದಿಲ್ಲ. ಜನರ ತೆರಿಗೆಯ ಮೂಲಕ ಬರುವ ಹಣವನ್ನು ಎಲ್ಲಿ ಉಪಯೋಗಿಸಬೇಕು, ದೀನದಲಿತರಿಗೆ ವಿಶೇಷವಾಗಿರುವ ಕಾರ್ಯಕ್ರಮ ರೂಪಿಸಬೇಕು. ಜನಪ್ರಿಯತೆಗಾಗಿ, ಅಧಿಕಾರಕ್ಕೆ ಬರಬೇಕೆಂದು ಹತಾಶರಾಗಿ ಇಡೀ ವ್ಯವಸ್ಥೆಯನ್ನು ನಾವು ಕೆಡಿಸುವ ಲೆಕ್ಕದಲ್ಲಿ ಜವಾಬ್ದಾರಿ ಇದ್ದವರು ಮಾತನಾಡಬಾರದು. ಜನರು ಎಲ್ಲವನ್ನೂ ಅರ್ಥಮಾಡಿಕೊಳ್ಳುತ್ತಾರೆ ಎಂದರು. ಸೋಮಣ್ಣ ಅವರು ವಸತಿ ಸಚಿವರಾದ ನಂತರ ಗೃಹ ನಿರ್ಮಾಣಕ್ಕೆ ಒಂದು ರೂಪುರೇಷೆ ನೀಡಿ, ಬಾಕಿ ಇರುವ ಮನೆಗಳ ನಿರ್ಮಾಣವಾಗಬೇಕು. ಆಯ್ಕೆಯಾಗಿದ್ದ ಅನರ್ಹರನ್ನು ತೆಗೆಯಲು ವಿಶೇಷ ಸಾಫ್ಟ್‌ವೇರ್ ಅಳವಡಿಸಿದ್ದರು. ಗ್ರಾಮೀಣ ಪ್ರದೇಶದ ಮನೆಗಳ ನಿರ್ಮಾಣ ಕೈಗೊಂಡು ಈ ವರ್ಷ 5 ಲಕ್ಷ ಮನೆಗಳ ನಿರ್ಮಾಣ ಮಾಡಿ ಅಂತಿಮ ಹಂತಕ್ಕೆ ತಂದಿದ್ದಾರೆ ಎಂದು ಹೇಳಿದರು.

ಆತ್ಮವಿಶ್ವಾಸ ಹೆಚ್ಚಾಗಿದೆ

ಸುಮಾರು ಒಂಬತ್ತು ವರ್ಷಗಳ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಆಡಳಿತದಲ್ಲಿ, ದೇಶವು ಅನೇಕ ಸಕಾರಾತ್ಮಕ ಬದಲಾವಣೆಗಳನ್ನು ಕಂಡಿದೆ. ದೊಡ್ಡ ಬದಲಾವಣೆ ಎಂದರೆ ಪ್ರತಿಯೊಬ್ಬ ಭಾರತೀಯನ ಆತ್ಮ ವಿಶ್ವಾಸವು ಉತ್ತುಂಗದಲ್ಲಿದೆ. ಇಂದು ಜಗತ್ತು ಬದಲಾಗಿದೆ ಮತ್ತು ಜಗತ್ತು ಭಾರತವನ್ನು ನೋಡುವ ರೀತಿ ಕೂಡ ಬದಲಾಗಿದೆ ಎಂದರು. ಭಾರತವು ಹಿಂದೆ ತನ್ನ ಸಮಸ್ಯೆಗಳನ್ನು ಪರಿಹರಿಸಲು ಇತರರನ್ನು ಅವಲಂಬಿಸಿದ್ದರೆ, ಇಂದು ಜಾಗತಿಕ ಸಮಸ್ಯೆಗಳನ್ನು ಪರಿಹರಿಸಲು ಕೆಲಸ ಮಾಡುತ್ತಿದೆ. ದಶಕಗಳಿಂದ ಕಾಣೆಯಾಗಿದ್ದ ಮೂಲ ಸೌಕರ್ಯಗಳನ್ನು ಜನರಿಗೆ ನೀಡಲಾಗಿದೆ ಮತ್ತು ಸಮಾಜದ ಬಹುಕಾಲದ ಆಶಯವಾದ ಆಧುನಿಕ ಮೂಲಸೌಕರ್ಯಗಳನ್ನು ದೇಶದಾದ್ಯಂತ ನಿರ್ಮಿಸಲಾಗುತ್ತಿದೆ ಎಂದರು.

ಮೋದಿ ಸರ್ಕಾರದ ಅವಧಿಯಲ್ಲಿ ಡಿಜಿಟಲ್ ನೆಟ್‌ವರ್ಕ್ ವಿಸ್ತರಣೆ ಮತ್ತು ಭ್ರಷ್ಟಾಚಾರದ ವಿರುದ್ಧದ ಶಿಸ್ತುಕ್ರಮವನ್ನು ಅವರು ಇಂದು ಭಾಷಣದಲ್ಲಿ ವಿಶೇಷವಾಗಿ ಉಲ್ಲೇಖಿಸಿದರು. ಭಾರತವು ಈಗ ಸ್ಥಿರ, ನಿರ್ಭೀತ ಮತ್ತು ನಿರ್ಣಾಯಕ ಮತ್ತು ದೊಡ್ಡ ಕನಸುಗಳನ್ನು ನನಸಾಗಿಸಲು ಕೆಲಸ ಮಾಡುವ ಸರ್ಕಾರವನ್ನು ಹೊಂದಿದೆ. ಇದು ಪ್ರಾಮಾಣಿಕತೆಯನ್ನು ಗೌರವಿಸುವ ಮತ್ತು ಬಡವರ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಅವರನ್ನು ಶಾಶ್ವತವಾಗಿ ಸಬಲೀಕರಣಗೊಳಿಸಲು ಕೆಲಸ ಮಾಡುವ ಸರ್ಕಾರವನ್ನು ಹೊಂದಿದೆ ಎಂದು ಶ್ಲಾಘಿಸಿದರು. ಸಂಸತ್ತಿನ ಬಜೆಟ್ ಅಧಿವೇಶನವು ಏಪ್ರಿಲ್ 6 ರವರೆಗೆ 27 ಅಧಿವೇಶನಗಳಲ್ಲಿ ನಡೆಯಲಿದ್ದು, ಬಜೆಟ್ ಪೇಪರ್‌ಗಳನ್ನು ಪರಿಶೀಲಿಸಲು ಒಂದು ತಿಂಗಳ ವಿರಾಮವಿದೆ. ಅಧಿವೇಶನದ ಮೊದಲ ಭಾಗವು ಫೆಬ್ರವರಿ 13 ರಂದು ಮುಕ್ತಾಯಗೊಳ್ಳಲಿದೆ. ಬಜೆಟ್ ಅಧಿವೇಶನದ ಎರಡನೇ ಹಂತ ಮಾರ್ಚ್ 12 ರಂದು ಮತ್ತೆ ಸೇರಲಿದ್ದು, ಏಪ್ರಿಲ್ 6 ರಂದು ಮುಕ್ತಾಯಗೊಳ್ಳಲಿದೆ.

ಶಾಂತಿ ಭೂಷಣ್ ಇನ್ನಿಲ್ಲ

ರಫೇಲ್ ಯುದ್ಧವಿಮಾನ ಖರೀದಿಗೆ ಸಂಬಂಧಿಸಿದಂತೆ ಕೋರ್ಟ್‌ನ ಮೇಲ್ವಿಚಾರಣೆಯಲ್ಲಿ ವಿಚಾರಣೆ ನಡೆದಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಪರವಾಗಿಯೂ ವಾದ ಮಂಡಿಸಿದ್ದರು. ಚುನಾವಣಾ ಅಕ್ರಮ ಆರೋಪಕ್ಕೆ ಸಂಬಂಧಿಸಿದಂತೆ ಮಾಜಿ ಪ್ರಧಾನಿ ಇಂದಿರಾಗಾಂಧಿ ಅವರಿಗೆ ಚುನಾವಣೆಯಲ್ಲಿ ಸ್ಪರ್ಧಿಸದಂತೆ ನಿರ್ಬಂಧವನ್ನು ಹೇರಿದ್ದ ಅಲಹಾಬಾದ್ ಹೈಕೋರ್ಟ್‌ನ ಪ್ರಕರಣದಲ್ಲಿ ಅರ್ಜಿದಾರರಾಗಿದ್ದ ರಾಜ್ ನಾರಾಯಣ್ ಪರವಾಗಿ ಶಾಂತಿಭೂಷಣ್ ವಾದ ಮಂಡಿಸಿದ್ದರು.

ಅಧಿಕಾರಿಗಳ 'ಎತ್ತಂಗಡಿ' ಮಾಡಿ

ಅಧಿಕಾರಿಗಳ ವರ್ಗಾವಣೆಗೆ ಸಂಬಂಧಿಸಿದ ಮಾರ್ಗಸೂಚಿ ನೀಡಿತ್ತು. ಎಸ್‌ಎಸ್‌ಎಲ್‌ಸಿ, ಪಿಯುಸಿ ಸೇರಿದಂತೆ ಎಲ್ಲ ತೆರನಾದ ಪರೀಕ್ಷೆಗಳನ್ನು ಮಾರ್ಚ್ ಅಂತ್ಯದೊಳಗೆ ಪೂರ್ಣಗೊಳಿಸುವಂತೆ ಈ ಹಿಂದೆ ನೀಡಿದ್ದ ಆದೇಶವನ್ನು ಸರ್ಕಾರ ಪಾಲನೆ ಮಾಡಿದೆ.

ಪ್ರಸಕ್ತ ವಿಧಾನಸಭೆಯ ಅವಧಿ ಮೇ 24ಕ್ಕೆ ಅಂತ್ಯಗೊಳ್ಳಲಿದ್ದು, ಅದಕ್ಕೂ ಮುನ್ನವೇ ಹೊಸ ಸರ್ಕಾರ ಅಸ್ತಿತ್ವಕ್ಕೆ ಬರಬೇಕಿದೆ. ಈಗಾಗಲೇ ಈ ಸಂಬಂಧ ತಾತ್ಕಾಲಿಕ ಚುನಾವಣಾ ವೇಳಾಪಟ್ಟಿ ಸಿದ್ಧತೆ ಮಾಡಿಕೊಂಡಿರುವ ಆಯೋಗವು ಮಾರ್ಚ್ ಅಂತ್ಯ ಇಲ್ಲವೇ ಏಪ್ರಿಲ್ ಮೊದಲ ವಾರದಲ್ಲಿ ಚುನಾವಣಾ ವೇಳಾಪಟ್ಟಿ ಪ್ರಕಟವಾಗುವ ಸಾಧ್ಯತೆ ಇದೆ. ಚುನಾವಣೆಗೆ ಅಗತ್ಯ ಸಿಬ್ಬಂದಿ ಮತ್ತು ಮತಗಟ್ಟೆಗಳನ್ನು ಸ್ಥಾಪಿಸಲು ಶಾಲಾ, ಕಾಲೇಜು, ಮತ್ತು ಕೆಲವು ಕಚೇರಿಗಳನ್ನು ಬಳಸಿಕೊಳ್ಳಲು ಈಗಾಗಲೇ ಗುರುತಿಸಲಾಗಿದೆ. ಈ ಕಾರಣಕ್ಕಾಗಿಯೇ ಮಕ್ಕಳ ಪರೀಕ್ಷೆಗಳನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಲು ಸರ್ಕಾರಕ್ಕೆ ಗಡುವು ನೀಡಿತ್ತು. ಈಗಾಗಲೇ ಆಯೋಗ ಮತದಾರರ ಪಟ್ಟಿ ಪರಿಷ್ಕರಣೆ ಪೂರ್ಣಗೊಳಿಸಿ ಅಂತಿಮ ಮತದಾರರ ಪಟ್ಟಿ ಪ್ರಕಟಿಸಿದೆ. ಇದೀಗ ಒಂದೇ ಸ್ಥಳದಲ್ಲಿ ದೀರ್ಘ ಕಾಲದಿಂದ ಕಾರ್ಯನಿರ್ವಹಿಸುವ ಹಾಗೂ ತವರು ಜಿಲ್ಲೆಯಲ್ಲಿರುವ ಅಧಿಕಾರಿ ಹಾಗೂ ನೌಕರರನ್ನು ವರ್ಗಾಯಿಸಲು ಸೂಚಿಸಿದೆ.

'ಚಿರತೆ ಟಾಸ್ಕ್ ಫೋರ್ಸ್' ರಚನೆ


4 ತಂಡಗಳಾಗಿ ಒಂದೊಂದು ತಂಡದಲ್ಲಿ ಇಬ್ಬರು ಗಸ್ತು ಅರಣ್ಯ ಪಾಲಕರು, ಒಬ್ಬ ವಾಹನ ಚಾಲಕ, 10 ಹೊರಗುತ್ತಿಗೆ ನೌಕರರು ಒಳಗೊಂಡಂತೆ ಕಾರ್ಯನಿರ್ವಹಿಸಲಿದ್ದಾರೆ. ಪ್ರತಿ ತಂಡವು ಚಿರತೆ ಹಾವಳಿ ಇರುವ ಗ್ರಾಮಗಳಲ್ಲಿ ಗಸ್ತು ತಿರುಗಲಿದೆ. ಜನ ವಸತಿ ಪ್ರದೇಶಗಳಲ್ಲಿ ಅದರಲ್ಲೂ ಪ್ರಮುಖವಾಗಿ ಕಬ್ಬು ಬೆಳೆ ಇರುವ ಕೃಷಿ ಪ್ರದೇಶದಲಿ ಚಿರತೆ ಇರುವಿಕೆಯನ್ನು ಗುರುತಿಸಿ, ಮುಂದಿನ ಕ್ರಮ ಕೈಗೊಳ್ಳಲಿದೆ. ಟಾಸ್ಕ್ ಫೋರ್ಸ್‌ನ ನಿಯಂತ್ರಣ ಕೊಠಡಿಯನ್ನು ಮೈಸೂರಿನ ಅರಣ್ಯ ಭವನದಲ್ಲಿ ಸ್ಥಾಪಿಸಲಾಗುವುದು. 24 ಗಂಟೆಯೂ ಕಾರ್ಯನಿರ್ವಹಿಸುವ ಈ ನಿಯಂತ್ರಣ ಕೊಠಡಿಯ ದೂರವಾಣಿ ಸಂಖ್ಯೆಯನ್ನು ಸಾರ್ವಜನಿಕರಲ್ಲಿ ಪ್ರಚುರಪಡಿಸಬೇಕು. ಟಾಸ್ಕ್ ಫೋರ್ಸ್‌ಗೆ ಅಗತ್ಯವಿರುವ ಸರ್ಚ್ ಲೈಟ್, ಪಬ್ಲಿಕ್ ಅಡ್ರೆಸಿಂಗ್ ಸಿಸ್ಟಂ, ಧ್ವನಿವರ್ಧಕ ಹಾಗೂ 5 ವಾಹನಗಳನ್ನು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಪಡೆ ಮುಖ್ಯಸ್ಥರು ಒದಗಿಸುವುದು. ಈ ಟಾಸ್ಕ್ ಫೋರ್ಸ್‌ಗೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಪಡೆ ಮುಖ್ಯಸ್ಥರು ಸಿಬ್ಬಂದಿಯನ್ನು ನಿಯೋಜಿಸಿ ಸೂಕ್ತ ಆದೇಶ ಹೊರಡಿಸಬೇಕು. ತಂಡದ ಸದಸ್ಯರು ಜಿಲ್ಲಾಡಳಿತದ ಮುಖ್ಯಸ್ಥರೊಂದಿಗೆ ಸಮನ್ವಯ ಸಾಧಿಸಿ, ಅವಶ್ಯವಿರುವ ಸಹಾಯ ಪಡೆಯುವಂತೆ ಅರಣ್ಯ ಮತ್ತು ಪರಿಸರ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ಗೀಗಾ ಎಂ.ಪಾಟೀಲ ತಮ್ಮ ಆದೇಶದಲ್ಲಿ ತಿಳಿಸಿದ್ದಾರೆ.

ಚುನಾವಣೆ ಹಿನ್ನೆಲೆಯಲ್ಲಿ ಪಕ್ಷ ಸಂಘಟನೆಗೆ ಪಣ ತೊಡಲು ಸಲಹೆ

ಮೈಸೂರು, ಜ.31(ಎಂಟಿವೈ)– ಮುಂಬರುವ ವಿಧಾನಸಭಾ ಚುನಾವಣೆಗೆ ಕೇವಲ ಮೂರು ತಿಂಗಳಷ್ಟೇ ಬಾಕಿ ಇದ್ದು, ಈಗಾಗಲೇ ಪಕ್ಷದಲ್ಲಿ ವಿವಿಧ ಹುದ್ದೆಯಲ್ಲಿರುವವರು ತಳಮಟ್ಟದಿಂದ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ಸಲಹೆ ನೀಡಿದ್ದಾರೆ.

ಮೈಸೂರು ಕಾಂಗ್ರೆಸ್ ಭವನದಲ್ಲಿ ಸೋಮವಾರ ನಡೆದ ಜಿಲ್ಲಾ ಕಾಂಗ್ರೆಸ್ ಸಮಿತಿ ಸೇವಾದಳ ಸಮಿತಿ ಜಿಲ್ಲಾಧ್ಯಕ್ಷ, ಹುಣಸೂರು ಕ್ಷೇತ್ರದ 3 ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರ ಪದಗ್ರಹಣ ಮತ್ತು ಪಕ್ಷ ಸೇರ್ಪಡೆ ಸಮಾರಂಭದಲ್ಲಿ ಮಾತನಾಡಿದ ಅವರು, ಚುನಾವಣೆ ಮುಗಿಯುವವರೆಗೂ ಪಕ್ಷದ ಮುಖಂಡರು, ಕಾರ್ಯಕರ್ತರು ಹಾಗೂ ವಿವಿಧ ಘಟಕಗಳ ಪದಾಧಿಕಾರಿಗಳು ಪಕ್ಷ ಸಂಘಟನೆಗೆ ಪಣ ತೊಡಬೇಕು. ಸಂಸದರು, ಶಾಸಕರು ಗುದ್ದಲಿ ಪೂಜೆ, ವಿವಾಹ, ಸಾವುಗಳಿಗೆ ಹೋಗಬೇಕಾಗುತ್ತದೆ. ಅವರಿಗೆ ಕೆಲಸದ ಒತ್ತಡವೂ ಇರುತ್ತದೆ. ಎಷ್ಟೇ ಒತ್ತಡವಿದ್ದರೂ ಪಕ್ಷ ಸಂಘಟನೆಯನ್ನು ತಕ್ಕಡಿಯಂತೆ ಸಮನಾಗಿ ತೂಗಬೇಕು. ಆ ಮೂಲಕ ಜನರಿಗೆ ಆಡಳಿತ ಪಕ್ಷದ ವೈಫಲ್ಯ, ಭ್ರಷ್ಟಾಚಾರದ ಬಗ್ಗೆ ಮಾಹಿತಿ ನೀಡಬೇಕು ಎಂದು ಹೇಳಿದರು.

ಡಾ.ಹರ್ಡೀಕರ್ 1923ರಲ್ಲಿ ಸೇವಾದಳ ಸಂಸ್ಥೆಯನ್ನು ಸ್ಥಾಪಿಸಿದರು. ಈ ಸಂಸ್ಥೆಯ ಕಾರ್ಯಕರ್ತರು ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡರು. ಅಲ್ಲದೇ ದೇಶದಲ್ಲಿ ಕಾಣಿಸಿಕೊಂಡ ಪ್ಲೇಗ್, ಕಾಲರಾದಂತಹ ಭಯಂಕರ ಸಾಂಕ್ರಾಮಿಕ ರೋಗಗಳ ಸಂದರ್ಭದಲ್ಲಿ ಸೇವಾದಳ ಸದಸ್ಯರು ಸೋಂಕಿನಿಂದ ಬಳಲುತ್ತಿದ್ದವರ ಸೇವೆ ಮಾಡಿದರು. ಮುಂದಿನ ದಿನಗಳಲ್ಲೂ



ಕಾಂಗ್ರೆಸ್ ಸೇವಾದಳ ತನ್ನ ಕಾರ್ಯದಕ್ಷತೆ ಹೆಚ್ಚಿಸಿಕೊಂಡು ಸೇವೆ ಮುಂದುವರೆಸಬೇಕು ಎಂದು ಸಲಹೆ ನೀಡಿದರು.

ಆರ್‌ಎಸ್‌ಎಸ್ ಪ್ರಶಂಸೆ: ಆರ್‌ಎಸ್‌ಎಸ್ ಸಂಚಾಲಕರು ನಿಸ್ವಾರ್ಥವಾಗಿ ಕೆಲಸ ಮಾಡುತ್ತಿದ್ದಾರೆ. ಅದಕ್ಕಿಂತಲೂ ಹೆಚ್ಚು ಕೆಲಸವನ್ನು ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಸೇವಾದಳದ ಕಾರ್ಯಕರ್ತರು ಮಾಡಬೇಕು. ಬಿಜೆಪಿಯ ವಿದ್ಯಾರ್ಥಿ ಸಂಘಟನೆ ಕಾರ್ಯಕ್ರಮಕ್ಕೆ ಕೇಂದ್ರ ಸಚಿವ ಅಮಿತ್ ಶಾ ಬಂದು ಹೋಗಿದ್ದಾರೆ. ಆದರೂ ಬಿಜೆಪಿ, ಆರ್‌ಎಸ್‌ಎಸ್ ಸಂಘಟನೆಗಳಿಗಿಂತಲೂ ಹೆಚ್ಚು ಕೆಲಸ ಮಾಡಿ ತೋರಿಸುವ ಉತ್ಸಾಹ ಕಾಂಗ್ರೆಸ್ ಕಾರ್ಯಕರ್ತರಲ್ಲಿದೆ. ಆದರೆ, ಅದನ್ನು ಕಾರ್ಯರೂಪಗೊಳಿಸುವಲ್ಲಿ ಹಿನ್ನಡೆ ಅನುಭವಿಸುತ್ತಿದ್ದೇವೆ. ಈ ಹಿನ್ನೆಲೆಯಲ್ಲಿ ಚುನಾವಣೆಯನ್ನು ಸವಾಲಾಗಿ ಸ್ವೀಕರಿಸಿ, ಪಕ್ಷ ಅಧಿಕಾರಕ್ಕೆ ತರಲು ಶ್ರಮಿಸಬೇಕು ಎಂದು ತಿಳಿಸಿದರು.

ಮುಂಬರುವ ಚುನಾವಣೆ ಗಂಭೀರವಾಗಿ ಸ್ವೀಕರಿಸಬೇಕು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ನೂರು ಜನರಿಗೆ ಆದೇಶ ಕೊಡಬಹುದು. ಬೂತ್ ಸಮಿತಿಗಳನ್ನು ರಚಿಸಬೇಕು. ಬಿಎಲ್‌ಎ2 ನೇಮಕ ಮಾಡಿ ಕೆಪಿಸಿಸಿ ವೆಬ್‌ಸೈಟ್‌ಗೆ ದಾಖಲಿಸಬೇಕು. ಪ್ರತಿ ಮನೆ ಮನೆಗೆ ಭೇಟಿ ನೀಡಿ ಪರಿಷ್ಕರಣೆ ಮಾಡಬೇಕು. ವ್ಯಾಟ್ಸಾಪ್ ಗ್ರೂಪ್ ರಚಿಸಿ, ಗುರುತಿನ ಚೀಟಿಯನ್ನು ನೀಡಬೇಕು ಎಂದು ಮುಖಂಡರಿಗೆ ಹೇಳಿದರು.


ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್ ಮಾತನಾಡಿ, ಕಾಂಗ್ರೆಸ್ ಪಕ್ಷವನ್ನು ಶಿಸ್ತಿನಿಂದ ಮುನ್ನಡೆಸಲು ಸೇವಾದಳದ ಅವಶ್ಯಕತೆ ಇದೆ. ಆದರೆ ಇತ್ತೀಚಿನ ದಿನಗಳಲ್ಲಿ ಸೇವಾದಳಕ್ಕೆ ಕೊಡುವ ಪ್ರಾಮುಖ್ಯತೆ ಕಡಿಮೆಯಾಗಿದೆ. ಮುಂದಿನ ದಿನಗಳಲ್ಲಿ ಸೇವಾದಳಕ್ಕೂ ಪ್ರಾಮುಖ್ಯತೆ ದೊರೆಯಲಿದೆ ಎಂದರು.

ಅಧಿಕಾರ ಸ್ವೀಕಾರ: ಜಿಲ್ಲಾ ಕಾಂಗ್ರೆಸ್ ಸೇವಾದಳದ ನೂತನ ಅಧ್ಯಕ್ಷರಾಗಿ ಸಾ.ಮ.ಯೋಗೇಶ್, ಹುಣಸೂರು ಕ್ಷೇತ್ರದ ನಗರ ಬ್ಲಾಕ್ ಕಾಂಗ್ರೆಸ್ ಸಮಿತಿ ಕಾರ್ಯಾಧ್ಯಕ್ಷರಾಗಿ ವಕೀಲ ಪುಟ್ಟರಾಜು, ನಾರಾಯಣ, ಹುಣಸೂರು ಗ್ರಾಮಾಂತರ ಕಾರ್ಯಾಧ್ಯಕ್ಷರಾಗಿ ಕೆ.ಎಸ್.ಬಸವರಾಜು ಅಧಿಕಾರ ಸ್ವೀಕರಿಸಿದರು. ಜಿಲ್ಲಾ ಕಾಂಗ್ರೆಸ್ ಹಿರಿಯ ಕಾರ್ಯದರ್ಶಿಯಾಗಿ ಎಸ್.ಎಸ್.ಸಂದೇಶ್, ಪಿರಿಯಾಪಟ್ಟಣ ಬ್ಲಾಕ್ ಕಾಂಗ್ರೆಸ್ ಉಪಾಧ್ಯಕ್ಷರಾಗಿ ತಮ್ಮಯ್ಯಣ್ಣ, ಜಿಲ್ಲಾ ಮಾಧ್ಯಮ ವಿಭಾಗದ ಕಾರ್ಯದರ್ಶಿಗಳಾಗಿ ರವಿಪ್ರಸಾದ್, ಮನೋಜ್, ಶಶಿಕುಮಾರ್, ಎಚ್.ಆರ್.ಸೋಮಶೇಖರ್ ಅಧಿಕಾರ ಸ್ವೀಕರಿಸಿದರು.

ಪಕ್ಷ ಸೇರ್ಪಡೆ: ಹುಣಸೂರು ನಗರಸಭಾ ಮಾಜಿ ಸದಸ್ಯ ಶಫಿ ಅಹಮದ್, ಹುಣಸೂರಿನ ಸ್ಟೂಡೆಂಟ್ ಫೆಡರೇಷನ್ ವಿದ್ಯಾರ್ಥಿಯ ಸಂಘಟನೆಯ ರಫೀಕ್ ಅಲಿ, ಕಿರಣ್, ದುರ್ಗೇಶ್, ಹರೀಶ್, ರವಿ, ಸತೀಶ್ ಹಾಗೂ ಇನ್ನಿತರರನ್ನು ಆರ್.ಧ್ರುವನಾರಾಯಣ ಅವರು ಪಕ್ಷದ ಧ್ವಜ ನೀಡಿ ಶಾಲು ಹೊದಿಸಿ ಪಕ್ಷಕ್ಕೆ ಬರಮಾಡಿಕೊಂಡರು. ನೂತನವಾಗಿ ಕಾಂಗ್ರೆಸ್ ಸೇರ್ಪಡೆಯಾದವರಿಗೆ ಸಾಹಿತಿ ದೇವನೂರ ಮಹಾದೇವ ಅವರ ಆರ್‌ಎಸ್‌ಎಸ್ ಆಳ ಮತ್ತು ಅಗಲ ಪುಸ್ತಕವನ್ನು ವಿತರಿಸಲಾಯಿತು. ಸೇವಾದಳ ಪದಾಧಿಕಾರಿಗಳಿಗೆ ಸಮವಸ್ತ್ರ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಶಾಸಕ ಹೆಚ್.ಪಿ.ಮಂಜುನಾಥ್, ಕೆಪಿಸಿಸಿ ಸದಸ್ಯ ದೊಡ್ಡಸ್ವಾಮಿಗೌಡ, ಸಂಯೋಜಕ ಭಾಸ್ಕರ್, ಮುಖಂಡರಾದ ಶಿವಕುಮಾರ್, ಎಡತಲೆ ಮಂಜುನಾಥ್, ನಾಗವಾಲ ಸಿ.ನರೇಂದ್ರ, ಜಾವೀದ್ ಪಾಷ, ಹುಣಸೂರು ಕ್ಷೇತ್ರದ ಬ್ಲಾಕ್ ರಮೇಶ್, ದೇವರಾಜು, ನಾರಾಯಣ, ಹೆಳವಹುಂಡಿ ಸೋಮು, ಲಲಿತಾ, ಶ್ರೀನಿವಾಸ್, ಹುಣಸೂರು ಬಸವಣ್ಣ, ಲಕ್ಷ್ಮಣ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಜಯಪುರದಲ್ಲಿ ಬೋನಿಗೆ ಬಿದ್ದ ಹೆಣ್ಣು ಚಿರತೆ



ಮೈಸೂರು,ಜ.31(ಎಂಟಿವೈ)– ಮೈಸೂರು ಜಿಲ್ಲೆಯಲ್ಲಿ ಚಿರತೆಗಳ ಉಪಟಳ ನಿಯಂತ್ರಣಕ್ಕೆ ಬಂದಿದ್ದರೂ, ಸೆರೆ ಸಿಗುತ್ತಿರುವ ಚಿರತೆಗಳ ಸಂಖ್ಯೆ ಹೆಚ್ಚಾಗುತ್ತಲೇ ಇದೆ. ಈ ಮಧ್ಯೆ ಮೈಸೂರು ತಾಲೂಕಿನ ಜಯಪುರದಲ್ಲಿ ಚಿರತೆಯೊಂದು ಸೆರೆ ಸಿಕ್ಕಿದೆ.

ಕಳೆದ ಒಂದು ವಾರದಿಂದ ಜಯಪುರ ಗ್ರಾಮದ ಹೊರವಲಯದಲ್ಲಿ ಕಾಣಿಸಿಕೊಳ್ಳುತ್ತಿದ್ದ ಚಿರತೆ ಸೆರೆ ಹಿಡಿದು, ತಮ್ಮ ಆತಂಕ ನಿವಾರಿಸುವಂತೆ ಗ್ರಾಮಸ್ಥರು ಆಗ್ರಹಿಸಿದ್ದರು. ಈ ಹಿನ್ನೆಲೆಯಲ್ಲಿ ಸೋಮವಾರ ಗ್ರಾಮದ ಸಿದ್ದನಾಯಕ ಎಂಬುವರ ಜಮೀನಿನಲ್ಲಿ ಅರಣ್ಯ ಸಿಬ್ಬಂದಿ ಬೋನ್ ಇಟ್ಟಿದ್ದರು. ಬೋನ್‌ನಲ್ಲಿದ್ದ ನಾಯಿಯನ್ನು ಬೇಟೆಯಾಡಲು ಬಂದ ಚಿರತೆ ಸೆರೆ ಸಿಕ್ಕಿದೆ.

1–1.5 ವರ್ಷದ ಈ ಹೆಣ್ಣು ಚಿರತೆ, ಮತ್ತೊಂದು ಚಿರತೆಯೊಂದಿಗೆ ಕಾದಾಟ ನಡೆಸಿದ ವೇಳೆ ಇದರ ಮೈಮೇಲೆ ಗಾಯಗಳಾಗಿವೆ. ಬೋನ್‌ಗೆ ಬಿದ್ದ ಚಿರತೆಯನ್ನು ನೋಡಲು ಗ್ರಾಮಸ್ಥರು ಮುಗಿಬಿದ್ದರು. ಜಯಪುರ ಗ್ರಾಮದಲ್ಲಿ ವಾರದಲ್ಲಿ ಹಸು ಹಾಗೂ ಕುರಿ ಈ ಚಿರತೆಗೆ ಬಲಿಯಾಗಿತ್ತು ಸ್ಥಳಕ್ಕೆ ಅರಣ್ಯಾಧಿಕಾರಿಗಳು ಆಗಮಿಸಿ, ಚಿರತೆಯನ್ನು ಸುರಕ್ಷಿತವಾಗಿ ಕೊಂಡೊಯ್ದರು.

ಹನಿ ನೀರಾವರಿಯಿಂದ 'ಮೆಣಸಿನಕಾಯಿ' ಹೆಚ್ಚಿನ ಇಳುವರಿ

ಮೈಸೂರು, ಜ.31(ಎಂಕೆ)– ತರಕಾರಿ ಬೆಳೆಗಳಲ್ಲಿಯೇ ಪ್ರಮುಖವಾದ 'ಮೆಣಸಿನಕಾಯಿ' ಬೆಳೆಯಲು, ಹೆಚ್ಚಿನ ಇಳುವರಿಗಾಗಿ ಹನಿ ನೀರಾವರಿ ಪದ್ಧತಿ ಅವಲಂಬನೆ ಅಗತ್ಯವಾಗಿದೆ.

ಮೈಸೂರು ಜಿಲ್ಲೆಯಾದ್ಯಂತ ಸುಮಾರು 2152 ಹೆಕ್ಟೇರ್‌ಗೂ ಹೆಚ್ಚು ಪ್ರದೇಶದಲ್ಲಿ ಮೆಣಸಿನಕಾಯಿ ಬೆಳೆಯಾಲಾಗುತ್ತಿದ್ದು, ಉತ್ತಮ ಇಳುವರಿಗಾಗಿ ಹನಿ ನೀರಾವರಿ ಪದ್ಧತಿ ಅಗತ್ಯವಾಗಿದೆ ಎಂದು ಕೃಷಿ ವಿಶ್ವವಿದ್ಯಾನಿಲಯ ವಿಸ್ತರಣಾ ಘಟಕದ ತೋಟಗಾರಿಕೆ ವಿಭಾಗದ ಸಹಾಯಕ ಪ್ರಾಧ್ಯಾಪಕ ರಾಹುಲ್‌ದಾಸ್ ಸಲಹೆ ನೀಡಿದ್ದಾರೆ.

ಹನಿ ನೀರಾವರಿ ಪದ್ಧತಿಯಲ್ಲಿ 16 ಮಿ.ಮೀ ಲ್ಯಾಟರಲ್ ಪೈಪ್ ಮೂಲಕ ಪ್ರತಿ ಗಂಟೆಗೆ 4 ಲೀಟರ್ ನೀರನ್ನು ಹಾಯಿಸಬೇಕು. ನಾಟಿ ಮಾಡಿದ ಮೊದಲ ತಿಂಗಳಿನಲ್ಲಿ ಪ್ರತಿ ಚದರ ಮೀಟರ್ ವಿಸ್ತೀರ್ಣಕ್ಕೆ ಅಂದಾಜು 8 ಲೀಟರ್‌ನಷ್ಟು ನೀರಿನ ಅವಶ್ಯಕತೆ ಇದ್ದು, ನಂತರದ ದಿನಗಳಲ್ಲಿ ಪ್ರತಿ ಚದರ ವಿಸ್ತೀರ್ಣಕ್ಕೆ ಅಂದಾಜು 12 ಲೀಟರ್‌ನಷ್ಟು ನೀರಿನ ಅವಶ್ಯಕತೆ ಇರಲಿದೆ. ನೀರು ಹಾಯಿಸುವುದು ಬೆಳೆಯ ಅವಶ್ಯಕತೆ, ಬೆಳೆಯುವ ಪ್ರದೇಶ, ಮಳೆ, ಮಣ್ಣಿನ ಗುಣಧರ್ಮ, ಮಳೆಯ ಪ್ರಮಾಣಕ್ಕೆ ಅನುಗುಣವಾಗಿ ವ್ಯತ್ಯಾಸವಾಗಬಹುದು. ಈ ನಿಟ್ಟಿನಲ್ಲಿ ರೈತರು ಎಚ್ಚರಿಕೆ ವಹಿಸುವಂತೆ ತಿಳಿಸಿದ್ದಾರೆ.



ಮೆಣಸಿನಕಾಯಿ ಉತ್ತಮ ಇಳುವರಿಗಾಗಿ ಮೂಲ ಗೊಬ್ಬರವಾಗಿ ಅಮೋನಿಯಂ ಸಲ್ಫೇಟ್ 60 ಕೆ.ಜಿ., ಮ್ಯುರೇಟ್ ಆಫ್ ಪೊಟ್ಯಾಷ್ 20 ಕೆ.ಜಿ. ಮತ್ತು ಸಲ್ಫೇಟ್ ಆಫ್ ಪೊಟ್ಯಾಷ್ 50 ಕೆ.ಜಿ ಹಾಗೂ ಸೂಕ್ಷ್ಮ ಪೋಷಕಾಂಶಗಳಾದ ಬೋರಾನ್ (10.5% ಬೋರಾಕ್ಸ್) 4 ಕೆ.ಜಿ., ಜಿಂಕ್ ಸಲ್ಫೇಟ್ 20 ಕೆ.ಜಿ ಮತ್ತು ಕ್ಯಾಲ್ಸಿಯಂ ನೈಟ್ರೇಟ್ 40 ಕೆಜಿ ಅನ್ನು ಮಿಶ್ರಣ ಮಾಡಿ ಗಿಡ ನಾಟಿ ಮಾಡುವುದಕ್ಕೆ ಮುಂಚಿತವಾಗಿ ಜಮೀನಿಗೆ ಹಾಕಬೇಕು. ಇದರಿಂದ ಮಣ್ಣಿನ ಫಲವತ್ತತೆ ಹೆಚ್ಚಾಗುತ್ತದೆ.

ಮೆಣಸಿನಕಾಯಿ ಸಸಿ ನಾಟಿ ಮಾಡುವಾಗ ಸಾಲಿನಿಂದ ಸಾಲಿಗೆ 2 ಅಡಿ ಮತ್ತು ಗಿಡದಿಂದ ಗಿಡಕ್ಕೆ 1.5 ಅಡಿ ಅಂತರದಲ್ಲಿ ನಾಟಿ ಮಾಡಬೇಕು. ನಾಟಿ ಮಾಡಿದ 20 ದಿನಗಳವರೆಗೆ ಯಾವುದೇ ರಸಗೊಬ್ಬರಗಳನ್ನು ನೀಡುವಂತಿಲ್ಲ. 21 ದಿನಗಳ ನಂತರ ಅಂದರೆ ಬೆಳವಣಿಗೆಯ ಹಂತದಲ್ಲಿ(21–36 ದಿನಗಳು) 9 ಕೆ.ಜಿ 19:19:19(ಡ್ರಿಪ್‌ಗ್ರೇಡ್) ಗೊಬ್ಬರವನ್ನು ಪ್ರತಿ 3 ದಿನಕ್ಕೊಮ್ಮೆ 6 ಬಾರಿ ಡ್ರಿಪ್ ಮೂಲಕ ಹಾಕಬೇಕು. ಹೂ ಬಿಡುವ ಹಂತದಿಂದ ಕಾಯಿ ಕಚ್ಚುವ ಹಂತದವರೆಗೂ(39–57ದಿನಗಳು)1 4 ಕೆ.ಜಿ 19:19:19 (ಡ್ರಿಪ್‌ಗ್ರೇಡ್) ಗೊಬ್ಬರ, ಪೊಟ್ಯಾಷಿಯಂ ನೈಟ್ರೇಟ್ 7 ಕಿಜಿ ಮತ್ತು ಕ್ಯಾಲ್ಸಿಯಂ ನೈಟ್ರೇಟ್ 7 ಕೆ.ಜಿ ಗೊಬ್ಬರ ಗಳನ್ನು ಪ್ರತಿ 3 ದಿನಕ್ಕೊಮ್ಮೆ 7 ಬಾರಿ ಡ್ರಿಪ್ ಮೂಲಕ ನೀಡಬೇಕು. ನಂತರ ಕೊಯ್ಲು ಮಾಡುವ ಹಂತದವರೆಗೆ (60–129 ದಿನಗಳು) 96 ಕೆ.ಜಿ 19:19:19 (ಡ್ರಿಪ್‌ಗ್ರೇಡ್) ಗೊಬ್ಬರ, ಪೊಟ್ಯಾಷಿಯಂ ನೈಟ್ರೇಟ್ 24 ಕೆ.ಜಿ ಮತ್ತು ಕ್ಯಾಲ್ಸಿಯಂ ನೈಟ್ರೇಟ್ 48 ಕೆ.ಜಿ ಗೊಬ್ಬರಗಳನ್ನು 24 ಬಾರಿ ಡ್ರಿಪ್ ಮೂಲಕ ಪ್ರತಿ 3 ದಿನಕ್ಕೊಮ್ಮೆ ನೀಡುವುದರಿಂದ ಉತ್ತಮ ಇಳುವರಿ ಪಡೆಯಬಹುದಾಗಿದೆ ಎಂದು ಸಲಹೆ ನೀಡಿದ್ದಾರೆ.

ನೀರಿನಲ್ಲಿ ಕರಗುವ ಗೊಬ್ಬರ ಬಳಸಿ

ನೀರಿನಲ್ಲಿ ಸಂಪೂರ್ಣವಾಗಿ ಕರಗುವಂತಹ ಗೊಬ್ಬರಗಳನ್ನು ಮಾತ್ರ ಬಳಸಬೇಕು. ನಾಟಿ ಮಾಡಿದ 45, 60ನೇ ಹಾಗೂ 75ನೇ ದಿನಗಳಲ್ಲಿ IIHR(ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಹಾರ್ಟಿಕಲ್ಚರಲ್ ರಿಸರ್ಚ್) ಅನುಮೋದಿತ ತರಕಾರಿ ಸ್ಪೆಶಲ್‌ನ್ನು ಪ್ರತಿ ಲೀಟರ್ ನೀರಿಗೆ 3 ಗ್ರಾಂನಂತೆ ಮಿಶ್ರಣ ಮಾಡಿ ಸಿಂಪಡಿಸುವುದರಿಂದ ಸೂಕ್ಷ್ಮ ಪೋಷಕಾಂಶಗಳ ಕೊರತೆ ನೀಗಲಿದೆ. ಜೊತೆಗೆ ಭೂ ಉದುರುವಿಕೆ ಪ್ರಮಾಣ ಕಡಿಯಾಗಿ ಉತ್ತಮ ಗುಣಮಟ್ಟದ ಹೆಚ್ಚಿನ ಇಳುವರಿ ಪಡೆಯಬಹುದಾಗಿದೆ ಎಂದು ತಿಳಿಸಿದ್ದಾರೆ.



ವಿದ್ಯಾರ್ಥಿಗಳು ಪರಿಸರ ಸಂರಕ್ಷಣೆ ಮನೋಭಾವನೆ ಬೆಳೆಸಿಕೊಳ್ಳಲು ಕಿವಿಮಾತು

ಮೈಸೂರು,ಜ.31(ಎಂಟಿವೈ)– ವನ್ಯಜೀವಿ ಸಂರಕ್ಷಣೆಯಲ್ಲಿ ಯುವಜನರ ಪಾತ್ರ ಕುರಿತಂತೆ ಬಂಡೀಪುರದಲ್ಲಿ ವೈಲ್ಡ್‌ಲೈಫ್ ಕನ್ಸರ್ವೇಷನ್ ಫೌಂಡೇಷನ್ ಆಯೋಜಿಸಿದ್ದ 'ಪರಿಸರ ಅಧ್ಯಯನ' ಶಿಬಿರದಲ್ಲಿ ಮೈಸೂರಿನ ದಕ್ಷ ಪದವಿ ಕಾಲೇಜಿನ ವಿದ್ಯಾರ್ಥಿಗಳು ಪಾಲ್ಗೊಂಡು ಸಂವಾದ ನಡೆಸಿದರು.

ಪರಿಸರ, ಅರಣ್ಯ ನಾಶ ತಡೆಗಟ್ಟುವಿಕೆ ಕುರಿತು ಜಾಗೃತಿ ಮೂಡಿಸುವುದರೊಂದಿಗೆ ವನ್ಯಜೀವಿಗಳ ಉಪಟಳ ಕುರಿತಂತೆ ಜನರಲ್ಲಿ ತಪ್ಪು ಕಲ್ಪನೆ ಹೋಗಲಾಡಿಸುವ ನಿಟ್ಟಿನಲ್ಲಿ ಪರಿಸರ ಅಧ್ಯಯನ ಶಿಬಿರ ಮಹತ್ವದ ಪಾತ್ರ ವಹಿಸಲಿದ್ದು, ಅದಕ್ಕಾಗಿ ವಿದ್ಯಾರ್ಥಿ ಹಾಗೂ ಯುವಜನರಿಗೆ ಪರಿಸರ ಸಂರಕ್ಷಣೆ ಬಗ್ಗೆ ಮನವರಿಕೆ ಮಾಡಿಕೊಡುವ ಅನಿವಾರ್ಯತೆ ಇದೆ. ಈ ಹಿನ್ನೆಲೆಯಲ್ಲಿ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ 'ಯುವ ಮಿತ್ರ' ಯೋಜನೆಯನ್ನು ಜಾರಿಗೊಳಿಸಿ, ಕಾಡಂಚಿನ ಗ್ರಾಮಗಳ ವಿದ್ಯಾರ್ಥಿಗಳಿಗೆ ಪರಿಸರ ಸಂರಕ್ಷಣೆ ಕುರಿತಂತೆ ಜಾಗೃತಿ ಮೂಡಿಸಲಾಗುತ್ತಿದೆ

ವೈಲ್ಡ್‌ಲೈಫ್ ಕನ್ಸರ್ವೇಷನ್ ಫೌಂಡೇಷನ್ ವತಿಯಿಂದ ಬಂಡೀಪುರದಲ್ಲಿ ಆಯೋಜಿಸಿದ್ದ ಪರಿಸರ ಶಿಕ್ಷಣ ಶಿಬಿರದಲ್ಲಿ ಮೈಸೂರಿನ ದಕ್ಷ ಪದವಿ ಕಾಲೇಜಿನ 28 ವಿದ್ಯಾರ್ಥಿಗಳು ಪಾಲ್ಗೊಂಡು ಹುಲಿ ಸಂರಕ್ಷಿತ ಪ್ರದೇಶದ ಪ್ರಾಮುಖ್ಯತೆ, ಕಾಡಂಚಿನ ಗ್ರಾಮಗಳಲ್ಲಿರುವ ಮಾನವ–ಪ್ರಾಣಿ ಸಂಘರ್ಷ ಮಾಹಿತಿ ಪಡೆದುಕೊಂಡರು. ಅಲ್ಲದೆ ಪಕ್ಷಿ ವೀಕ್ಷಣೆ ಮಾಡಿ, ಅರಣ್ಯ ಪ್ರದೇಶದಲ್ಲಿ ಕಂಡು ಬರುವ ಪಕ್ಷಿಗಳ ಬಗ್ಗೆ ಅರಿತರು. ಬಳಿಕ ಬಂಡೀಪುರದಲ್ಲಿ ಸಫಾರಿಗೆ ತೆರಳಿ ಕಾಡಿನ ಜೀವವೈವಿಧ್ಯತೆ ಬಗ್ಗೆ ಮನವರಿಕೆ ಮಾಡಿಕೊಂಡರು.



ಇದೇ ವೇಳೆ ವೈಲ್ಡ್‌ಲೈಫ್ ಕನ್ಸರ್ವೇಷನ್ ಫೌಂಡೇಷನ್ ಮುಖ್ಯಸ್ಥ ರಾಜಕುಮಾರ್ ಡಿ.ಅರಸ್ ಮಾತನಾಡಿ, ನಮ್ಮ ಸುತ್ತಮುತ್ತಲಿನ ಪರಿಸರ ಸಂರಕ್ಷಣೆಯ ಕಾರ್ಯ ಆರಂಭಿಸುವುದರೊಂದಿಗೆ ಹಂತ ಹಂತವಾಗಿ ವನ್ಯಜೀವಿಗಳ ಸಂಪತ್ತಿನ ರಕ್ಷಣೆಗೆ ತಮ್ಮದೇ ಕೊಡುಗೆ ನೀಡಬೇಕು. ನಾವು ವಾಸ ಮಾಡುವ ಸ್ಥಳದ ಗಿಡ–ಮರ ಸಂರಕ್ಷಣೆ ಮಾಡುವ ಮೂಲಕ ಪರಿಸರ ಸಂರಕ್ಷಣೆಗೆ ಪ್ರತಿಯೊಬ್ಬರು ಪಣ ತೊಡಬೇಕು. ಈಗಾಗಲೇ ಪರಿಸರದ ಮೇಲೆ ಮಿತಿ ಮೀರಿದ ಪ್ರಮಾಣದಲ್ಲಿ ದೌರ್ಜನ್ಯ ನಡೆಯುತ್ತಿರುವುದರಿಂದ ಹವಾಮಾನ ವೈಪರೀತ್ಯವಾಗುತ್ತಿದೆ. ಇನ್ನಾದರೂ ಎಚ್ಚೆತ್ತುಕೊಳ್ಳಬೇಕು. ವಿದ್ಯುತ್, ನೀರು ಮಿತ ಬಳಕೆ ಮಾಡಬೇಕು. ಹುಲಿ ಸಂರಕ್ಷಿತ ಪ್ರದೇಶಗಳಿರುವುದರಿಂದಲೇ ಮಳೆ, ಬೆಳೆ, ಕುಡಿಯುವ ನೀರು ಲಭ್ಯವಾಗುತ್ತಿದೆ. ಯುವ ಜನರಲ್ಲಿ ಇನ್ನಷ್ಟು ಜಾಗೃತಿ ಮೂಡಿಸುವ ಅಗತ್ಯವಿದೆ. ಪರಿಸರ ಅಧ್ಯಯನ ಶಿಬಿರದಲ್ಲಿ ಕಲಿತ ವಿಚಾರವನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದರೊಂದಿಗೆ ಇನ್ನಷ್ಟು ಮಂದಿಗೆ ಮನವರಿಕೆ ಮಾಡಿಕೊಡಬೇಕು ಎಂದು ಸಲಹೆ ನೀಡಿದರು.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಡಾ.ಪಿ.ರಮೇಶ್ ಕುಮಾರ್ ಸಹಕಾರದಲ್ಲಿ ನಡೆದ ಶಿಬಿರದಲ್ಲಿ ಬಂಡೀಪುರದ ಆರ್‌ಎಫ್‌ಓ ಸಿ.ವಿ.ದೀಪಾ, ಡಿಆರ್‌ಎಫ್‌ಓ ಬಿಪಿನ್, ಪ್ರಕಾಶ್ ಸಸ್ಯಶಾಸ್ತ್ರಜ್ಞ ಪಿ.ಕೆ.ಅನಿಲ್ ಕುಮಾರ್, ಪ್ರಾಣಿ ಸಂರಕ್ಷಕ ಪ್ರದೀಪ್ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ, ಅಗತ್ಯ ಮಾಹಿತಿ ನೀಡಿದರು.

'ಭಾರತದ ಗಣರಾಜ್ಯ- ವರ್ತಮಾನದ ತಲ್ಲಣಗಳು' ವಿಚಾರ ಸಂಕಿರಣ

ಸಂವಿಧಾನ ದಿನಾಚರಣೆಯೂ ಮನೆ ಮನೆಯ ಹಬ್ಬವಾಗಲಿ

ಸಾಹಿತಿ ಪ್ರೊ.ಅರವಿಂದ ಮಾಲಗತ್ತಿ ಅಭಿಮತ



ಮೈಸೂರು, ಜ.31 (ಆರ್‌ಕೆಬಿ)– ಸಂವಿಧಾನ ದಿನಾಚರಣೆ ಮನೆ ಮನೆಯ ಹಬ್ಬದಂತೆ ಆಚರಿಸಬೇಕು ಎಂದು ಸಾಹಿತಿ, ಚಿಂತಕ ಪ್ರೊ.ಅರವಿಂದ ಮಾಲಗತ್ತಿ ಅಭಿಪ್ರಾಯಪಟ್ಟರು.

ಮೈಸೂರು ವಿವಿ ಮಾನಸಗಂಗೋತ್ರಿ ಕನ್ನಡ ಅಧ್ಯಯನ ಸಂಸ್ಥೆಯ ಬಿಎಂಶ್ರೀ ಸಭಾಂಗಣದಲ್ಲಿ ಸಂವಿಧಾನ ದಿನಾಚರಣೆ ಅಂಗವಾಗಿ ಮಂಗಳವಾರ ದಲಿತ ಸಂಘರ್ಷ ಸಮಿತಿ, ದಲಿತ ವಿದ್ಯಾರ್ಥಿ ಒಕ್ಕೂಟ, ಮೈಸೂರು ವಿವಿ ಸಂಶೋಧಕರ ಸಂಘಟನೆಗಳು ಕರ್ನಾಟಕ ರಾಜ್ಯ ನಾಯಕರ ಯುವ ಸೇನೆ ಜಂಟಿಯಾಗಿ ಆಯೋಜಿಸಿದ್ದ 'ಭಾರತದ ಗಣರಾಜ್ಯ– ವರ್ತಮಾನದ ತಲ್ಲಣಗಳು' ವಿಚಾರ ಸಂಕಿರಣಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸರ್ವರೂ ಒಪ್ಪಿಕೊಳ್ಳುವಂತಹ ಲಿಖಿತ ಸಂವಿಧಾನವನ್ನು 1950ರ ಜ.26ರಂದು ನಮಗೆ ನಾವೇ ಸಮರ್ಪಿಸಿಕೊಂಡು ಪ್ರಜಾಪ್ರಭುತ್ವ ರಾಷ್ಟ್ರವಾಗಿಸಿಕೊಂಡೆವು. ಆದರೆ ಜ.26ರಂದು ಸಂವಿಧಾನ ದಿನವನ್ನು ಆಚರಿಸಲಾಗುತ್ತಿದೆ. ಈ ದಿನವನ್ನೂ ನಾವು ಮನೆಗಳಲ್ಲಿ ಆಚರಿಸುವ ಹಬ್ಬಗಳ ರೀತಿಯಲ್ಲಿಯೇ ಆಚರಣೆ ಮಾಡುವಂತಾಗಬೇಕು ಎಂದು ಹೇಳಿದರು.

ಬೇರೆ ಬೇರೆ ಹಬ್ಬಗಳಂತೆ ಈ ಹಬ್ಬವನ್ನು ಮಾಡಿದರೆ ಬಹುಶಃ ಸಂವಿಧಾನ ದಿನವೂ ಮನೆಯ ಹಬ್ಬವಾಗಿ ಆಚರಣೆಗೊಳ್ಳುತ್ತದೆ. ಈ ಮೂಲಕ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರಿಗೆ ನಿಜವಾದ ಗೌರವ ಸಲ್ಲಿಸಿದಂತಾಗುತ್ತದೆ ಎಂದು ಹೇಳಿದರು.

ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಚೋರನಹಳ್ಳಿ ಶಿವಣ್ಣ ಅಧ್ಯಕ್ಷತೆ ವಹಿಸಿದ್ದರು. ಪತ್ರಕರ್ತ ಬಿ.ಎಂ.ಹನೀಫ್ ವಿಷಯ ಮಂಡಿಸಿದರು. ರಂಗಾಯಣ ಮಾಜಿ ನಿರ್ದೇಶಕ ಹೆಚ್.ಜನಾರ್ಧನ್ (ಜನ್ನಿ), ಕರ್ನಾಟಕ ರಾಜ್ಯ ನಾಯಕ ಯುವಸೇನೆ ರಾಜ್ಯಾಧ್ಯಕ್ಷ ದೇವರಾಜ್ ಟಿ.ಕಾಟೂರು ಮುಖ್ಯ ಅತಿಥಿಗಳಾಗಿದ್ದರು. ನಟರಾಜ್ ಶಿವಣ್ಣ, ಪರಂಜ್ಯೋತಿ ಇನ್ನಿತರರು ಉಪಸ್ಥಿತರಿದ್ದರು.

'ದೊಡ್ಡಹಟ್ಟಿ ಬೋರೇಗೌಡ' ಚಿತ್ರಕ್ಕೆ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ಪ್ರಶಸ್ತಿ

ಚಿತ್ರದ ಪೋಸ್ಟರ್ ಬಿಡುಗಡೆಗೊಳಿಸಿದ ಹಿರಿಯ ಸಾಹಿತಿ ಬನ್ನೂರು ಕೆ.ರಾಜು



ಮೈಸೂರು, ಜ.31(ಪಿಎಂ)– 'ದೊಡ್ಡಹಟ್ಟಿ ಬೋರೇಗೌಡ' ಸಿನಿಮಾ '13ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ'ದಲ್ಲಿ ಕರ್ನಾಟಕ ಚಲನಚಿತ್ರ ಅಕಾಡೆಮಿಯ 2021ನೇ ಸಾಲಿನ ಪ್ರಥಮ 'ಅತ್ಯುತ್ತಮ ಕನ್ನಡ ಸಿನಿಮಾ ಪ್ರಶಸ್ತಿ'ಗೆ ಭಾಜನವಾಗಿದ್ದು, ಎಲ್ಲಾ ಹೊಸಬರೇ ಇರುವ ತಂಡದಿಂದ ನಿರ್ಮಾಣಗೊಂಡ ಈ ಸಿನಿಮಾಗೆ ಇಂತಹ ಪ್ರತಿಷ್ಠಿತ ಪ್ರಶಸ್ತಿ ಲಭಿಸಿರುವುದು ಸಾಮಾನ್ಯ ಸಂಗತಿಯಲ್ಲ ಎಂದು ಹಿರಿಯ ಸಾಹಿತಿ ಬನ್ನೂರು ಕೆ.ರಾಜು ಮೆಚ್ಚುಗೆ ವ್ಯಕ್ತಪಡಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಚಿತ್ರದ ಪೋಸ್ಟರ್ ಬಿಡುಗಡೆಗೊಳಿಸಿ ಮಾತನಾಡಿದ ಅವರು, 95 ಚಿತ್ರಗಳ ಪೈಕಿ 'ದೊಡ್ಡಹಟ್ಟಿ ಬೋರೇಗೌಡ' ಸಿನಿಮಾ ಇಂತಹ ಪ್ರತಿಷ್ಠಿತ ಪ್ರಶಸ್ತಿಗೆ ಭಾಜನವಾಗಿದೆ. ಚಿತ್ರದಲ್ಲಿ ಕೆಲಸ ಮಾಡಿದವರು ಹೊಸಬರಾದರೂ ಅತ್ಯಂತ ಕೌಶಲ್ಯ, ಪರಿಶ್ರಮದೊಂದಿಗೆ ಕೆಲಸ ಮಾಡಿದ ಹಿನ್ನೆಲೆಯಲ್ಲಿ ಪ್ರಶಸ್ತಿ ಸಂದಿದೆ. ಈ ಸಿನಿಮಾದ ಬಹುಪಾಲು ಕಲಾವಿದರು ಮೈಸೂರಿನವರೇ ಎಂಬುದು ಹೆಮ್ಮೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಈ ಚಿತ್ರದ ನಿರ್ದೇಶಕ ಕೆ.ಎಂ.ರಘು ಈಗಾಗಲೇ ತರ್ಲೆ ವಿಲೇಜ್, ಪರಸಂಗ ಚಿತ್ರಗಳನ್ನು ಮಾಡಿ ಯಶಸ್ವಿಯಾಗಿದ್ದಾರೆ. ಹಳ್ಳಿಯಲ್ಲಿ ಬಡವರಿಗೆ ಸರ್ಕಾರದಿಂದ ನೀಡುವ ಆಶ್ರಯ ಮನೆ ಪಡೆಯಲು ವ್ಯಕ್ತಿಯೊಬ್ಬ ಪರಿತಪಿಸುವ ಕಥೆಯನ್ನು ಸಿನಿಮಾ ಹೊಂದಿದ್ದು, ಆ ಮೂಲಕ ಸಮಾಜದಲ್ಲಿನ ಸಂಕಷ್ಟದ ಮೇಲೆ ಚಿತ್ರ ಬೆಳಕು ಚೆಲ್ಲಿದೆ ಎಂದು ತಿಳಿಸಿದರು.

ಸಿನಿಮಾ ಜನಸಮುದಾಯ ತಲುಪುವ ಶಕ್ತಿಯುತ ಮಾಧ್ಯಮ. ಅದರ ಮೂಲಕ ಸಮಾಜಕ್ಕೆ ಸಂದೇಶ ನೀಡುವುದು ಬಹುಮುಖ್ಯ. ಅಂತಹ ಕೆಲಸವನ್ನು ಈ ಚಿತ್ರತಂಡ ಮಾಡಿದೆ. ಚಿತ್ರವು ಸಹಜವಾಗಿ ಮೂಡಿಬಂದಿದ್ದು, ಚಿತ್ರತಂಡಕ್ಕೆ ನಾಡಿನ ಜನತೆ ಪರವಾಗಿ ಅಭಿನಂದಿಸುತ್ತೇನೆ ಎಂದರು.

ಚಿತ್ರದ ನಿರ್ದೇಶಕ ಕೆ.ಎಂ.ರಘು ಮಾತನಾಡಿ, ಬೀರಿಹುಂಡಿ ಗ್ರಾಮದ ಶಿವಣ್ಣ ಬೋರೇಗೌಡನ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಸ್ಥಳೀಯ ಕಲಾವಿದರಾದ ಗೀತಾ, ಲಾವಣ್ಯ, ಕಲಾರತಿ ಮಹದೇವ್, ಕಾತ್ಯಾಯಿನಿ ಸೇರಿದಂತೆ ಮತ್ತಿತರರು ಚಿತ್ರದಲ್ಲಿ ಅಭಿನಯಿಸಿದ್ದಾರೆ. ಫೆಬ್ರವರಿಯಲ್ಲಿ ಸಿನಿಮಾ ಬಿಡುಗಡೆ ಮಾಡಲು ನಿರ್ಧಾರ ಮಾಡಿದ್ದೇವೆ ಎಂದು ಹೇಳಿದರು. ಇದಕ್ಕೂ ಮುನ್ನ ಚಿತ್ರದ ವಿಡಿಯೋ ಸಾಂಗ್ ಅನ್ನು ಚಿತ್ರದ ಹಂಚಿಕೆದಾರರಾದ ಅನ್ನಪೂರ್ಣ ವೆಂಕಟೇಶ್ ಬಿಡುಗಡೆಗೊಳಿಸಿದರು. ಚಿತ್ರದಲ್ಲಿ ನಟಿಸಿರುವ ಶಿವಣ್ಣ ಬೀರಿಹುಂಡಿ, ಗೀತಾ, ಮಹದೇವ್, ನಿರ್ಮಾಪಕ ಕೆ.ಎಂ. ಲೋಕೇಶ್ ಮತ್ತಿತರರು ಹಾಜರಿದ್ದರು.

ಮಂಡ್ಯಕ್ಕೆ ಹೋಗುವುದಾಗಿ ಹೇಳಿದ್ದ ವ್ಯಕ್ತಿ ನಾಪತ್ತೆ



ಮಂಡ್ಯ,ಜ.31– ಮಂಡ್ಯಕ್ಕೆ ಹೋಗುವುದಾಗಿ ಮನೆಯಿಂದ ತೆರಳಿದ್ದ ವ್ಯಕ್ತಿ ಕಾಣೆಯಾಗಿರುವ ಬಗ್ಗೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಿಲ್ಲೆಯ ಕಸಬಾ ಹೋಬಳಿ ಬೂದನೂರು ಗ್ರಾಮದ ಬಿ.ಬಿ.ಶಿವರಾಮು (59) ಕಾಣೆಯಾದವರು. ವ್ಯವಸಾಯ ಮಾಡಿಕೊಂಡಿದ್ದ ಇವರು ಜ.11ರಂದು ಮಧ್ಯಾಹ್ನ 1.30ರ ಸಮಯದಲ್ಲಿ ಮಂಡ್ಯಕ್ಕೆ ಹೋಗುವುದಾಗಿ ಮನೆಯಿಂದ ಹೊರ ಹೋಗಿದ್ದರು. ಆದರೆ ರಾತ್ರಿಯಾದರೂ ಮನೆಗೆ ಬಾರದಿದ್ದರಿಂದ ಎಲ್ಲೆಡೆ ಹುಡುಕಾಟ ನಡೆಸಿದ್ದು ಈವರೆಗೆ ಎಲ್ಲಿಯೂ ಸುಳಿವು ದೊರೆತಿಲ್ಲ. ಮನೆಯಿಂದ ತೆರಳಿದಾಗ ಶಿವರಾಮು ಬಿಳಿ ಬಣ್ಣದ ತುಂಬು ತೋಳಿನ ಶರ್ಟ್, ನೀಲಿ ಬಣ್ಣದ ಲುಂಗಿ, ಹಸಿರು ಬಣ್ಣದ ಟವಲ್ ಧರಿಸಿದ್ದರು ಎಂದು ಅವರ ಪತ್ನಿ ಮೀನಾಕ್ಷಿ ಅವರು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಶಿವರಾಮು ಅವರ ಬಗ್ಗೆ ಸುಳಿವು ದೊರೆತಲ್ಲಿ ಮೊ.ಸಂ.9611676627 ಅಥವಾ ಸಮೀಪದ ಪೊಲೀಸ್ ಠಾಣೆಗೆ ಮಾಹಿತಿ ನೀಡುವಂತೆ ಪ್ರಕಟಣೆಯಲ್ಲಿ ಕೋರಲಾಗಿದೆ.

ಫೆ.3ರಿಂದ 9ರವರೆಗೆ ರಾಷ್ಟ್ರೀಯ ಭಾವೈಕ್ಯತಾ ಶಿಬಿರ

ರಾಜ್ಯವೂ ಸೇರಿದಂತೆ ವಿವಿಧ ರಾಜ್ಯಗಳ ನಾನಾ ವಿವಿಗಳ ಎನ್‌ಎಸ್‌ಎಸ್ ಸ್ವಯಂಸೇವಕರು ಭಾಗಿ



ಮೈಸೂರು, ಜ.31(ಪಿಎಂ)– ರಾಜ್ಯ ಎನ್‌ಎಸ್‌ಎಸ್ ಕೋಶ, ರಾಜ್ಯ ಸರ್ಕಾರದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಯೋಗದಲ್ಲಿ ಮೈಸೂರು ವಿವಿಯ ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ವತಿಯಿಂದ ಫೆ.3ರಿಂದ 9ರವರೆಗೆ 'ರಾಷ್ಟ್ರೀಯ ಭಾವೈಕ್ಯತಾ ಶಿಬಿರ' ಏರ್ಪಡಿಸಲಾಗಿದೆ ಎಂದು ಮೈಸೂರು ವಿವಿ ಎನ್‌ಎಸ್‌ಎಸ್ ಕಾರ್ಯಕ್ರಮ ಸಂಯೋಜನಾಧಿಕಾರಿ ಡಾ.ಎಂ.ಬಿ.ಸುರೇಶ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸರಸ್ವತಿಪುರಂನ ಸಾಹುಕಾರ್ ಚೆನ್ನಯ್ಯ ರಸ್ತೆಯಲ್ಲಿರುವ ಮೈಸೂರು ವಿವಿ ಎನ್‌ಎಸ್‌ಎಸ್ ಭವನದಲ್ಲಿ ಶಿಬಿರ ನಡೆಯಲಿದೆ. ಫೆ.3ರಂದು ಬೆಳಗ್ಗೆ 11ಕ್ಕೆ ರಾಜ್ಯ ಎನ್‌ಎಸ್‌ಎಸ್ ಕೋಶದ ಅಧಿಕಾರಿ ಪ್ರತಾಪ್ ಲಿಂಗಯ್ಯ ಶಿಬಿರ ಉದ್ಘಾಟಿಸಲಿದ್ದು, ಮೈಸೂರು ವಿವಿ ಪ್ರಭಾರ ಕುಲಪತಿ ಪ್ರೊ.ಹೆಚ್.ರಾಜಶೇಖರ್ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಯಾಗಿ ವಿವಿ ಕುಲಸಚಿವೆ ವಿ.ಆರ್. ಶೈಲಜಾ ಪಾಲ್ಗೊಳ್ಳಲಿದ್ದಾರೆ ಎಂದರು.

ಶಿಬಿರದಲ್ಲಿ ತಮಿಳುನಾಡು, ಮಹಾರಾಷ್ಟ್ರ, ತೆಲಂಗಾಣ, ಆಂಧ್ರಪ್ರದೇಶ, ಕೇರಳ ಮತ್ತು ಕರ್ನಾಟಕ ರಾಜ್ಯದ ವಿವಿಧ ವಿವಿಗಳ ಸುಮಾರು 180 ಎನ್‌ಎಸ್‌ಎಸ್ ಸ್ವಯಂಸೇವಕರು, ಕಾರ್ಯಕ್ರಮ ಅಧಿಕಾರಿಗಳು ಭಾಗವಹಿಸಲಿದ್ದಾರೆ. ರಾಷ್ಟ್ರೀಯ ಭಾವೈಕ್ಯತೆಗೆ ಸಂಬಂಧಿಸಿದಂತೆ ವಿಶೇಷ ಉಪನ್ಯಾಸ, ಪ್ರಹಸನ, ವೇಷಭೂಷಣ, ಚರ್ಚಾ ಸ್ಪರ್ಧೆ ಸೇರಿದಂತೆ ಮತ್ತಿತರ ಕಾರ್ಯಕ್ರಮಗಳು ಶಿಬಿರದಲ್ಲಿ ನಡೆಯಲಿವೆ. ಫೆ.5ರಂದು ಸ್ಥಳೀಯವಾಗಿ ಪ್ರವಾಸ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಪ್ರತಿದಿನ ಸಂಜೆ 4ರಿಂದ 5.30ರವರೆಗೆ ಒಂದೊಂದು ವಿಷಯದ ಬಗ್ಗೆ ವಿಶೇಷ ಉಪನ್ಯಾಸ ಏರ್ಪಡಿಸಲಾಗಿದೆ. ಫೆ.3ರಂದು 'ವ್ಯಕ್ತಿತ್ವ ವಿಕಸನ' ಕುರಿತು ಅಂತಾರಾಷ್ಟ್ರೀಯ ತರಬೇತುದಾರ ಆರ್.ಎ. ಚೇತನ್‌ರಾಮ್ ಮಾತನಾಡಲಿದ್ದಾರೆ. ಫೆ.4ರಂದು 'ಜಾತ್ಯಾತೀತತೆ' ಕುರಿತು ಚಿಂತಕ ಪ್ರೊ.ನಟರಾಜ್ ಹುಳಿಯಾರ್, ಫೆ.6ರಂದು 'ಯುವ ಜನತೆ ಮತ್ತು ಸ್ವಾಮಿ ವಿವೇಕಾನಂದರು' ಕುರಿತು ತುಮಕೂರು ರಾಮಕೃಷ್ಣ ಆಶ್ರಮದ ಅಧ್ಯಕ್ಷ ಶ್ರೀ ಸ್ವಾಮಿ ವೀರೇಶಾನಂದ ಸರಸ್ವತಿ ಮಹಾರಾಜ್, ಫೆ.7ರಂದು 'ಗಾಂಧಿ ಚಿಂತನೆಗಳು' ಕುರಿತು ಬೆಂಗಳೂರು ಗಾಂಧಿ ಭವನದ ಅಧ್ಯಕ್ಷ ನಾಡೋಜ ಡಾ.ವೂಡೇ ಪಿ.ಕೃಷ್ಣ ಮತ್ತು ಫೆ.8ರಂದು 'ರಾಷ್ಟ್ರೀಯ ಭಾವೈಕ್ಯತೆಯ ಪ್ರಾಮುಖ್ಯತೆ' ಕುರಿತು ಮೈಸೂರು ವಿವಿ ಎನ್‌ಎಸ್‌ಎಸ್ ಸಲಹಾ ಸಮಿತಿ ಸದಸ್ಯ ಪ್ರೊ.ಕೆ.ಎಂ.ವೀರಯ್ಯ ಮಾತನಾಡಲಿದ್ದಾರೆ ಎಂದು ವಿವರಿಸಿದರು.

ಫೆ.9ರಂದು ಬೆಳಗ್ಗೆ 11ಕ್ಕೆ ಶಿಬಿರದ ಸಮಾರೋಪ ಸಮಾರಂಭ ಹಮ್ಮಿಕೊಂಡಿದ್ದು, ಭಾರತ ಸರ್ಕಾರದ ಎನ್‌ಎಸ್‌ಎಸ್ ಪ್ರಾದೇಶಿಕ ನಿರ್ದೇಶಕ ಕೆ.ವಿ.ಖಾದ್ರಿ ನರಸಿಂಹಯ್ಯ ಸಮಾರೋಪ ಭಾಷಣ ಮಾಡಲಿದ್ದಾರೆ. ಮುಖ್ಯ ಅತಿಥಿಯಾಗಿ ಬೆಂಗಳೂರು ಗಾಂಧಿ ಭವನದ ಉಪಾಧ್ಯಕ್ಷ ಪ್ರೊ.ಜಿ.ಬಿ. ಶಿವರಾಜು ಭಾಗವಹಿಸಲಿದ್ದು, ವಿವಿ ಕುಲಸಚಿವೆ ವಿ.ಆರ್.ಶೈಲಜಾ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ತಿಳಿಸಿದರು. ಮೈಸೂರು ವಿವಿ ಎನ್‌ಎಸ್‌ಎಸ್ ಸಲಹಾ ಸಮಿತಿ ಸದಸ್ಯ ಪ್ರೊ.ಕೆ.ಎಂ.ವೀರಯ್ಯ, ಮೈಸೂರು ವಿವಿ ಸಂಜೆ ಕಾಲೇಜು ಎನ್‌ಎಸ್‌ಎಸ್ ಕಾರ್ಯಕ್ರಮ ಅಧಿಕಾರಿ ಡಾ.ನಿಂಗರಾಜು ಗೋಷ್ಠಿಯಲ್ಲಿದ್ದರು.

ಹುತಾತ್ಮ ದಿನದ ಅಂಗವಾಗಿ ಮಂದಿರ, ಮಸೀದಿ, ಚರ್ಚ್ ಮುಂದೆ ಸಾಗಿದ 'ಸಹಬಾಳ್ವೆಗಾಗಿ ಸೌಹಾರ್ದ ನಡಿಗೆ'



ಮೈಸೂರು, ಜ.31(ಆರ್‌ಕೆಬಿ)– ಹುತಾತ್ಮರ ದಿನದ ಅಂಗವಾಗಿ ಸೌಹಾರ್ದ ಕರ್ನಾಟಕ ಮೈಸೂರು ವತಿಯಿಂದ ಮೈಸೂರಿನ ಪ್ರಮುಖ ರಸ್ತೆಗಳಲ್ಲಿ ಸಹಬಾಳ್ವೆಗಾಗಿ ಸೌಹಾರ್ದ ನಡಿಗೆ ನಡೆಯಿತು.

ಮೈಸೂರಿನ ಕೋಟೆ ಆಂಜನೇಯ ದೇವಸ್ಥಾನದ ಆವರಣದಿಂದ ಹೊರಟ ನಡಿಗೆ ಅಶೋಕ ರಸ್ತೆಯ ಆಜಂ ಮಸೀದಿ ಎದುರಿನಿಂದ ಸಂತ ಫಿಲೋಮಿನಾ ಚರ್ಚ್‌ವರೆಗೆ ಸಾಗಿತು. ನಡಿಗೆ ವೇಳೆ ಉದ್ದಕ್ಕೂ ಸಾರ್ವಜನಿಕರಿಗೆ ಕರಪತ್ರ ಹಂಚಿದರು. ಚರ್ಚ್ ಬಳಿ ಬಹಿರಂಗ ಸಭೆ ನಡೆಸಿ, ಮುಖಂಡರು ಮಾತನಾಡಿದರು.


ಈ ಸಂದರ್ಭದಲ್ಲಿ ಮಾತನಾಡಿದ ಪ್ರತಿಪರ ಮುಖಂಡರು, 1948ರ ಜ.30ರಂದು ದೆಹಲಿಯ ಬಿರ್ಲಾ ಮಂದಿರದಲ್ಲಿ ಸರ್ವಧರ್ಮ ಪ್ರಾರ್ಥನೆಯ ವೇಳೆ ನಾಥೂರಾಮ್ ಗೂಡ್ಸೆ ಎಂಬಾತ ಗಾಂಧೀಜಿಯವರನ್ನು ಗುಂಡಿಕ್ಕಿ ಕೊಂದು ಹಾಕಿದ. ನಂತರ ಆತನ್ನು ಗಲ್ಲಿಗೇರಿಸಲಾಯಿತು. ಅಲ್ಲಿಂದೀಚೆಗೆ ಜ.30 ಅನ್ನು ಹುತಾತ್ಮ ದಿನವನ್ನಾಗಿ ಆಚರಿಸಲಾಗುತ್ತಿದೆ. ಬ್ರಿಟಿಷ್ ವಸಾಹತುಶಾಹಿ ವಿರೋಧಿ ಹೋರಾಟವನ್ನು ಗೆಲ್ಲಬೇಕಾದರೆ ಹಿಂದೂ, ಮುಸ್ಲಿಮರ ಸೌಹಾರ್ದ ಮತು ಐಕ್ಯತೆ ಬಹುಮುಖ್ಯವೆಂದು ಬಲವಾಗಿ ನಂಬಿದ್ದ ಗಾಂಧಿ ಬ್ರಿಟಿಷರ ವಿಭಜಕ ರಾಜಕಾರಣ ಮತ್ತು ಸಹಜವಾಗಿಯೇ ಅದಕ್ಕೆ ಪೂರಕವಾಗಿ ವರ್ತಿಸುತ್ತಿದ್ದ ಹಿಂದೂ ಕೋಮುವಾದಿ ಸಂಘಟನೆಗಳ ಕೆಂಗಣ್ಣಿಗೆ ಗುರಿಯಾಗಿದ್ದರು. ಕೊನೆಗೆ ಅವರು ಗುಂಡಿಗೆ ಬಲಿಯಾದರು. ಇದು ಅದೇ ಕೊಲೆಗಾರರ ವಾರಸುದಾರರು ದೇಶದ ಎಲ್ಲೆಡೆ ನಿರಾತಂಕವಾಗಿ ಓಡಾಡುತ್ತಿದ್ದಾರೆ. ಅವನನ್ನು ಆರಾಧಿಸುತ್ತಿರುವುದು ಮತ್ತು ಅದಕ್ಕೆ ಆಳುವವರು ಮೌನ ವಹಿಸಿರುವುದು ಆತಂಕಾರಿ ಸಂಗತಿಯಾಗಿದೆ. ಸ್ವಾತಂತ್ರ್ಯಾನಂತರ ಅಲ್ಪಸಂಖ್ಯಾತ ಮುಸ್ಲಿಮರು ಮತ್ತು ಕ್ರೈಸ್ತರನ್ನು ಬೆದರಿಸುವ, ಅವರ ಸಂವಿಧಾನದತ್ತ ಹಕ್ಕುಗಳ ಮೇಲೆ ಸತತ ದಾಳಿ ಮಾಡುತ್ತಾ ಬರಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅವರನ್ನು ದೇಶದ ಶತ್ರುಗಳೆಂದು ಬಿಂಬಿಸುವ ಕೋಮುವಾದಿ ಶಕ್ತಿಗಳು ಮುನ್ನೆಲೆಗೆ ಬಂದಿವೆ. ಇದು ಗಾಂಧಿಯವರು ದುಡಿದ ಮೌಲ್ಯಗಳು ಮತ್ತು ಭಾರತದ ಸಂವಿಧಾನದ ಮೂಲ ಆಶಯಗಳ ವಿರುದ್ಧವಾಗಿದೆ. ಇದು ಎಲ್ಲಾ ಪ್ರಜಾಸತ್ತಾತ್ಮಕ ಮತ್ತು ಭಾರತದ ಸಂವಿಧಾನದಲ್ಲಿ ನಂಬಿಕೆ ಇರುವವರಿಗೆ ಆತಂಕದ ವಿಷಯವೇ ಆಗಿದೆ ಎಂದರು.

ನಂತರ ಸಂತ ಫಿಲೋಮಿನಾ ಚರ್ಚ್ ಎದುರು ಸಮಾರೋಪಗೊಂಡ ನಡಿಗೆಯಲ್ಲಿ 'ಪ್ರೀತಿಯ ಗಾಳಿ ಬೀಸುತ್ತಿದೆ ಎಲ್ಲ ಮೊಹಲ್ಲಾಗಳಲ್ಲಿ...' ಎಂಬ ಸೌಹಾರ್ದ ಗೀತೆ ಹಾಡಿದರು. ಸಂವಿಧಾನ ಪೀಠಿಕೆ ಓದಿ ಪ್ರತಿಜ್ಞೆ ಮಾಡಿದರು. ಬಳಿಕ ಎಲ್ಲರೂ ಜಾತಿ, ಧರ್ಮಗಳನ್ನು ಮೀರಿ ಸಹಬಾಳ್ವೆಯಿಂದ ಬಾಳುವ ಪ್ರಮಾಣ ಮಾಡಿದರು.

ನಡಿಗೆಯಲ್ಲಿ ಸೌಹಾರ್ದ ಕರ್ನಾಟಕದ ಜಗದೀಶ್ ಸೂರ್ಯ ಜಿ.ಪಿ.ಬಸವರಾಜು ಪ್ರೊ.ಪಿ.ವಿ.ನಂಜರಾಜ ಅರಸು, ಶಬ್ಬೀರ್ ಮುಸ್ತಫಾ, ಜನಾರ್ದನ್ (ಜನ್ನಿ), ಎಂ.ಎಫ್.ಕಲೀಂ, ಅಬ್ದುಲ್ ಕದೀರ್, ಡಾ.ಬಸವಲಿಂಗಯ್ಯ, ಸುಹೇಲ್ ಬೇಗ್, ನೂರ್ ಮರ್ಚೆಂಟ್, ಬಸವಲಿಂಗಮೂರ್ತಿ ಸ್ವಾಮೀಜಿ, ನಾ.ದಿವಾಕರ್, ಸುಶೀಲಾ, ರತಿರಾವ್, ರಂಜಿತಾ, ಶೇಷಾದ್ರಿ, ಜಯರಾಮ್ ಇನ್ನಿತರರು ಉಪಸ್ಥಿತರಿದ್ದರು.

ಡಿ.ಕೆ.ಶಿವಕುಮಾರ್ ವಿರುದ್ಧ ಆರೋಪಕ್ಕೆ ಕಾಂಗ್ರೆಸ್ ಖಂಡನೆ



ಮೈಸೂರು,ಜ.31(ಎಂಟಿವೈ)– ಮಾಜಿ ಸಚಿವ ರಮೇಶ್ ಜಾರಕಿಹೊಳಿ ತನ್ನ ಅಕ್ರಮ ಮುಚ್ಚಿಕೊಳ್ಳಲು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ವಿರುದ್ಧ ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆರೋಪಿಸಿದರು.

ಮೈಸೂರಿನ ಕಾಂಗ್ರೆಸ್ ಕಚೇರಿಯಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿ.ಕೆ.ಶಿವಕುಮಾರ್ ವಿರುದ್ಧ ಗಂಭೀರ ಆರೋಪ ಮಾಡಿರುವ ರಮೇಶ್ ಜಾರಕಿಹೊಳಿ ಓರ್ವ ಮೋಸಗಾರ. ಆತನ ನಿಜವಾದ ಹೆಸರು ರಾಮಪ್ಪ ಲಕ್ಕಪ್ಪ ಜಾರಕಿಹೊಳಿ ಎಂದಾಗಿದ್ದು, ಕೋರ್ಟ್‌ನಲ್ಲಿ ಹೆಸರು ಬದಲಾವಣೆ ಮಾಡಿಕೊಳ್ಳದೆ ತಾನೇ ಹೆಸರು ತಿದ್ದಿಕೊಂಡು ಅಕ್ರಮದಲ್ಲಿ ಭಾಗಿಯಾಗಿದ್ದಾರೆ. ಡಿ.ಕೆ.ಶಿವಕುಮಾರ್ ಕಾಲಿಗೆ ಕಿತ್ತೋದ ಚಪ್ಪಲಿ ಹಾಕಿಕೊಂಡು ಬಂದಿದ್ದ ಎಂದು ಟೀಕಿಸಿದ್ದಾರೆ. ಆದರೆ, ರಮೇಶ್ ಜಾರಕಿಹೊಳಿ ಒಂದೊಂದು ಕಾಲಿಗೆ ಒಂದೊಂದು ಬಣ್ಣದ ಚಪ್ಪಲಿ ಹಾಕಿಕೊಂಡಿರುವ ಬಗ್ಗೆ ನಮ್ಮ ಬಳಿ ದಾಖಲೆಗಳು ಇದ್ದು ಸದ್ಯದಲ್ಲಿಯೇ ಬಿಡುಗಡೆ ಮಾಡುತ್ತೇನೆ ಎಂದರು.

ವಿವಿಧ ಬ್ಯಾಂಕ್‌ಗಳಲ್ಲಿ 850 ಕೋಟಿ ರೂ. ಸಾಲ ಮಾಡಿ ತನ್ನ ಸಂಸ್ಥೆಯನ್ನು ದಿವಾಳಿ ಎಂದು ಘೋಷಿಸಿಕೊಂಡಿದ್ದಾರೆ. ಆದರೆ, ಸದಾಶಿವನಗರದಲ್ಲಿ ಕೋಟ್ಯಾಂತರ ರೂ. ಬೆಲೆಬಾಳುವ ಮನೆ ಹೊಂದಿದ್ದಾರೆ. ಜಲಸಂಪನ್ಮೂಲ ಸಚಿವನಾಗಿದ್ದಾಗ ಓರ್ವ ಗುತ್ತಿಗೆದಾರನಿಗೆ ಟೆಂಡರ್ ನೀಡಲು ಮುಂಬೈನಲ್ಲಿ 100 ಕೋಟಿ ಬೆಲೆಯ ನಿವೇಶನ ಪಡೆದಿದ್ದಾರೆ. ನಿವೇಶನ ನೀಡಿದ ಗುತ್ತಿಗೆದಾರ ಯಾರು? ಖಾನಾಪುರದಲ್ಲಿ 500 ಎಕರೆ ಜಾಗ ಬೇನಾಮಿ ಹೆಸರಲ್ಲಿದೆ. ಗೋಕಾಕ್‌ನಲ್ಲಿ 30 ಕೋಟಿ ವೆಚ್ಚದಲ್ಲಿ ಮನೆ ಕಟ್ಟುತ್ತಿದ್ದಾರೆ. ಕೆಲ ದಿನಗಳ ಹಿಂದೆ 4 ಕೋಟಿ ಬೆಲೆಬಾಳುವ ಕಾರು ಕೊಂಡುಕೊಂಡಿದ್ದಾರೆ. ದಿವಾಳಿಯಾಗಿರುವ ವ್ಯಕ್ತಿಯ ಬಳಿ ಇಷ್ಟೆಲ್ಲಾ ಆಸ್ತಿ ಇರಲು ಹೇಗೆ ಸಾಧ್ಯ? ಎಂದು ಪ್ರಶ್ನಿಸಿದರು.

ಇಂದು ಸಾಕ್ಷ್ಯಚಿತ್ರ ಪ್ರದರ್ಶನ

ಗುಜರಾತ್ ಗಲಭೆಗೆ ಸಂಬಂಧಿಸಿದಂತೆ ಪ್ರಧಾನಿ ನರೇಂದ್ರ ಮೋದಿ ಕುರಿತು ಬಿಬಿಸಿ ನಿರ್ಮಿಸಿರುವ ಸಾಕ್ಷ್ಯಚಿತ್ರವನ್ನು ಬುಧವಾರ ಕಾಂಗ್ರೆಸ್ ಕಚೇರಿಯಲ್ಲಿ ಪ್ರದರ್ಶಿಸುತ್ತೇವೆ. ಸಾಕ್ಷ್ಯಚಿತ್ರದಲ್ಲಿ ನೂರಕ್ಕೆ ನೂರು ಸತ್ಯವನ್ನೇ ಹೇಳಿದ್ದಾರೆ. ಜನರಿಗೆ ಸತ್ಯ ತಿಳಿಸುವ ಕೆಲಸ ಮಾಡುತ್ತೇವೆ.
– ಎಂ.ಲಕ್ಷ್ಮಣ್, ಕೆಪಿಸಿಸಿ ವಕ್ತಾರ

ಸಿದ್ದರಾಮಯ್ಯ ಅವರ ವಿರುದ್ಧ ಅಪಪ್ರಚಾರ ಸಲ್ಲ: ಸಿದ್ದರಾಮಯ್ಯ ಕೋಲಾರದಲ್ಲಿ ನಿಲ್ಲಲು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ಆದರೆ ಬಿಜೆಪಿ ಹಾಗೂ ಜೆಡಿಎಸ್ ಸಿದ್ದರಾಮಯ್ಯ ದಲಿತರಿಗೆ ಅನ್ಯಾಯ ಮಾಡಿದ್ದಾರೆ ಎಂದು ಭಿತ್ತಿಪತ್ರ ಅಂಟಿಸುತ್ತಿದ್ದಾರೆ. ಇವರು ದಲಿತರಿಗೆ ಒಂದೇ ಒಂದು ಕಾರ್ಯಕ್ರಮ ಕೊಟ್ಟಿಲ್ಲ. ಖರ್ಗೆ, ಪರಮೇಶ್ವರ್, ಮುನಿಯಪ್ಪ ಅವರನ್ನು ಸೋಲಿಸಿದ್ದು ಬಿಜೆಪಿ, ಜೆಡಿಎಸ್. ಹಣದ ಹೊಳೆ ಹರಿಸಿ ಈ ನಾಯಕರನ್ನು ಸೋಲಿಸಿ ಸಿದ್ದರಾಮಯ್ಯ ತಲೆಗೆ ಕಟ್ಟುತ್ತಿದ್ದಾರೆ. ಏನೇ ತಂತ್ರ ರೂಪಿಸಿದರು ಕೋಲಾರದಲ್ಲಿ ಸಿದ್ದರಾಮಯ್ಯ ಗೆದ್ದೇ ಗೆಲ್ಲುತ್ತಾರೆ ಎಂದರು.

ಕಾಂಗ್ರೆಸ್ ನಗರ ಪ್ರಧಾನ ಕಾರ್ಯದರ್ಶಿ ಶಿವಣ್ಣ ಜಿ.ಪಂ ಮಾಜಿ ಅಧ್ಯಕ್ಷ ರಾಮು, ಮಾಧ್ಯಮ ವಕ್ತಾರ ಕೆ.ಮಹೇಶ್, ಗಿರೀಶ್ ಇದ್ದರು.

ತಿ.ನರಸೀಪುರ ಬಜೆಟ್ ಪೂರ್ವಭಾವಿ ಸಭೆ

ನಾಮಫಲಕ, ಸ್ವಾಗತ ಕಮಾನು ನಿರ್ಮಾಣಕ್ಕೆ ನಿರ್ಧಾರ

ತಿ.ನರಸೀಪುರ, ಜ.31– ಪಟ್ಟಣದ ಎಲ್ಲಾ ವಾರ್ಡ್‌ಗಳ ಮುಖ್ಯ ರಸ್ತೆಗಳಲ್ಲಿ ನಾಮಫಲಕ ಅಳವಡಿಸುವುದು. ಪಟ್ಟಣದ ಗಡಿ ರಸ್ತೆಗಳಲ್ಲಿ ಸ್ವಾಗತ ಕಮಾನು ನಿರ್ಮಿಸಲು ಪುರಸಭೆಯಲ್ಲಿ ನಡೆದ ಬಜೆಟ್ ಪೂರ್ವಭಾವಿ ಸಭೆಯಲ್ಲಿ ನಿರ್ಧರಿಸಲಾಯಿತು.



ಪಟ್ಟಣದ ಪುರಸಭೆ ಸಭಾಂಗಣದಲ್ಲಿ 2023–24ನೇ ಸಾಲಿನ ಬಜೆಟ್ ಪೂರ್ವಭಾವಿ ಸಭೆಯಲ್ಲಿ ಪುರಸಭಾ ಸದಸ್ಯರು, ಸಂಘ ಸಂಸ್ಥೆಗಳ ಮುಖಂಡರು ಹಾಗೂ ಸಾರ್ವಜನಿಕರ ಸಮ್ಮುಖದಲ್ಲಿ ನಿರ್ಣಯ ಕೈಗೊಳ್ಳಲಾಯಿತು. ಸಭೆಯಲ್ಲಿ ಬಿಪಿಎಲ್ ಕಾರ್ಡುದಾರರು ಮೃತಪಟ್ಟ ವೇಳೆ ಶವ ಸಂಸ್ಕಾರಕ್ಕೆ ನೀಡುವ ಸಹಾಯಧನ ಹೆಚ್ಚಳ. ಪುರಸಭೆ ಖಾಲಿ ನಿವೇಶನ ಗುರುತಿಸಿ ವಾಣಿಜ್ಯ ಸಂಕೀರ್ಣ ನಿರ್ಮಿಸುವುದು, ಕಡು ಬಡವರಿಗೆ ವೈದ್ಯಕೀಯ ಸಹಾಯಧನ ನೀಡುವುದು. ಪುರಸಭಾ ವ್ಯಾಪ್ತಿಯ ಎಲ್ಲಾ ಉದ್ಯಾನವನಗಳ ಸಮಗ್ರ ಅಭಿವೃದ್ಧಿ, ತಾಲೂಕು ಕಚೇರಿ ಮುಂಭಾಗದ ಡಾ. ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ವರ್ಣಾಲಂಕಾರ, ಆಲಗೂಡು ಸ್ಮಶಾನ ಅಭಿವೃದ್ಧಿ ಪುರಸಭಾ ವ್ಯಾಪ್ತಿಯ ಎಲ್ಲಾ ಶೌಚಾಲಯ ದುರಸ್ತಿಗೊಳಿಸುವುದು. ಅಗತ್ಯವಿರುವ ಕಡೆ ಹೊಸ ಶೌಚಾಲಯಗಳ ನಿರ್ಮಾಣ, ವಾರ್ಡ್ ನಂ.14ರಲ್ಲಿ ಓವರ್ ಹೆಡ್ ಬಳಕೆಗೆ ಕ್ರಮ ವಹಿಸುವುದು. ಮುಖ್ಯ ವೃತ್ತಗಳ ಅಭಿವೃದ್ಧಿ ಹಾಗೂ ಮಹನೀಯರ ಹೆಸರು ನಮೂದಿಸುವುದು. ಬಾಬು ಜಗಜೀವನ್ ರಾವ್ ಪುತ್ಥಳಿ ಬಳಿ ಸಿಸಿಟಿವಿ, ಸಿಸಿ ಕ್ಯಾಮೆರಾ ಟ್ರ್ಯಾಲಿ ನಿರ್ಮಿಸುವುದು, ಎಲ್ಲಾ ಸಮುದಾಯ ಭವನಗಳ ಅಭಿವೃದ್ಧಿ, ಪುರಸಭೆಯ ವ್ಯಾಪ್ತಿಯ ಎಲ್ಲಾ ಅಂಗನವಾಡಿ ಹಾಗೂ ಶಾಲೆಗಳಲ್ಲಿ ಶೌಚಾಲಯ ನಿರ್ಮಾಣ, ಪಟ್ಟಣದ ಖಾಸಗಿ ಬಸ್ ನಿಲ್ದಾಣ ಹಾಗೂ ವಿದ್ಯೋದಯ ಕಾಲೇಜ್ ವೃತ್ತದಲ್ಲಿ ಟ್ರಾಫಿಕ್ ಸಿಗ್ನಲ್ ಅಳವಡಿಕೆ, ಪ್ರಕೃತಿ ವಿಕೋಪ ಸಂದರ್ಭಗಳಲ್ಲಿ ಜನರಿಗೆ ಪರಿಹಾರ ನೀಡುವುದು. ಸೇತುವೆಗಳ ಮೇಲೆ ಬೀದಿ ದೀಪ ಅಳವಡಿಕೆ ಹಾಗೂ ಪ್ರವಾಹ ಸಂದರ್ಭಗಳಲ್ಲಿ ಗಂಜಿ ಕೇಂದ್ರಗಳಿಗೆ ಪ್ರತ್ಯೇಕ ಕೊಠಡಿ ನಿರ್ಮಾಣ ಮಾಡುವುದು ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಚರ್ಚಿಸಿ ಅಗತ್ಯ ಕ್ರಮವಹಿಸುವ ಬಗ್ಗೆ ನಿರ್ಧರಿಸಲಾಯಿತು.

ಸಭೆಯಲ್ಲಿ ಮುಖ್ಯಾಧಿಕಾರಿ ಹೆಚ್.ಆರ್. ಬಸವರಾಜು, ಪುರಸಭಾಧ್ಯಕ್ಷ ಟಿ.ಎಂ. ನಂಜುಂಡಸ್ವಾಮಿ, ಉಪಾಧ್ಯಕ್ಷ ನಾಗರತ್ನ ಮಾದೇಶ್, ಸ್ಥಾಯಿ ಸಮಿತಿ ಅಧ್ಯಕ್ಷ ಅಹ್ಮದ್ ಸಯ್ಯದ್, ಸದಸ್ಯರಾದ ಮಂಜು ನಾಥ್, ತುಂಬಲ ಪ್ರಕಾಶ್, ಮಹದೇವಿ, ಗಣೇಶ್, ಚಿಕ್ಕಮಹದೇವ ಇನ್ನಿತರರಿದ್ದರು.

ಮುಂಜನಹಳ್ಳಿ ಗ್ರಾಪಂಗೆ ಶಶಿಕಲಾ ಉಪಾಧ್ಯಕ್ಷೆ

ಭೇರ್ಯ, ಜ.31– ಸಾಲಿಗ್ರಾಮ ತಾಲೂಕಿನ ಮುಂಜನಹಳ್ಳಿ ಗ್ರಾಪಂ ಉಪಾಧ್ಯಕ್ಷೆಯಾಗಿ ಶಶಿಕಲಾ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಉಪಾಧ್ಯಕ್ಷೆ ಶೋಭಾ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಮಂಗಳವಾರ ನಡೆದ ಚುನಾವಣೆಯಲ್ಲಿ ಶಶಿಕಲಾ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಪಶುಸಂಗೋಪನೆ ಇಲಾಖೆ ಸಹಾಯಕ ನಿರ್ದೇಶಕ ಡಾ.ಮಂಜುನಾಥ್ ಪ್ರಕಟಿಸಿದರು. ಈ ವೇಳೆ ಪಿಡಿಓ ಪ್ರತಾಪ್ ಇದ್ದರು.

ನೂತನ ಉಪಾಧ್ಯಕ್ಷೆ ಶಶಿಕಲಾ ಮಾತನಾಡಿ, ಕೊನೆ ಅವಧಿಗೆ ಉಪಾಧ್ಯಕ್ಷೆಯಾಗಲು ಸಹಕರಿಸಿದ ಶಾಸಕ ಸಾ.ರಾ.ಮಹೇಶ್ ಅಣ್ಣನವರಿಗೆ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದರು.

ಈ ವೇಳೆ ಗ್ರಾಪಂ ಅಧ್ಯಕ್ಷೆ ಉಮಾವತಿ, ಸದಸ್ಯರಾದ ರಾಮೇಗೌಡ, ಸತೀಶ್, ಶೋಭಾ, ದೇವಿಕಮ್ಮ, ಶಿಲ್ಪ, ಜಯಮ್ಮ, ಚಂದ್ರೇಗೌಡ, ಸ್ವಾಮಯ್ಯ, ಕಾಳಮ್ಮ, ಮುಖಂಡರಾದ ಅನೀಫ್‌ಗೌಡ, ಶಿವಣ್ಣನಾಯಕ, ಮಹದೇವ, ಪ್ರಸನ್ನ, ಮಹದೇವ, ರವಿಕುಮಾರ್, ಸ್ವಾಮಿಗೌಡ, ದಿನೇಶ್, ಬಲರಾಮೇಗೌಡ, ಪುಟ್ಟಸ್ವಾಮಿಗೌಡ ಸೇರಿದಂತೆ ಅನೇಕರಿದ್ದರು.



ಪಿರಿಯಾಪಟ್ಟಣ ತಾಲೂಕಿನ ಕಂಪಲಾಪುರ ಸರ್ಕಾರಿ ಪ್ರೌಢಶಾಲೆಯಲ್ಲಿ 74ನೇ ಗಣರಾಜ್ಯೋತ್ಸವವನ್ನು ಆಚರಿಸಲಾಯಿತು. ಈ ವೇಳೆ ದಾನಿಗಳಾದ ಕೆ.ಪಿ.ನಿಂಗರಾಜ್, ಶೈಲಜಾ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಎಸ್‌ಡಿಎಂಸಿ ಅಧ್ಯಕ್ಷ ಸದಾಶಿವ, ಮುಖ್ಯಶಿಕ್ಷಕ ಮಹದೇವಯ್ಯ, ಶಿಕ್ಷಕರಾದ ಜಗದೀಶ್, ಶಿವರಾಜ್, ಯಶ್ವಂತ್, ಶಿಕ್ಷಕಿಯರಾದ ಶ್ರೀಲಕ್ಷ್ಮಿ, ಸುಜಾತ, ಭಾಗ್ಯ, ಪೂರ್ಣಿಮಾ, ಗೀತಾ, ಎಸ್‌ಡಿಎಂಸಿ ಸದಸ್ಯರಾದ ರಾಜೇಶ್, ಜಯರಾಂ, ಶಹಜಾನ್, ರಾಣಿ ಮತ್ತಿತರರಿದ್ದರು.



ತಿ.ನರಸೀಪುರ ತಾಲೂಕಿನ ವಾಟಾಳು ಮಠಕ್ಕೆ ಭೇಟಿ ನೀಡಿದ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯೂ ಆದ ವಿಧಾನಪರಿಷತ್ ಮಾಜಿ ಸದಸ್ಯ ದಿ.ಟಿ.ಎನ್.ನರಸಿಂಹಮೂರ್ತಿ ಅವರ ಮೊಮ್ಮಗ ಎಂ.ಪ್ರಫುಲ್ ಕುಮಾರ್ ಅವರು ಸಿದ್ದಲಿಂಗಶಿವಾಚಾರ್ಯ ಸ್ವಾಮೀಜಿ ಅವರ ಆಶೀರ್ವಾದ ಪಡೆದರು. ಈ ವೇಳೆ ಮುಖಂಡರಾದ ಸುರೇಶ್, ಕೆ.ಪುಟ್ಟಯ್ಯ, ಆಶಾ ಇನ್ನಿತರರಿದ್ದರು.

ಎಂ. ರೇವಣ್ಣಸ್ವಾಮಿಗೆ ಪಿಹೆಚ್.ಡಿ



ಮೈಸೂರು, ಜ. 31– ಡಾ. ಎನ್.ಕೆ. ಲೋಲಾಕ್ಷಿ ಅವರ ಮಾರ್ಗದರ್ಶನದಲ್ಲಿ ಎಂ. ರೇವಣ್ಣಸ್ವಾಮಿ ಅವರು ಕನ್ನಡ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಸಾಧಕರನ್ನು ಗುರ್ತಿಸಿ ಸನ್ಮಾನಿಸುವುದು ಸಮಾಜದ ಕರ್ತವ್ಯ

ಶಾಸಕ ಬಿ.ಹರ್ಷವರ್ಧನ್



ನಂಜನಗೂಡು, ಜ.31– ತಮ್ಮ ಕ್ಷೇತ್ರಗಳಲ್ಲಿ ಸಾಮಾಜಿಕ ಸೇವೆಯಲ್ಲಿ ನಿರತರಾಗಿರುವ ಸಾಧಕರನ್ನು ಗುರ್ತಿಸಿ ಸನ್ಮಾನಿಸುವುದು ಸಮಾಜದ ಕರ್ತವ್ಯ ಎಂದು ಶಾಸಕ ಬಿ.ಹರ್ಷವರ್ಧನ್ ತಿಳಿಸಿದರು.

ತಾಲೂಕಿನ ಹರತಲೆ ಸಮುದಾಯ ಭವನದಲ್ಲಿ ಮುಖಂಡ ಚಿಕ್ಕರಂಗನಾಯ್ಕ ಅಭಿಮಾನಿಗಳ ಬಳಗ ಆಯೋಜಿಸಿದ್ದ ಸಾಧಕರಿಗೆ ಸನ್ಮಾನ ಮತ್ತು ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ತಾಲೂಕಿನ ಹಿಂದುಳಿದ ವರ್ಗಗಳ ಆಶಾಕಿರಣವಾಗಿದ್ದ ದಿ.ಡಿ.ಟಿ.ಜಯಕುಮಾರ್ ಹಾದಿಯಲ್ಲಿ ನಡೆಯುತ್ತ, ನಾಯಕ ಜನಾಂಗದ ನೋವು–ನಲಿವುಗಳಿಗೆ ಸ್ಪಂದಿಸುವ ಮೂಲಕ ತಾಲೂಕಿನ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಚಿಕ್ಕರಂಗನಾಯ್ಕ ಡಿ.ಟಿ.ಜಯಕುಮಾರ್ ಅವರ ಹೆಸರು ಉಳಿಸುವ ಕೆಲಸ ಮಾಡುತ್ತಿದ್ದಾರೆ. ತಮ್ಮ ಹುಟ್ಟುಹಬ್ಬದ ವೇಳೆ ಹರತಲೆ ಗ್ರಾಮದ ಅಂಗವಿಕಲ ಮಹಿಳೆ ರಾಜಮ್ಮನಿಗೆ 2.5 ಲಕ್ಷ ವೆಚ್ಚದಲ್ಲಿ ಮನೆ ನಿರ್ಮಿಸಿಕೊಟ್ಟಿದ್ದರು. ಅಲ್ಲದೆ ಹೆಗ್ಗಡಹಳ್ಳಿ ಗ್ರಾಪಂ ಅಧ್ಯಕ್ಷ ಉಪಾಧ್ಯಕ್ಷರನ್ನು ಅವಿರೋಧವಾಗಿ ಆಯ್ಕೆಗೊಳಿಸಲು ಶ್ರಮಿಸಿ ಎಲ್ಲಾ ವರ್ಗದ ಜನರಿಗೂ ಸಾಮಾಜಿಕ ನ್ಯಾಯ ಒದಗಿಸಿದ್ದಾರೆ. ಬಡವರ, ದೀನ ದಲಿತರ ಸೇವೆಯಿಂದ ಮಾತ್ರ ರಾಜಕೀಯ ಬದುಕಿನ ಸಾರ್ಥಕತೆ ಅಡಗಿದೆ. ಸಿಎಂ ಬಸವರಾಜ ಬೊಮ್ಮಾಯಿ ತಮ್ಮ ಕಾರ್ಯ ಒತ್ತಡದ ನಡುವೆ ಕ್ಷೇತ್ರಕ್ಕೆ ಆಗಮಿಸಿ 1691 ಮಂದಿಗೆ ಸಾಧನ, ಸಲಕರಣೆಗಳು ವಿತರಿಸುವ ಮೂಲಕ ಮೇಲ್ಪಂಕ್ತಿ ಹಾಕಿಕೊಟ್ಟರು. ನಿಮ್ಮ ಸೇವಾ ಕಾರ್ಯಗಳು ಮುಂದುವರೆಯಲಿ ಎಂದರು.

ಬಿಜೆಪಿ ಮುಖಂಡ ಚಿಕ್ಕರಂಗನಾಯ್ಕ ಮಾತನಾಡಿದರು. ಕಾರ್ಯಕ್ರಮದಲ್ಲಿ ಸಿಪಿಐ ಶಿವನಂಜಶೆಟ್ಟಿ, ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷೆ ಲತಾ ಹಾಗೂ ಕವಿ ಕಳಲೆ ಜವರನಾಯಕರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಮುಖಂಡರಾದ ಸೋಮಣ್ಣ, ರಾಜಣ್ಣ, ಶಿವಣ್ಣ, ಶ್ರೀನಿವಾಸರೆಡ್ಡಿ, ಗ್ರಾಪಂ ಅಧ್ಯಕ್ಷೆ ರತ್ನಮ್ಮ ಉಪಸ್ಥಿತರಿದ್ದರು.

ಅಕ್ರಮ ಮದ್ಯ ಮಾರಾಟದ ಬಗ್ಗೆ ಮಾಹಿತಿ ನೀಡಿ



ಕೆ.ಆರ್.ನಗರ, ಜ.31– ಸಾಲಿಗ್ರಾಮ ಮತ್ತು ಕೆ.ಆರ್.ನಗರ ಅವಳಿ ತಾಲೂಕಿನಲ್ಲಿ ಅಕ್ರಮ ಮದ್ಯ ಮಾರಾಟ, ಸಾಗಾಟ ಕಂಡು ಬಂದಲ್ಲಿ ಅಬಕಾರಿ ಇಲಾಖೆಗೆ ದೂರು ನೀಡಿ ಅಥವಾ ಕರೆ ಮಾಡಿ ಮಾಹಿತಿ ನೀಡಿ ಎಂದು ಹುಣಸೂರು ಉಪವಿಭಾಗದ ಅಬಕಾರಿ ಉಪ ಅಧೀಕ್ಷಕ ಕೆ.ಟಿ.ವಿಜಯ್ ಕುಮಾರ್ ತಿಳಿಸಿದರು.

ಪಟ್ಟಣದ ಅಬಕಾರಿ ಇಲಾಖೆ ವತಿಯಿಂದ 2022–23 ಸಾಲಿನಲ್ಲಿ ವಿವಿಧೆಡೆ ಅಕ್ರಮ ಮದ್ಯ ಮಾರಾಟ, ಸಾಗಾಟ ಪ್ರಕರಣದಲ್ಲಿ ವಶಪಡಿಸಿಕೊಂಡಿದ್ದ ಮದ್ಯ ನಾಶಪಡಿಸಿ ಅವರು ಮಾತನಾಡಿದರು.

ಅವಳಿ ತಾಲೂಕಿನಲ್ಲಿ ಸಮಾಜಘಾತಕ ಶಕ್ತಿಗಳು ಮತ್ತು ಅಕ್ರಮ ಚಟುವಟಿಕೆ ನಡೆಸುವವರ ಬಗ್ಗೆ ನಾಗರಿಕರು ಸರ್ಕಾರಕ್ಕೆ ನಿರ್ಭೀತಿಯಿಂದ ಮಾಹಿತಿ ನೀಡಬೇಕು. 2022–23 ಸಾಲಿನಲ್ಲಿ 120 ಅಕ್ರಮ ಮದ್ಯ ಮಾರಾಟ ಪ್ರಕರಣ ದಾಖಲಾಗಿದ್ದು, 136 ಲೀ. ಮದ್ಯ ವಶಪಡಿಸಿಕೊಂಡು ನಾಶಪಡಿಸಲಾಗಿದೆ ಎಂದರು.

ಸರ್ಕಾರದ ನಿಯಮ ಪಾಲಿಸಿ ಮದ್ಯ ಮಾರಾಟಕ್ಕೆ ಇಲಾಖೆಯಿಂದ ಅನುಮತಿ ನೀಡುತ್ತಿದ್ದು, ಇದನ್ನು ಮೀರಿ ಅಕ್ರಮವಾಗಿ ಮದ್ಯ ಮಾರಾಟ ಮಾಡಿದರೆ ಅಂತವರನ್ನು ಗುರುತಿಸಿ ದಂಡ ವಿಧಿಸುವ ಜೊತೆಗೆ ಕಾನೂನು ಕ್ರಮ ಕೈಗೊಳ್ಳುತ್ತೇವೆಂದು ಎಚ್ಚರಿಸಿದರು. ಕೆ.ಆರ್.ನಗರ ವಲಯ ಅಬಕಾರಿ ನಿರೀಕ್ಷಕಿ ಹೆಚ್.ಎಂ. ಶೈಲಜಾ, ಗ್ರೇಡ್–2 ತಹಸೀಲ್ದಾರ್ ಬಾಲಸುಬ್ರಹ್ಮಣ್ಯಂ, ಸಿಬ್ಬಂದಿ ಮಹೇಶ್, ಅಬಕಾರಿ ಉಪ ನಿರೀಕ್ಷಕ ಎಂ.ವಿಜಯ ಕುಮಾರ್, ಪೇದೆಗಳಾದ ಟಿ.ಎಸ್.ರಾಜೇಶ್, ಸಂದೀಪ್, ಶಿವಪ್ಪ, ಬಾನುಸಿ ಇದ್ದರು.

ಟ್ರಾಕ್ಟರ್ ಹರಿದು ಬೈಕ್ ಸವಾರ ಸಾವು



ಹುಲ್ಲಹಳ್ಳಿ, ಜ.31– ಆಯತಪ್ಪಿ ಬೈಕ್‌ನಿಂದ ಕೆಳಗೆ ಬಿದ್ದ ಸವಾರನ ಮೇಲೆ ಟ್ರಾಕ್ಟರ್ ಹರಿದ ಪರಿಣಾಮ ಆತ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಗ್ರಾಮದಲ್ಲಿ ಮಂಗಳವಾರ ನಡೆದಿದೆ.

ಇಲ್ಲಿಗೆ ಸಮೀಪದ ಶಿರಮಳ್ಳಿ ಗ್ರಾಮದ ನಿವಾಸಿ ರಂಗಸ್ವಾಮಿ ಎಂಬುವರ ಪುತ್ರ ದರ್ಶನ್(22) ಸಾವನ್ನಪ್ಪಿದವರು. ಈತ ಹುಲ್ಲಹಳ್ಳಿಯಲ್ಲಿ ಮನೆಗೆ ದಿನಬಳಕೆಯ ವಸ್ತುಗಳನ್ನು ಖರೀದಿಸಿ ಸ್ನೇಹಿತನೊಂದಿಗೆ ಬೈಕ್‌ನಲ್ಲಿ ಶಿರಮಳ್ಳಿಗೆ ತೆರಳುತ್ತಿದ್ದ ವೇಳೆ ದರ್ಶನ್ ಬೈಕ್‌ನಿಂದ ಆಯತಪ್ಪಿ ಕೆಳಗೆ ಬಿದ್ದಿದ್ದಾರೆ. ಈ ವೇಳೆ ಎದುರಿನಿಂದ ಬಂದ ಟ್ರಾಕ್ಟರ್ ದರ್ಶನ್ ಮೇಲೆ ಹರಿದ ಪರಿಣಾಮ ಆತ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಈ ಸಂಬಂಧ ಹುಲ್ಲಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರೈತರ ಸಮಸ್ಯೆ ಬಗೆಹರಿಸಲು ಜೆಡಿಎಸ್ ಬೆಂಬಲಿಸಿ



ಮಲ್ಕುಂಡಿ, ಜ.31– ರೈತರ ಸಮಸ್ಯೆ ಬಗೆಹರಿಸಲು ರಾಜ್ಯದಲ್ಲಿ ಮತ್ತೊಮ್ಮೆ ಜೆಡಿಎಸ್ ಅಧಿಕಾರಕ್ಕೆ ಬರಬೇಕಿದೆ ಎಂದು ನಂಜನಗೂಡು ವಿಧಾನಸಭಾ ಕ್ಷೇತ್ರದ ಜೆಡಿಎಸ್ ಟಿಕೆಟ್ ಆಕಾಂಕ್ಷಿ ಮಾದೇಶ್ ತಿಳಿಸಿದರು.

ಇಲ್ಲಿನ ಬಸಾಪುರದಲ್ಲಿ ನಡೆದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ರಾಷ್ಟ್ರೀಯ ಪಕ್ಷಗಳ ದುರಾಡಳಿತದಿಂದ ರಾಜ್ಯದ ಜನರು ಬೇಸತ್ತಿದ್ದಾರೆ. ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ತಮ್ಮ ಅಧಿಕಾರವಧಿಯಲ್ಲಿ ಉತ್ತಮ ಆಡಳಿತ ನೀಡಿ, ರೈತರ ಸಾಲ ಮನ್ನಾ ಮಾಡುವ ಮೂಲಕ ರೈತಪರ ಕೆಲಸ ಮಾಡಿದ್ದಾರೆ. ಈಗಿನ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ರೈತ ವಿರೋಧಿ ಆಡಳಿತ ನಡೆಸುತ್ತಿದ್ದು, ದಿನಬಳಕೆ ವಸ್ತುಗಳ ಬೆಲೆ ಏರಿಕೆ ಮಾಡಿ ಜನತೆಯ ಜೀವದ ಜೊತೆ ಚೆಲ್ಲಾಟವಾಡುತ್ತಿವೆ. ಮುಂಬರುವ ಚುನಾವಣೆಯಲ್ಲಿ ಜೆಡಿಎಸ್ ಅಧಿಕಾರಕ್ಕೆ ಬಂದು ಮತ್ತೊಮ್ಮೆ ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿ ರೈತರ ಹಿತ ಕಾಯಲಿದ್ದಾರೆ ಎಂದರು. ಈ ವೇಳೆ ತಾಪಂ ಮಾಜಿ ಸದಸ್ಯ ಸುರೇಶ್, ಮುಖಂಡ ಗಿರೀಶ್ ಸೇರಿದಂತೆ ಇತರರಿದ್ದರು.

ಮುಂಬರುವ ಚುನಾವಣೆಯಲ್ಲಿ ಬಿಜೆಪಿಗೆ 150ಕ್ಕೂ ಹೆಚ್ಚು ಸ್ಥಾನ

ಜಿಲ್ಲಾ ಕಾರ್ಯಕಾರಿಣಿ ಸದಸ್ಯ ಕರೋಹಟ್ಟಿ ಮಹದೇವಯ್ಯ ವಿಶ್ವಾಸ



ತಿ.ನರಸೀಪುರ, ಜ.31– ಮುಂಬರುವ ಚುನಾವಣೆಯಲ್ಲಿ ಬಿಜೆಪಿ 150ಕ್ಕೂ ಹೆಚ್ಚು ಸ್ಥಾನಗಳಿಸಿ ಮತ್ತೊಮ್ಮೆ ಅಧಿಕಾರ ಹಿಡಿಯಲಿದೆ ಎಂದು ಜಿಲ್ಲಾ ಕಾರ್ಯಕಾರಿಣಿ ಸದಸ್ಯ ಕರೋಹಟ್ಟಿ ಮಹದೇವಯ್ಯ ವಿಶ್ವಾಸ ವ್ಯಕ್ತಪಡಿಸಿದರು.

ತಾಲೂಕಿನ ಕರೋಹಟ್ಟಿ ಗ್ರಾಮದಲ್ಲಿ ನಡೆದ ಬಿಜೆಪಿ ವಿಜಯ ಸಂಕಲ್ಪ ಅಭಿಯಾನ ಹಾಗೂ ಗೋಡೆ ಬರಹ ಅಭಿಯಾನದಲ್ಲಿ ಮಾತನಾಡಿದ ಅವರು, ಬಿಜೆಪಿ ಪಕ್ಷ ಉತ್ತರ ಪ್ರದೇಶ, ಗುಜರಾತ್ ಚುನಾವಣೆಯಲ್ಲಿ ದೊಡ್ಡ ಯಶಸ್ಸು ಗಳಿಸಿದೆ. ಹಾಗಾಗಿ ಕರ್ನಾಟಕದಲ್ಲೂ ಯಶಸ್ಸು ಗಳಿಸಿ ಮತ್ತೊಮ್ಮೆ ಅಧಿಕಾರ ಹಿಡಿಯಬೇಕೆಂಬ ನಿಟ್ಟಿನಲ್ಲಿ ಪಕ್ಷದ ಹಿರಿಯರ ನಿರ್ದೇಶನದಂತೆ ರಾಜ್ಯದ 58,150 ಬೂತ್‌ಗಳಲ್ಲಿ ಏಕಕಾಲದಲ್ಲಿ ಬೂತ್ ವಿಜಯ ಸಂಕಲ್ಪ ಯಾತ್ರೆ ಹಮ್ಮಿಕೊಳ್ಳಲಾಗಿದೆ. ಕ್ಷೇತ್ರದಲ್ಲಿ ಬಿಜೆಪಿ ಗೆಲುವಿಗೆ ಬೇಕಾದ ವಾತಾವರಣ ನಿರ್ಮಿಸಲು ಕಾರ್ಯಕರ್ತರು ಕಂಕಣ ಬದ್ಧರಾಗಿದ್ದೇವೆ ಎಂದರು.

ಮಾಜಿ ಶಾಸಕ ಡಾ.ಎನ್.ಎಲ್. ಭಾರತೀ ಶಂಕರ್ ಮಾತನಾಡಿ, ರಾಜ್ಯದಲ್ಲಿ ಮೇ ತಿಂಗಳಲ್ಲಿ ವಿಧಾನಸಭಾ ಚುನಾವಣೆ ನಡೆಯುವ ಹಿನ್ನೆಲೆಯಲ್ಲಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಬೂತ್ ವಿಜಯ ಅಭಿಯಾನಕ್ಕೆ ಕರೆ ಕೊಟ್ಟಿದ್ದಾರೆ. ಪ್ರತಿ ಬೂತ್‌ನಲ್ಲಿ ಪಕ್ಷದ ಸದಸ್ಯರ ವಾಟ್ಸಪ್ ಗ್ರೂಪ್ ರಚಿಸಿ, ಪೇಜ್ ಪ್ರಮುಖ್ ಹಾಗೂ ಬೂತ್ ಸಮಿತಿ ಸದಸ್ಯರು, ಬಿಎಲ್ಎ 2 ಕಾರ್ಯದರ್ಶಿಗಳನ್ನೊಳಗೊಂಡಂತೆ ಸಮಿತಿ ಪರಿಶೀಲಿಸುವಂತೆ ಸೂಚನೆ ನೀಡಲಾಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಾಧನೆಗಳ ವಿವರವುಳ್ಳ ಕರಪತ್ರವನ್ನು ಪ್ರತಿ ಮನೆ ಮನೆಗೆ ತಲುಪಿಸುವಂತೆ ಪಕ್ಷಕರೆ ಕೊಟ್ಟ ಹಿನ್ನೆಲೆಯಲ್ಲಿ ಕಾರ್ಯಕರ್ತರು, ಅಧ್ಯಕ್ಷರು ಬೂತ್ ವಿಜಯ ಅಭಿಯಾನದ ಮೂಲಕ ಕಾರ್ಯ ಪ್ರವೃತ್ತರಾಗಿದ್ದಾರೆ. ಈಗಾಗಲೇ 100ಕ್ಕೂ ಹೆಚ್ಚು ಬೂತ್‌ಗಳಲ್ಲಿ ಅಭಿಯಾನ ಯಶಸ್ವಿಯಾಗಿದೆ ಎಂದರು.

ಜಿಲ್ಲಾ ಕಾರ್ಯದರ್ಶಿ ಕೆ.ಎಸ್.ಬಸವರಾಜು, ಹಿಂದುಳಿದ ವರ್ಗಗಳ ಅಧ್ಯಕ್ಷ ಗೂಳಿ ಮಹೇಶ್, ಬೂತ್ ಅಧ್ಯಕ್ಷ ಮಲ್ಲಿಕಾರ್ಜುನ, ಕಾರ್ಯದರ್ಶಿ ಕಿಟ್ಟಿ ಮುಖಂಡರಾದ ರಮೇಶ್, ಸಿದ್ದರಾಜು, ರಾಜಪ್ಪ, ನಂದನ್ ಕುಮಾರ್, ಸಿ.ಬಿ.ಹುಂಡಿ ಸಿದ್ದು, ಮಂಜು ಇನ್ನಿತರರಿದ್ದರು.

ನಿಮ್ಮ ಅಭಿಮಾನದ ಶ್ರೀರಕ್ಷೆ ನಿರಂತರವಾಗಿರಲಿ

ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷ ಜಿ.ಡಿ.ಹರೀಶ್‌ಗೌಡ

ಹುಣಸೂರು, ಜ.31– ನಿಮ್ಮ ಅಭಿಮಾನದ ಶ್ರೀರಕ್ಷೆ ಹೀಗೆ ನಿರಂತರವಾಗಿರಲಿ ಎಂದು ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷರೂ ಆದ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷ ಜಿ.ಡಿ.ಹರೀಶ್‌ಗೌಡ, ಜೆಡಿಎಸ್ ಕಾರ್ಯಕರ್ತರು ಮತ್ತು ಅಭಿಮಾನಿಗಳಿಗೆ ನಮಸ್ಕರಿಸಿದರು.

36ನೇ ಜನ್ಮದಿನದ ಅಂಗವಾಗಿ ಮಂಗಳವಾರ ಮುಂಜಾನೆ ಶ್ರೀಚಾಮುಂಡೇಶ್ವರಿಗೆ ಪ್ರಥಮ ಪೂಜೆ ಸಲ್ಲಿಸಿ, ನಂತರ ಮೈಸೂರಿನ ವಿಜಯನಗರದ ತಮ್ಮ ನಿವಾಸದಲ್ಲಿ 12 ಗಂಟೆವರೆಗೂ ಅಭಿಮಾನಿಗಳ ಹೂಮಾಲೆಗೆ ಕೊರಳೊಡ್ಡಿ ತಂದಿದ್ದ ಕೇಕ್ ಕತ್ತರಿಸಿ ಸಂಭ್ರಮಿಸುವ ಮೂಲಕ ಹರೀಶ್‌ಗೌಡರು ಹುಟ್ಟುಹಬ್ಬ ಆಚರಿಸಿಕೊಂಡರು.

ನಂತರ ಹುಣಸೂರಿಗೆ ಆಗಮಿಸುವ ಮಾರ್ಗಮಧ್ಯೆ ಮನುಗನಹಳ್ಳಿ, ಬಿಳಿಕೆರೆ, ಕೊಳಘಟ್ಟ, ಕುಪ್ಪೆ ಹಾಗೂ ಬನ್ನಿಕುಪ್ಪೆಯಲ್ಲಿ ಅಭಿಮಾನಿಗಳ ಅದ್ದೂರಿ ಸ್ವಾಗತಕ್ಕೆ ತಲೆ ಬಾಗಿದ ಜಿ.ಡಿ.ಹರೀಶ್‌ಗೌಡರು, ಸಂಜೆ 4.45ಕ್ಕೆ ಹೊರಬಂದಾಗ ಅಭಿಮಾನಿಗಳ ಜೈಕಾರ ಮುಗಿಲು ಮುಟ್ಟಿತ್ತು. ಅಲ್ಲದೇ ಕ್ರೇನ್ ಮೂಲಕ ಅಭಿಮಾನಿಗಳು ಹರೀಶ್‌ಗೌಡ ಸೇರಿದಂತೆ ರಂಜಿತಾ ಚಿಕ್ಕಮಾದು, ಸುರೇಂದ್ರ, ಫಜಲ್ ಹಜತ್ ಜಾನ್ ಅವರಿಗೆ ಬೃಹತ್ ಪೈನಾಪಲ್ ಹಣ್ಣಿನ ಹಾರ ಹಾಕಿ, ಹೂಮಳೆ ಸುರಿಸಿ ಸಂಭ್ರಮಿಸಿದರು.

ನಗರದ ಮಂಜುನಾಥ ಬಡಾವಣೆ ಆಂಜನೇಯ ಸ್ವಾಮಿಗೆ ಪೂಜೆ ಸಲ್ಲಿಸಿದ ಹರೀಶ್‌ಗೌಡರು, ನಂತರ ನವೀಕರಣಗೊಂಡಿದ್ದ ಚಾಮರಾಜ ಜಿಲ್ಲಾ ಸಹಕಾರ ಬ್ಯಾಂಕ್ ಉದ್ಘಾಟಿಸಿದರು. ನಂತರ ತಮ್ಮ ನಿವಾಸದಲ್ಲಿ ಬೆಳಗ್ಗೆನಿಂದ ಕಾದು ಕುಳಿತಿದ್ದ ಸಾವಿರಾರು ಅಭಿಮಾನಿಗಳು ಮತ್ತು ಜೆಡಿಎಸ್ ಕಾರ್ಯಕರ್ತರ ಭೇಟಿ ಮಾಡಿದರು. ಇದೇ ವೇಳೆ ಸಾವಿರಾರು ಅಭಿಮಾನಿಗಳು ಕೇಕ್ ಕತ್ತರಿಸಿ ಸಂಭ್ರಮಿಸಿದರು. ನಂತರ ನಗರದ ಪೌರಕಾರ್ಮಿಕರ ಕಾಲೋನಿಯಲ್ಲಿ ನೂರಾರು ಕಾರ್ಮಿಕರಿಗೆ ಹೊಸವಸ್ತ್ರ ವಿತರಿಸಿದರು.



ಹುಣಸೂರು ಹೆಬ್ಬಾಗಿಲಿನ ದಿ.ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಪ್ರತಿಮೆಗೆ ಮಾಲಾರ್ಪಣೆ ಮಾಡಿ

ಮೈಸೂರು ಚಳಿಗಾಲದ ರೇಸುಗಳು

12ನೇ ದಿನ, ಬುಧವಾರ 1-2-2023

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ)

I. ಇಂಡಿ ಪ್ಲೇಟ್–1400 ಮೀ. ರೇಟೆಡ್ 00 ರಿಂದ 25. ಮ.2.00ಕ್ಕೆ
1. ಶಿವಾಲಿಕ್ ಧನುಷ್ 2. ನಾಟಿ ಸೊ ನಾಟಿ 3. ಗ್ರಾಂಡ್ ಚೆವಲಿಯರ್

II. ಸಿಯಾಚಿನ್ ಪ್ಲೇಟ್–2000 ಮೀ. ರೇಟೆಡ್ 40 ರಿಂದ 65. ಮ.2.30ಕ್ಕೆ
1. ಕ್ರೆ ಸೆಂಡೋ 2. ಥಿಯಾಮಾರಿಯಾ 3. ದಿ ಅಖಂಡಾ

III. ಸ್ಟಾರ್ ಏಂಜಲ್ ಪ್ಲೇಟ್ – 1400 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1. ವೆನೆಜುಲ್ಲಾ 2. ಔರ್‌ಲಿಯಾ 3. NRI ಪ್ಲಾನ್

IV. ಆಂದೋಲನಾ ಟ್ರೋಫಿ– 1600 ಮೀ. ರೇಟೆಡ್ 20 ರಿಂದ 45. ಮ.3.30ಕ್ಕೆ
1. ಗ್ರೇಟ್ ಹೋಪ್ 2. ಸನ್‌ಲೈಟ್ ಸ್ಟ್ರಾಮ್ 3. ಡಿಲಾರ್ಡ್

V. ಮೈಸೂರ್ ಸಿಟಿ ಗೋಲ್ಡ್ ಕಪ್ –1400 ಮೀ. 3 ವರ್ಷದ (ಟರ್ಮ್ಸ್). ಮ.4.00ಕ್ಕೆ
1. ಗಿಲ್‌ಡೆಡ್ ಬಟರ್‌ಫ್ಲೈ 2. ಮೂನ್‌ಲೈಟ್ ಕ್ವೀನ್ 3. ಅನ್‌ಕುಶ್

VI. ಅವಲಾಂಚ್ ಸ್ಟಾರ್ ಪ್ಲೇಟ್–1400 ಮೀ. ರೇಟೆಡ್ 60 ಮತ್ತು ಮೇಲ್ಪಟ್ಟು ಸಂ.4.30ಕ್ಕೆ
1. ಎಲ್‌ಯುಸೀವ್ ಗರ್ಲ್ 2. ಸೌಂಡ್ ಆಫ್ ಕ್ಯಾನನ್ಸ್ 3. ಜಮಿನಿ

VII. ಯಮುನಾ ಪ್ಲೇಟ್– 1200 ಮೀ. ರೇಟೆಡ್ 40 ರಿಂದ 65. ಸಂ.5.00ಕ್ಕೆ
1. ಪರ್‌ಫೆಕ್ಟ್ ಪರ್‌ಫೆಕ್ಟ್ ಟೊ 2. ಕಂಟ್ರೀಸ್ ಲೈಟ್ 3. ಡಿ ಜಾನಿ

ದಿನದ ಅತ್ಯುತ್ತಮ	: ಗಿಲ್‌ಡೆಡ್ ಬಟರ್‌ಫ್ಲೈ
ಡಬ್ಬಲ್	: ಗ್ರೇಟ್ ಹೋಪ್, ಎಲ್‌ಯುಸೀವ್ ಗರ್ಲ್
ಜಾಕ್‌ಪಾಟ್	: 3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್	: 4, 5, 6 ಮತ್ತು 7
I ಟ್ರಿಬಲ್	: 2, 3 ಮತ್ತು 4
II ಟ್ರಿಬಲ್	: 5, 6 ಮತ್ತು 7
ಎಕ್ಸಕ್ಟ್	: 1 ರಿಂದ 7

ಟಿಪ್‌ಸ್ಟರ್ ಪಿಜಿಸಿ

ಶತಾಯುಷಿ ತಮ್ಮಯ್ಯಶೆಟ್ಟಿ ನಿಧನ



ಬೆಟ್ಟದಪುರ, ಜ.31– ಗ್ರಾಮದ ನಿವಾಸಿ, ಕೊಡುಗೈ ದಾನಿ ಎಂದೇ ಪ್ರಶಸ್ತಿ ಪಡೆದಿದ್ದ ಶತಾಯುಷಿ ತಮ್ಮಯ್ಯಶೆಟ್ಟಿ(100) ಮಂಗಳವಾರ ಬೆಳಗ್ಗೆ ನಿಧನರಾದರು.

ಮೃತರು ಇಬ್ಬರು ಪುತ್ರಿಯರು, ಐವರು ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಬೆಳಗ್ಗೆ ವೀರಶೈವ ಲಿಂಗಾಯತ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

9ನೇ ವರ್ಷದ ಸವಿನೆನಪು



ಶ್ರೀ ಬರಕ್ಕಿ ಪಿ.ಮಂಜುನಾಥ್

ಸೂರ್ಯನಂತೆ ಮಿಂಚಿ ಹೋದ ನೀವು ಇಂದಿಗೆ ನಮ್ಮನ್ನಗಲಿ ಒಂಭತ್ತು ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖ ತಪ್ತರು : ಪತ್ನಿ ಸುಚಿತ್ರ, ತಂದೆ ಬರಕ್ಕಿ ಪುಟ್ಟಸ್ವಾಮಿಗೌಡರು, ತಾಯಿ : ಜವರಮ್ಮ, ಅಣ್ಣಂದಿರು, ತಮ್ಮಂದಿರು, ಅಕ್ಕಂದಿರು, ತಂಗಿಯರು, ಮಕ್ಕಳು, ಮೊಮ್ಮಕ್ಕಳು ಹಾಗೂ ಬರಕ್ಕಿ ಕುಟುಂಬವರ್ಗದವರು, ಕೆ.ಜಿ.ಕೊಪ್ಪಲು, ಮೈಸೂರು.

ಡಾ. ಸುಶ್ರುತ್ ಹೆಚ್.ವಿ.ರವರಿಗೆ ಆತ್ಮೀಯ ಸ್ವಾಗತ



ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ 150 ದಿನಗಳಲ್ಲಿ 3,570 ಕಿ.ಮೀ. ಅಂತರವನ್ನು ಭಾರತ್ ಜೋಡೋ ಪಾದಯಾತ್ರೆಯಲ್ಲಿ ಶ್ರೀ ರಾಹುಲ್ ಗಾಂಧಿಯವರೊಂದಿಗೆ ಭಾಗವಹಿಸಿ ಯಶಸ್ವಿಯಾಗಿ ಪಾದಯಾತ್ರೆ ಮುಗಿಸಿ ಮೈಸೂರಿಗೆ ಆಗಮಿಸುತ್ತಿರುವ ಗೋಪಾಲಗೌಡ ಆಸ್ಪತ್ರೆಯ ನ್ಯೂರೊ ಝೋನ್ ನ ಮುಖ್ಯಸ್ಥರಾದ

ಡಾ. ಸುಶ್ರುತ್ ಹೆಚ್.ವಿ.ರವರಿಗೆ

ಆತ್ಮೀಯ ಸುಸ್ವಾಗತ

ಸ್ವಾಗತ ಬಯಸುವವರು : ಸ್ನೇಹಿತರು, ಹಿತೈಷಿಗಳು ಹಾಗೂ ಅಭಿಮಾನಿಗಳು



ಶುಭಕೋರುವವರು: ಅಮರ ಸ್ನೇಹಿ ಸ್ವಾಮಿ (ಎಂ ರಾಜೇಶ್) ಅಭಿಮಾನಿಬಳಗ ಹೊಸಕಾಮನಕೊಪ್ಪಲು ಹಾಗೂ ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರು ಇಲವಾಲ ಹೋಬಳಿ ಮೈಸೂರು ತಾ||